ಜನಶಕ್ತಿ




ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com


ಸಂಪುಟ 6 ಸಂಚಿಕೆ 35
ಆಗಸ್ಟ್ 26, 2012

ಪುಟ 16 ರೂ. 5/-

ಅಸ್ಸಾಂ : ಜನಾಂಗೀಯ ಘರ್ಷಣೆ ಕೋಮುಗಲಭೆಗೆ ದುರ್ಬಳಕೆ







ಒಲಂಪಿಕ್ಸ್ ಫಲಿತಾಂಶ : ಭಾರತ ಯಾಕೆ ಹಿಂದೆ ಹಿಂದೆ ?

ಮಹಿಳಾ ಆಯೋಗಕ್ಕೆ ಇಂಥಾ ಅಧ್ಯಕ್ಷೆ ಬೇಕೆ ?



ಉತ್ತರ ಕರ್ನಾಟಕದ ಹಿಂದುಳಿದಿರುವಿಕೆ ಮತ್ತು ಯುವಜನ



ಮಮತಾ ದೀದಿ ನೆತ್ತಿಗೇರಿದೆ ಮದ !!

ಆಹಾ 'ಬರ'ದ ಕೊಯ್ಲು

ಅಸ್ಸಾಂ ಹಿಂಸಾಚಾರ

ಸಿಪಿಐ(ಎಂ) ನಿಯೋಗದ ಭೇಟಿ

ಅಸ್ಸಾಂ ದೇಶಾದ್ಯಂತ ಮಾತ್ರವಲ್ಲ, ಜಗತ್ತಿನಲ್ಲೇ ಸುದ್ದಿ ಮಾಡುತ್ತಿದೆ. ಬಹುಸಂಸ್ಕೃತಿ-ಬಹುಧರ್ಮೀಯರು ಹಾಗೂ ವೈವಿಧ್ಯಮಯ ಭಾಷೆ-ಸಂಸ್ಕೃತಿ ಹಾಗೂ ಜಾನಪದ ಪರಂಪರೆಯನ್ನು ಹೊಂದಿರುವ ಈ ರಾಜ್ಯ ಮತ್ತೊಮ್ಮೆ ಹೊತ್ತಿ ಉರಿಯುತ್ತಿದೆ. ರಾಜ್ಯದ ಬೋಡೋ ಪ್ರದೇಶದಲ್ಲಿ ಈಗ ಹಿಂಸಾಚಾರ ತಾಂಡವಾಡುತ್ತಿದೆ. ಇದಕ್ಕೆ ಮುಖ್ಯ ಕಾರಣ ಆದಿವಾಸಿಗಳಾಗಿರುವ ಬೋಡೋ ಮತ್ತು ಮುಸ್ಲಿಂ ಅಲ್ಪಸಂಖ್ಯಾತರ ನಡುವಿನ ಸಂಘರ್ಷ. ಜುಲೈ 19ರಿಂದೀಚೆಗೆ ಕೊಕ್ರಾಜಾರ್ ಮತ್ತು ಚಿರಾಂಗ್ ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಟ 70 ಮಂದಿಯನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಆಗಸ್ಟ್ 1ರ ವರದಿಯಂತೆ ನೂರಾರು ಮಂದಿ ಕಾಣೆಯಾಗಿದ್ದಾರೆ. ನಾಲ್ಕು ಲಕ್ಷಕ್ಕೂ ಅಧಿಕ ಮಂದಿ, 274 ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದಾರೆ. ಕೊಕ್ರಾಜಾರ್, ಚಿರಾಂಗ್, ಧುಬ್ರಿ ಮತ್ತು ಬಾಂಗ್ಯಾಂಗ್ ಈ ನಾಲ್ಕು ಜಿಲ್ಲೆಗಳ 244 ಗ್ರಾಮಗಳು ಹಿಂಸಾಚಾರಕ್ಕೆ ತುತ್ತಾಗಿವೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಐದು ಸಾವಿರ ಮನೆಗಳನ್ನು ಸುಟ್ಟು ಹಾಕಿದ್ದು, ಒಟ್ಟು 45 ಸಾವಿರ ಕುಟುಂಬಗಳು ನಿರ್ವಸಿತವಾಗಿವೆ.

ಕೆಲಕಾಲದಿಂದ ಬೋಡೋ ಪ್ರದೇಶದಲ್ಲಿ ವಾಸವಿರುವ ವಿವಿಧ ಸಮುದಾಯಗಳ ನಡುವೆ ಜನಾಂಗೀಯ ಸಂಘರ್ಷ ಹೊಗೆಯಾಡುತ್ತಿತ್ತು. ಬೋಡೋ ಬುಡಕಟ್ಟು ಜನರು ಪ್ರತ್ಯೇಕ ಬೋಡೋ ರಾಜ್ಯಕ್ಕೆ ಪಟ್ಟು ಹಿಡಿದರೆ, ರಾಜ್‌ಬೊಂಗ್ಶಿ ಜನರು ಕಾಮ್ತಾಪುರ ರಾಜ್ಯಕ್ಕೆ ಒತ್ತಾಯಿಸಿದ್ದರು. ಈ ಬೇಡಿಕೆಗಳ ಮಧ್ಯೆ ಕೋಮುವಾದಿಗಳು ಮತ್ತು ಮೂಲಭೂತವಾದಿ ಶಕ್ತಿಗಳು ಸಹ ಸಕ್ರಿಯವಾಗಿದ್ದವು. ಬೋಡೋಯೇತರ ಸಂಘಟನೆಗಳು ಬೋಡೋ ರಾಜ್ಯದ ಪ್ರಸ್ತಾಪವನ್ನು ವಿರೋಧಿಸುತ್ತಿದ್ದರು. ಹೀಗೆ ಬಹುದಿನಗಳಿಂದಲೂ ಇಲ್ಲಿಯ ಬೇರೆ ಬೇರೆ ಜನಸಮೂಹಗಳ ನಡುವೆ ಅಪನಂಬಿಕೆ, ಅವಿಶ್ವಾಸ, ಮತ್ತು ವೈಮನಸ್ಸು ಬೆಳೆದು ಬಂದಿತ್ತು.

ಘಟನೆಗೆ ಕಾರಣ

ಜುಲೈ 6ರಂದು ಒಬ್ಬ ಬಡ ಮುಸ್ಲಿಂ ರೈತ ಸಶಸ್ತ್ರ ಮುಸುಕುಧಾರಿ ದುಷ್ಕರ್ಮಿಯೊಬ್ಬನ ಗುಂಡಿನ ದಾಳಿಗೆ ಬಲಿಯಾಗುತ್ತಾನೆ. ಕೊಕ್ರಾಜಾರ್‌ನ ದೊಟೊಮಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆಯುತ್ತದೆ. ಈ ಘಟನೆಯಿಂದ ಬಿಗುವಿನ ಪರಿಸ್ಥಿತಿ ಇರುವಾಗಲೇ ಜುಲೈ 19ರಂದು ಅಲ್ಪಸಂಖ್ಯಾತ ವಿದ್ಯಾರ್ಥಿ ಸಂಘಟನೆಯ ಇಬ್ಬರು ನಾಯಕರ ಮೇಲೆ ದಾಳಿ ನಡೆಯುತ್ತದೆ. ಇದರ ಮರುದಿನವೇ ಬೋಡೋ ವಿಮೋಚನಾ ಟೈಗರ್ ಸಂಘಟನೆಯ ನಾಲ್ಕು ಮಂದಿ ಮಾಜಿ ಕಾರ್ಯಕರ್ತರನ್ನು ಹತ್ಯೆ ಮಾಡಲಾಗುತ್ತದೆ.

ಈ ಎಲ್ಲ ಘಟನೆಗಳು ಹಿಂಸಾಚಾರ, ಸರಣಿ ದಾಳಿಗಳಿಗೆ ದಾರಿ ಮಾಡಿಕೊಡುತ್ತವೆ. ಕೊಕ್ರಾಜಾರ್‌ನ ಒಂದು ಗ್ರಾಮದಲ್ಲಿ ನಡೆದ ಈ ಘಟನೆ ನಾಲ್ಕು ಜಿಲ್ಲೆಗಳಿಗೆ ವ್ಯಾಪಿಸಿ ಕೋಮು ಗಲಭೆಯಾಗಿ ಮಾರ್ಪಡುವ ಭೀತಿ ಉಂಟಾಗಿದೆ.

ಆತಂಕಕಾರಿ ಬೆಳವಣಿಗೆ

ಭದ್ರತಾ ಪಡೆಗಳ ನಿಯೋಜನೆಯಿಂದಾಗಿ ಪರಿಸ್ಥಿತಿಯಲ್ಲಿ ಅಲ್ಪ ಸುಧಾರಣೆ ಕಂಡುಬಂದಿದ್ದರೂ ಕಳೆದ ಕೆಲವು ವಾರಗಳಲ್ಲಿ ನಡೆದಿರುವ ಘಟನೆಗಳು ತೀವ್ರ ಆತಂಕಕಾರಿಯಾಗಿವೆ. ಗಲಭೆಗ್ರಸ್ತ ಪ್ರದೇಶದ ಜನರು ಪರಿಹಾರ ಕೇಂದ್ರಗಳಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಆಹಾರ ಮತ್ತು ನೀರಿನ ಕೊರತೆಯ ಮಧ್ಯೆಯೂ ಅನಿವಾರ್ಯವಾಗಿ ಪರಿಹಾರ ಶಿಬಿರಗಳಲ್ಲಿ ದಿನದೂಡುತ್ತಿದ್ದಾರೆ.

ಗಲಭೆ ಪೀಡಿತ ನಾಲ್ಕು ಜಿಲ್ಲೆಗಳಲ್ಲಿ ಸಹಜಸ್ಥಿತಿ ನೆಲೆಸುವಂತೆ ಮಾಡುವುದು, ಶಾಂತಿ ಮತ್ತು ಸೌಹಾರ್ದವನ್ನು ಪುನರ್‌ಸ್ಥಾಪಿಸುವುದು ಈಗ ನಾಗರಿಕ ಸಮಾಜದ ಮುಂದಿರುವ ದೊಡ್ಡ ಸವಾಲಾಗಿದೆ. ಘಾಸಿಗೊಂಡು ಜರ್ಜರಿತವಾಗಿರುವ ಮುಸ್ಲಿಮರು ಮತ್ತು ಬೋಡೋ ಜನರನ್ನು ಸಂತೈಸಿ ಬಾಂಧವ್ಯದ ಬೆಸುಗೆ ಹಾಕುವ ಕೆಲಸವೂ ಆಗಬೇಕಾಗಿದೆ.

2008ರ ಅಕ್ಟೋಬರ್‌ನಲ್ಲಿ ಇಂತಹದ್ದೇ ಕೋಮು ಗಲಭೆ ಉದಲ್‌ಗುರಿಯಲ್ಲಿ ನಡೆದಿತ್ತು. ಇದರಿಂದ ಪಾಠ ಕಲಿಯಲು ಜಿಲ್ಲಾಡಳಿತ ವಿಫಲವಾಗಿತ್ತು. ಒಂದು ವೇಳೆ, ಆರಂಭದಲ್ಲೇ ಸೂಕ್ತ ಮುನ್ನೆಚ್ಚರಿಕೆಯನ್ನು ತಾಳುತ್ತಿದ್ದರೆ ಪರಿಸ್ಥಿತಿ ಕೈಮೀರುತ್ತಿರಲಿಲ್ಲ. ಈ ಹಂತಕ್ಕೆ ತಲುಪಲು ಸಾಧ್ಯವೇ ಇರುತ್ತಿರಲಿಲ್ಲ.

ಈ ಎಲ್ಲ ಕೃತ್ಯಗಳಿಗೆ ಬಾಂಗ್ಲಾದ ವಲಸಿಗರೇ ಕಾರಣ ಎಂದು ಬಿಜೆಪಿ ಮತ್ತು ಅದರ ಕೇಸರಿ ಪಡೆಗಳು ದೂಷಿಸಿವೆ. ಅಸ್ಸಾಂನ ಕಾಂಗ್ರೆಸ್ ಸರ್ಕಾರದ ಮೈತ್ರಿ ಪಕ್ಷವಾಗಿರುವ ಬೋಡೋ ಪ್ರಜಾರಂಗದ ಹೇಳಿಕೆಯಲ್ಲೂ ಅದೇ ಸಾಮ್ಯತೆ ಕಂಡುಬಂದಿದೆ. ಬಾಂಗ್ಲಾದ ಗಡಿಯಿಂದ ಕಾನೂನುಬಾಹಿರವಾಗಿ ದೇಶಕ್ಕೆ ನುಸುಳಿ ಬಂದ ತಂಡವೊಂದು ಹಿಂಸಾಚಾರಕ್ಕೆ ಕಾರಣ ಎಂದು ಪ್ರಜಾರಂಗದ ನಾಯಕ ಹಗ್ರಾಮ ಮಡಿಲ ಬೋಡೋ ಹೇಳಿದ್ದಾರೆ.

ಅಸ್ಸಾಂನಲ್ಲಿ ನಡೆದ ಸರಣಿ ಘಟನೆಗಳು ದೇಶಕ್ಕೆ ಕಪ್ಪುಚುಕ್ಕೆ ಎಂದು ಬಣ್ಣಿಸಿರುವ ಪ್ರಧಾನಿ ಡಾ. ಮನಮೋಹನ್ ಸಿಂಗ್, 300 ಕೋಟಿ ರೂಪಾಯಿಗಳ ಪರಿಹಾರವನ್ನು ನೀಡಿದ್ದಾರೆ.

ಗಲಭೆಗ್ರಸ್ಥ ಪ್ರದೇಶಕ್ಕೆ ಭೇಟಿ ನೀಡಿದ - ಸಿಪಿಐ(ಎಂ) ನಿಯೋಗ

ಲೋಕಸಭೆಯಲ್ಲಿ ಸಿಪಿಐ(ಎಂ) ಸಂಸದೀಯ ನಾಯಕರಾಗಿರುವ ಬಸುದೇವ ಆಚಾರ್ಯ ನೇತೃತ್ವದ ಮೂರು ಸದಸ್ಯರ ಸಿಪಿಐ(ಎಂ) ಸಂಸದರ ನಿಯೋಗ ಜುಲೈ 28ಕ್ಕೆ ಅಸ್ಸಾಂನ ಗಲಭೆಗ್ರಸ್ತ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಭೇಟಿ ನೀಡಿತು. ಬಜುಬನ್ ರಿಯಾಂಗ್ ಮತ್ತು ಸೈದುಲ್ ಹಕ್ ಸಂಸದೀಯ ನಿಯೋಗದ ಇತರ ಸದಸ್ಯರು. ನಿಯೋಗದ ಜತೆ ಸಿಪಿಐ(ಎಂ) ಅಸ್ಸಾಂ ರಾಜ್ಯ ಕಾರ್ಯದರ್ಶಿ ಉದ್ಧಬ್ ಬರ್ಮನ್ ಮತ್ತು ಇತರ ಇಬ್ಬರು ಶಾಸಕರಾದ ಪೂರ್ಣ ಬೊರೊ ಮತ್ತು ಅನಂತ ದೇಕ ಜೊತೆಗಿದ್ದರು. ಇವರಲ್ಲದೆ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮನೋರಂಜನ್ ತಾಲೂಕ್‌ದಾರ್ ಮತ್ತು ಪಜ್ಲೂರ್ ರೆಹಮಾನ್ ಕೂಡ ನಿಯೋಗದ ಜೊತೆ ತೆರಳಿ ಪರಿಸ್ಥಿತಿಯ ಅವಲೋಕನ ನಡೆಸಿದರು.

ಎಲ್ಲ ಸಮುದಾಯದ ಸಂತ್ರಸ್ತರು, ಮುಖಂಡರನ್ನು ಭೇಟಿ ಮಾಡಿದ ನಿಯೋಗ, ಪರಿಹಾರ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ಸಂತ್ರಸ್ತರ ಜೊತೆ ಆತ್ಮೀಯ ಸಂವಾದ ನಡೆಸಿದರು. ಗಲಭೆಯಲ್ಲಿ ತೀವ್ರ ಹಾನಿಗೀಡಾದ ಬಂಗಾಲ್‌ದೂಬಾ ಗ್ರಾಮಕ್ಕೂ ಭೇಟಿ ನೀಡಿದ ನಿಯೋಗ, ಅಲ್ಲಿನ ಶಾಲೆಯಲ್ಲಿ ಆಶ್ರಯ ಪಡೆದುಕೊಂಡಿರುವ ಮೂರು ಸಾವಿರಕ್ಕೂ ಅಧಿಕ ಬೋಡೊ ಮಂದಿಯೊಂದಿಗೆ ಮಾತುಕತೆ ನಡೆಸಿದರು.

ಬಳಿಕ, ಬಿಜಿನಿ ಗ್ರಾಮದಲ್ಲಿರುವ ಪರಿಹಾರ ಶಿಬಿರಕ್ಕೆ ತೆರಳಿದ ನಿಯೋಗ, ಅಲ್ಲಿ ರಕ್ಷಣೆ ಪಡೆದಿರುವ 900ಕ್ಕೂ ಅಧಿಕ ಮುಸ್ಲಿಮರ ಜೊತೆ ಮಾತುಕತೆ ನಡೆಸಿ ಸಾಂತ್ವನ ಹೇಳಿತು.

– ಸಿಮ್ಮಿಸಿ

'ಗಣಶಕ್ತಿ' ಮೇಲೆ ನಿರಂತರ ದಾಳಿ – ಸಹಾಯ ನಿಧಿಗೆ ಮನವಿ

ಪಶ್ಚಿಮ ಬಂಗಾಳದ ಮಾಧ್ಯಮ ರಂಗದಲ್ಲಿ ಎಡ ವಿರೋಧಿ -ಬಂಡವಾಳಶಾಹಿಗಳ ಪರವಾದ ಪತ್ರಿಕೆಗಳದ್ದೇ ಪಾರುಪತ್ಯ. ಈ ಬೃಹತ್ ಪ್ರಭಾವಳಿಯಲ್ಲಿ ಸಮರ್ಥ ಪರ್ಯಾಯ ಹಾಗೂ ಜನಪರ ಧ್ವನಿಯಾಗಿ ಮಿನುಗುವ ನಕ್ಷತ್ರವಾಗಿರುವುದು ಗಣಶಕ್ತಿ. ದುಡಿಯುವ ವರ್ಗದ ಪರವಾಗಿ, ಶೋಷಿತ ಜನರ ಪರವಾಗಿ ಪ್ರಬಲ ಧ್ವನಿ ಎತ್ತುವ ಮೂಲಕ ಗಣಶಕ್ತಿ ದಶಕಗಳಿಂದ ವಿಶಾಲ ಓದುಗ ಸಮುದಾಯವನ್ನು ಹೊಂದಿದೆ.

ರಾಜ್ಯದಲ್ಲಿ ಬದಲಾದ ಸನ್ನಿವೇಶದಲ್ಲಿ ಗಣಶಕ್ತಿಯ ಪಾತ್ರ ಮಹತ್ವದ್ದು. ಬಹುತೇಕ ಎಲ್ಲ ಇತರ ಮಾಧ್ಯಮಗಳು ಎಡ ಶಕ್ತಿಗಳ ವಿರುದ್ಧ ಕಪೋಲ ಕಲ್ಪಿತ ಸುದ್ದಿಗಳು ಹಾಗೂ ಅಪಪ್ರಚಾರದಲ್ಲಿ ತೊಡಗಿದ್ದು, ಆಳುವ ವರ್ಗದ ಓಲೈಕೆಯಲ್ಲಿ ತೊಡಗಿದ್ದು ಹಳೇ ಸುದ್ದಿ.

ಇದರ ಜೊತೆಗೆ ಕಳೆದ 14 ತಿಂಗಳಿನಿಂದ ಗಣಶಕ್ತಿ ಮೇಲೆ ದಾಳಿಗಳ ಮಹಾಪೂರವೇ ನಡೆದಿದೆ. ನಗರದಿಂದ ಗ್ರಾಮೀಣ ಪ್ರದೇಶದ ವರೆಗೆ ಈ ಪತ್ರಿಕೆ ಮೇಲೆ ವಿವಿಧ ರೀತಿಯಲ್ಲಿ ಹಲ್ಲೆಗಳು, ದಾಳಿ-ದೌರ್ಜನ್ಯಗಳು ನಡೆಯುತ್ತಲೇ ಇವೆ.

ಚುನಾವಣಾ ಫಲಿತಾಂಶ ಹೊರಬಿದ್ದ ದಿನದಿಂದ ಪತ್ರಿಕೆಯ ಪ್ರಸಾರವನ್ನು ಕಡಿತಗೊಳಿಸಲು ವಿರೋಧಿಗಳು ವಿವಿಧ ತಂತ್ರಗಳು, ತೋಳ್ಬಲವನ್ನು ಪ್ರಯೋಗಿಸಿವೆ. ನಗರದಿಂದ ಹಿಡಿದು ಗ್ರಾಮೀಣ ಪ್ರದೇಶದವರೆಗೂ ಇದರ ದಾಳಿ ಮುಂದುವರಿದಿದೆ. ಪತ್ರಿಕೆಗೆ ನಿಷೇಧ ಹೇರುವುದು, ಪತ್ರಿಕೆ ಸಾಗಾಟ ವಾಹನಗಳ ಮೇಲೆ ದಾಳಿ, ಪೇಪರ್ ಹಾಕುವ ಹುಡುಗರ ಮೇಲೆ ಹಲ್ಲೆ, ಪತ್ರಿಕಾ ಬಂಡಲ್‌ಗಳಿಗೆ ಬೆಂಕಿ ಮುಂತಾದ ಘಟನೆಗಳು ದಿನನಿತ್ಯ ನಡೆಯುತ್ತಿವೆ.

ಇಂತಹ ದೈಹಿಕ ಹಾಗೂ ನೇರ ಹಲ್ಲೆಗಳ ಜೊತೆ ಸರ್ಕಾರವೂ ಪತ್ರಿಕೆ ವಿರುದ್ಧ ಸಮರ ಸಾರಿದೆ. ತೆರೆಮರೆಯಲ್ಲಿ ವಿವಿಧ ಚಟುವಟಿಕೆಗಳ ಮೂಲಕ ಪ್ರತಿಪಕ್ಷವಾಗಿ ಕೆಲಸ ಮಾಡುತ್ತಿರುವ ತನ್ನ ಎದುರಾಳಿಯನ್ನು ಮಣಿಸಲು ದಾಳ ಹಾಕುತ್ತಿದೆ.

ಜನಪರ ಧ್ವನಿಯನ್ನು ಅಡಗಿಸುವ ಇಂತಹ ಯತ್ನವನ್ನು ಎದುರಿಸುವಂತೆ ಸಿಪಿಐ(ಎಂ) ಕರೆ ನೀಡಿದೆ. ಪತ್ರಿಕೆ ಈಗ ಸಂಕಷ್ಟದ ದಿನಗಳನ್ನು ಎದುರಿಸುತ್ತಿದ್ದು, ನೈತಿಕ ಹಾಗೂ ಆರ್ಥಿಕ ಬೆಂಬಲದ ಅಗತ್ಯವಿದೆ ಎಂದು ರಾಜ್ಯ ಕಾರ್ಯದರ್ಶಿ ಬಿಮನ್ ಬಸು ಹೇಳಿದ್ದಾರೆ. ರೈತ-ಕಾರ್ಮಿಕರು, ಅವಕಾಶ ವಂಚಿತರು-ದಲಿತರ ಪರವಾಗಿ ದೃಢ ಧ್ವನಿಯಾಗಿ ರಾಜ್ಯದಲ್ಲಿ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿರುವ ಪತ್ರಿಕೆ, ಸರ್ಕಾರದ ಪ್ರಜಾತಂತ್ರ ವಿರೋಧಿ ಮುಖವನ್ನು ಅನಾವರಣಗೊಳಿಸುವಲ್ಲಿ ಪ್ರಧಾನ ಪಾತ್ರ ವಹಿಸಿದೆ ಎಂಬುದನ್ನು ಬಸು ಒತ್ತಿ ಹೇಳಿದ್ದಾರೆ.

ತಮ್ಮ ಅಮೂಲ್ಯ ಕಾಣಿಕೆಗಳನ್ನು ನೀಡುವ ಮೂಲಕ ಪಕ್ಷದ ಸದಸ್ಯರು, ಅಭಿಮಾನಿಗಳು, ಹಿತೈಷಿಗಳು ಮತ್ತು ಓದುಗರು ಒಂದು ಅರ್ಥದಲ್ಲಿ ತುರ್ತು ಪರಿಸ್ಥಿತಿಯನ್ನು ಎದುರಿಸುತ್ತಿರುವ ದುಡಿಯುವ ಜನರ ಆಪ್ತಮಿತ್ರ 'ಗಣಶಕ್ತಿ'ಯನ್ನು ಬೆಂಬಲಿಸಬೇಕು ಎಂದು ಕರೆ ನೀಡಿದ್ದಾರೆ. ಆಗಸ್ಟ್ ತಿಂಗಳಾದ್ಯಂತ ಸಂಪನ್ಮೂಲ ಕ್ರೋಢೀಕರಣದ ಚಳವಳಿ ನಡೆಸುವಂತೆ ಸಿಪಿಐ(ಎಂ) ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಸಂಪಾದಕೀಯ

ಸಜಾ ಬಂಧಿಗಳ ಬಿಡುಗಡೆಯ ಪ್ರಶ್ನೆ

66ನೇ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿ ಸನ್ನಡತೆಯ ಆಧಾರದ ಮೇಲೆ 6 ಜನ ಸಜಾ ಬಂದಿಗಳನ್ನು ಅವಧಿಗೆ ಮುನ್ನವೇ ಕಾರಾಗೃಹದಿಂದ ಬಿಡುಗಡೆ ಹೊಂದಲು ರಾಜ್ಯಪಾಲ ಹಂಸರಾಜ ಭಾರದ್ವಾಜ್ ಅನುಮತಿ ನೀಡಿದ್ದಾರೆ ಎಂದು ತಿಳಿದು ಬಂದಿದೆ. 2006 ರಲ್ಲಿ ಕರ್ನಾಟಕ ಸುವರ್ಣ ಮಹೋತ್ಸವದ ಪ್ರಯುಕ್ತ ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ 309 ಜನ ಸಜಾ ಕೈದಿಗಳನ್ನು ಬಿಡುಗಡೆ ಮಾಡಿದ್ದರು.

ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗ್ರಹದ ದಿಂಡಿಲ್ ನಜೀರ್ ಹಾಗೂ ಪುಟ್ಟೇಗೌಡ ಎಂಬವರನ್ನು ಬಿಡುಗಡೆಗೊಳಿಸುವಂತೆ ರಾಜ್ಯಪಾಲರು ಸರ್ಕಾರಕ್ಕೆ ಆದೇಶ ನೀಡಿದ ಹಿನ್ನೆಲೆಯಲ್ಲಿ ಇವರಿಬ್ಬರ ಬಿಡುಗಡೆಯಾಗಿದೆ. ಪ್ರತ್ಯೇಕ ಕೊಲೆ ಪ್ರಕರಣ ಸಂಬಂಧ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಇವರಿಬ್ಬರು ಈಗಾಗಲೇ 14 ವರ್ಷ ಶಿಕ್ಷೆ ಪೂರೈಸಿದ್ದಾರೆ. ಇದಲ್ಲದೆ ಮೈಸೂರು ಕಾರಾಗೃಹದಿಂದ ಇಬ್ಬರನ್ನು ಮತ್ತು ಬೆಳಗಾವಿ ಕಾರಾಗೃಹದಿಂದ ಇಬ್ಬರನ್ನು ಬಿಡುಗಡೆ ಮಾಡಲಾಗಿದೆ.

ಕಳೆದ ಆರು ವರ್ಷಗಳಿಂದ ರಾಜ್ಯದಲ್ಲಿ ಸನ್ನಡತೆಯ ಆಧಾರದ ಮೇಲೆ ಸಜಾ ಕೈದಿಗಳ ಅವಧಿ ಪೂರ್ವ ಬಿಡುಗಡೆ ಆಗಿರಲಿಲ್ಲ. ಇದಕ್ಕೆ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಹಗ್ಗಜಗ್ಗಾಟವೇ ಕಾರಣವೆಂದು ಹೇಳಲಾಗುತ್ತಿತ್ತು. ಸಿ.ಆರ್.ಪಿ.ಸಿ. 433–ಎ ಪ್ರಕಾರ ಜೀವಾವಧಿ ಶಿಕ್ಷೆಗೆ ಒಳಪಟ್ಟ ಆರೋಪಿ 14 ವರ್ಷ ಕಡ್ಡಾಯವಾಗಿ ಶಿಕ್ಷೆ ಅನುಭವಿಸಬೇಕು. ಸಾಯುವ ತನಕ ಶಿಕ್ಷೆಗೆ ಗುರಿಯಾಗಿದ್ದರೆ ಸಾಯುವವರೆಗೂ ಕಾರಾಗೃಹದಲ್ಲಿ ಜೀವನ ಸವೆಯಿಸಬೇಕು. ಆದರೆ ರಾಷ್ಟ್ರಪತಿಗಳು ತಮ್ಮ ವಿಶೇಷಾಧಿಕಾರ ಬಳಸಿ, ಸನ್ನಡತೆಯ ಆಧಾರದಲ್ಲಿ ಕೈದಿಗಳನ್ನು ಅವಧಿ ಮುನ್ನ ಬಿಡುಗಡೆ ಮಾಡಲು ರಾಜ್ಯಪಾಲರಿಗೆ ಅವಕಾಶ ನೀಡುತ್ತಾ ಬಂದಿದ್ದಾರೆ. ಕೈದಿಗಳ ನಡತೆ ಆಧರಿಸಿ ಜಿಲ್ಲಾ ನ್ಯಾಯಾಧೀಶರು, ಹಿರಿಯ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ಸಲಹಾ ಸಮಿತಿ ಸನ್ನಡೆತೆಯ ಕೈದಿಗಳ ಬಿಡುಗಡೆ ಪಟ್ಟಿಯನ್ನು ಅಂತಿಮಗೊಳಿಸಿ ಮುಖ್ಯಮಂತ್ರಿ ಮೂಲಕ ರಾಜ್ಯಪಾಲರಿಗೆ ಸಲ್ಲಿಸುತ್ತದೆ. ರಾಜ್ಯಪಾಲರು ಅಂತಿಮ ತಿರ್ಮಾನ ಕೈಗೊಳ್ಳುತ್ತಾರೆ. 2007 ರಿಂದ 2011ರ ವರಗೆ ಕಳುಹಿಸಲಾದ ಪ್ರಸ್ತಾವನೆಗಳನ್ನು ರಾಜ್ಯಪಾಲರು ವಾಪಸ್ ಕಳುಹಿಸುತ್ತಾ ಬಂದಿದ್ದಾರೆ.

ಸನ್ನಡತೆಯ ಆಧಾರದಲ್ಲಿ ಕೈದಿಗಳನ್ನು ಅವಧಿ ಮುನ್ನ ಬಿಡುಗಡೆ ಮಾಡುವ ಬಗ್ಗೆ ಎರಡು ಅಭಿಪ್ರಾಯಗಳಿವೆ. ಅಪರಾಧ ಕೃತ್ಯದಿಂದ ನೊಂದವರು ಅಪರಾಧಿಯ ಅವಧಿ ಮುನ್ನ ಬಿಡುಗಡೆಯನ್ನು ಸರ್ವತಾ ಒಪ್ಪಲಾರರು. ವೃತಿ ನಿರತ ಅಪರಾಧಿಗಳು ಪದೇ ಪದೇ ದುಷ್ಕೃತ್ಯದಲ್ಲಿ ಭಾಗಿಯಾದವರನ್ನು ಬಿಡುಗಡೆ ಮಾಡುವುದು ಸಮಾಜದ ಸ್ವಾಸ್ಥ್ಯದ ದೃಷ್ಟಿಯಿಂದ ಅಪಾಯಕಾರಿಯಾಗಿದೆ. ಆದರೆ ಕಾರಾಗೃಹ ಎಂಬುದು ಒಂದು ಪರಿವರ್ತನಾ ಕೇಂದ್ರ, ಯಾವುದೋ ಒಂದು ಆಕಸ್ಮಿಕ ಘಟನೆ ಮತ್ತು ಸಮಾಜ ವ್ಯವಸ್ಥೆಯ ದೋಷದಿಂದ ಅಪರಾಧವೆಸಗಿದವರು ಪರಿವರ್ತನೆಯಾಗಿ ಹೊಸ ಬದುಕು ಕಟ್ಟಿಕೊಳ್ಳಲು ಕನಸು ಕಾಣುವುದು ತಪ್ಪಾಗದು. ಅಂತಹ ಸನ್ನಡತೆಯ ಕೈದಿಗಳ ಅವಧಿ ಮುನ್ನ ಬಿಡುಗಡೆಗೆ ಅವಕಾಶ ಇರಬೇಕು ಎಂಬ ಬಲವಾದ ವಾದಸರಣಿಯೂ ಇದೆ. ನಮ್ಮ ಕಾರಾಗೃಹಗಳಲ್ಲಿ ಬಂಧಿತರಾಗಿ ಶಿಕ್ಷೆ ಅನುಭವಿಸುತ್ತಿರುವ ಪುರುಷ ಮತ್ತು ಮಹಿಳಾ ಕೈದಿಗಳಲ್ಲಿ ಎಲ್ಲರೂ ನಿಜವಾಗಿಯೂ ಅಪರಾಧಿಗಳೆಂದು ಹೇಳಲಾಗದು. ತನ್ನ ನಿರಪರಾಧಿತ್ವವನ್ನು ಸಾಬೀತು ಪಡಿಸಲು ಸಾಧ್ಯವಾಗದೆ ಶಿಕ್ಷೆ ಅನುಭವಿಸುತ್ತಿರುವವರೂ ಇರಬಹುದು. ಅಂತಹವರಿಗೆ ನ್ಯಾಯ ದೊರಕಿಸುವುದು ಸಾಧ್ಯವಾಗದಿದ್ದರೂ ತಮ್ಮ ಬದುಕಿನ ಕೊನೆಯ ದಿನಗಳನ್ನು ತಮ್ಮ ಕುಟುಂಬದ ಸದಸ್ಯರೊಂದಿಗೆ ಕಳೆಯಲು ಅವಕಾಶ ಕಲ್ಪಿಸಿದಂತಾಗುವುದು.

ಆದರೆ, ರಾಜ್ಯ ಸರ್ಕಾರಗಳು ರಾಜಕೀಯ ಉದ್ದೇಶಕ್ಕಾಗಿ ಕೈದಿಗಳ ಬಿಡುಗಡೆ ಮಾಡುವುದನ್ನು ಸುಪ್ರೀಂ ಕೋರ್ಟ್ ತೀವ್ರವಾಗಿ ಆಕ್ಷೇಪಿಸಿದೆ. ಆದ್ದರಿಂದ ರಾಜ್ಯದಲ್ಲಿ ರಾಜ್ಯಪಾಲರು ಈ ವಿಷಯದಲ್ಲಿ ಬಿಗಿ ನಿಲುವೆ ಹೊಂದಿರುವುದರಲ್ಲಿ ಆಶ್ಚರ್ಯವಿಲ್ಲ. ಸಂಘ ಪರಿವಾರದವರಿಗೆ ಅನುಕೂಲ ಕಲ್ಪಿಸಲು ರಾಜ್ಯ ಸರ್ಕಾರ 594 ಕೈದಿಗಳ ಬಿಡುಗಡೆಗೆ ಹುನ್ನಾರ ನಡೆಸಿದೆ ಎಂಬುದು ರಾಜ್ಯಪಾಲರ ಆಕ್ಷೇಪ. ಹೀಗಾಗಿ ಬಿಜೆಪಿ ರಾಜ್ಯ ಸರ್ಕಾರ ನಾಲ್ಕು ಬಾರಿ ಸಚಿವ ಸಂಪುಟದಲ್ಲಿ ತೆಗೆದುಕೊಂಡ ನಿರ್ಣಯವನ್ನು ರಾಜ್ಯಪಾಲರು ವಾಪಸ್ ಕಳುಹಿಸಿದ್ದರು.


ರಾಜ್ಯಪಾಲರು ಹಂಸರಾಜ ಭಾರದ್ವಾಜ್ ಅವರ ನಿಲುವೆಯನ್ನು ಸಹ ತಳ್ಳಿಹಾಕಲು ಬರುವುದಿಲ್ಲ. ಕಳೆದ 3–4 ವರ್ಷಗಳಲ್ಲಿ ರಾಜ್ಯ ಸರ್ಕಾರ ಅನೇಕ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ ಸಂಘ ಪರಿವಾರದ ಕಾರ್ಯಕರ್ತರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳನ್ನು ತನಿಖೆಯ ಹಂತದಲ್ಲೇ ಹಿಂಪಡೆದುಕೊಂಡದ್ದು ಸಾರ್ವಜನಿಕ ಆಕ್ಷೇಪಕ್ಕೆ ಒಳಗಾಗಿತ್ತು. ಚರ್ಚುಗಳ ಮೇಲೆ ದಾಳಿ ಮಾಡಿದವರು, ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಮಹಿಳೆಯರ ಮೇಲೆ ಹಲ್ಲೇ ಮಾಡಿದವರು, ಅಲ್ಪ ಸಂಖ್ಯಾತರ ವಿರುದ್ಧ ಪ್ರಚೋದನಾಕಾರಿ ಭಾಷಣ ಮಾಡಿದವರು ಮುಂತಾದವರನ್ನು ಅವರು ಸಂಘ ಪರಿವಾರದ ಕಾರ್ಯಕರ್ತರು ಎನ್ನುವ ಏಕೈಕ ಕಾರಣಕ್ಕಾಗಿ ಅವರ ವಿರುದ್ಧ ದಾಖಲಾದ ಪ್ರಕರಣಗಳನ್ನು ವಾಪಸ್ ಪಡೆಯುವ ಬಿಜೆಪಿ ರಾಜ್ಯ ಸರ್ಕಾರದ ಕ್ರಮಗಳ ಬಗ್ಗೆ ರಾಜ್ಯಪಾಲರಿಗೆ ಅನುಮಾನ ಉಂಟಾಗಿರುವುದರಲ್ಲಿ ಆಶ್ಚರ್ಯಪಡಬೇಕಾದುದೇನಿಲ್ಲ. ಕಳೆದ ಎರಡು ಮೂರು ವರ್ಷಗಳಿಂದ ರಾಜ್ಯದ ಕಾರಾಗೃಹಗಳಿಂದ ಅವಧಿ ಮುನ್ನ ಬಿಡುಗಡೆ ಮಾಡಲು ರಾಜ್ಯ ಸರ್ಕಾರ ಕೈದಿಗಳ ಪಟ್ಟಿಯನ್ನು ರಾಜ್ಯಪಾಲರ ಮುಂದಿಟ್ಟಾಗ ಅವರು ರಾಜ್ಯ ಸರ್ಕಾರದ ಈ ಪ್ರಸ್ತಾವನೆಯಲ್ಲಿ ಸಂಘ –ಪರಿವಾರದವರಿಗೆ ಅನುಕೂಲ ಕಲ್ಪಿಸುವ ಹುನ್ನಾರವನ್ನು ಸಂಶಯಿಸಿ ಸರ್ಕಾರದ ಪ್ರಸ್ತಾವವನ್ನು ತಿರಸ್ಕರಿಸಿದ್ದಾರೆ. ರಾಜಕೀಯ ಉದ್ದೇಶಕ್ಕಾಗಿ ಕೈದಿಗಳ ಯಾವುದೇ ಬಿಡುಗಡೆ ಪ್ರಕ್ರಿಯೆ ನಡೆಸುವುದಕ್ಕೆ ಅವಕಾಶ ನೀಡುವುದಿಲ್ಲ ಎಂದು ಅವರು ರಾಜ್ಯ ಸರ್ಕಾರಕ್ಕೆ ಸ್ಪಷ್ಟಪಡಿಸಿದ್ದಾರೆ. ರಾಜ್ಯಪಾಲರ ದೋರಣೆ ಸರಿಯಾಗಿಯೇ ಇದೆ. ಆದರೆ, ಬಿಜೆಪಿ ಸರ್ಕಾರದ ಈ ಕೊಳಕುತನದಿಂದಾಗಿ ನ್ಯಾಯವಾಗಿ ಬಿಡುಗಡೆ ಹೊಂದಬೇಕಾಗಿದ್ದ ಸನ್ನಡತೆಯ ಇತರ ಕೈದಿಗಳಿಗೆ ಅನ್ಯಾಯವಾಗುತ್ತಿದೆ.

ಅಂತೆ–ಕಂತೆಗಳಲ್ಲಿ ಹುಟ್ಟಿಕೊಂಡ ಆತಂಕ

ತಳ ಬುಡವಿಲ್ಲದ ಸುದ್ದಿಗಳು ಅದೆಷ್ಟು ವೇಗವಾಗಿ ತಲುಪುತ್ತವೆ! ಜನರ ಎದೆಯಲ್ಲಿ ಆತಂಕ, ದುಗುಡಗಳನ್ನು ಹುಟ್ಟಿ ಹಾಕುತ್ತವೆ! ಜನರೆಲ್ಲಾ ಸ್ವಾತಂತ್ರ್ಯದ ಸಂಭ್ರಮದಲ್ಲಿರುವಾಗ ಬೆಂಗಳೂರಿನ ರೈಲ್ವೇ ನಿಲ್ದಾಣದಲ್ಲಿ ಕಾಲಿಡಲೂ ಆಗದಷ್ಟು ಜನ ಜಮಾಯಿಸಿ ಓಡಾಟಕ್ಕೆ ಜಾಮ್ ಹಿಡಿಸಿ ಬಿಟ್ಟರೆಂದರೆ!? ಅದೂ ಗೃಹ ಸಚಿವರೇ ಖುದ್ದಾಗಿ ಬಂದು ಕೈ ಮುಗಿದು 'ಹೋಗದಿರಿ ಸೋದರರೇ' ಎಂದು ಮನವಿ ಮಾಡುತ್ತಾರೆಂದರೆ... ಮತ್ತು ಮಾಧ್ಯಮಗಳು ಉಸಿರು ಗಟ್ಟಿ ಸುದ್ದಿ ಊದುತ್ತಲೇ ಬೆಳಕು ಹರಿಸುತ್ತವೆಯೆಂದರೆ.. ನೀವೇ ಊಹಿಸಿ. ಇಷ್ಟೆಲ್ಲಾ ಒಂದು ಎಸ್.ಎಮ್.ಎಸ್., ವ್ಯವಧಾನವೇ ಇಲ್ಲದ ಫಾರ್ವರ್ಡ್ ಮಾಡುವ ಹೆಬ್ಬೆರಳ ತುದಿ ಎಷ್ಟೆಲ್ಲಾ ಮಾಡಬಲ್ಲುದು!.

ವದಂತಿಗಳ ಭಿತ್ತರ

ಇತ್ತೀಚೆಗೆ ಅಸ್ಸಾಂನಲ್ಲಿ ನಡೆದ ಭೀಕರ ಜನಾಂಗೀಯ ಘರ್ಷಣೆ, ಅದನ್ನು ಪ್ರತಿಭಟಿಸಿ ಬಾಂಬೆಯಲ್ಲಿ ನಡೆದ ಪ್ರತಿಭಟನೆ ವೇಳೆ ಆದ ಘರ್ಷಣೆ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿರುವ ಅಸ್ಸಾಂ ಮತ್ತು ಈಶಾನ್ಯ ಮೂಲದ ಜನರ ಮೇಲೆ 'ರಂಜಾನ್' ನಂತರ ಧಾಳಿ ನಡೆಯಲಿದೆಯೆಂದು, ಕೆಲವರಂತೂ ಈಗಾಗಲೇ ಇಬ್ಬರ ಕೊಲೆಯಾಯಿತೆಂಬ, ಕೆಲವರಿಗೆ ಯಾರೋ ಬೆದರಿಸಿದರೆಂಬ ಕಪೋಲ ಕಲ್ಪಿತ ಸುದ್ದಿಗಳು ಹರಿದಾಡಿದ್ದೇ ಇಷ್ಟಕ್ಕೆಲ್ಲಾ ಕಾರಣವಾಯಿತು. ಇಂತಹ ಊಹಾತ್ಮಕ ಸುದ್ದಿ ಆತಂಕ ಬಿತ್ತರವಾದ್ದೇ ಅಸ್ಸಾಂನ ಕೆಲವು ಆಸಕ್ತ ಪತ್ರಿಕೆಗಳಲ್ಲಿ. ಈ ಮೊದಲೇ ಇಲ್ಲಿಯೂ ಏನಾದರೂ ಸಂಭವಿಸಬಹುದೇ ಎಂದು ಅನುಮಾನದ ಸುಳಿಯಲ್ಲಿದ್ದವರಿಗೆ ಮೊಬೈಲ್ ಸಂದೇಶ , ಆತಂಕಗಳನ್ನು ಹೆಚ್ಚಿಸಿ ಊರಿಗೆ ತರಾತುರಿಯಲ್ಲಿ ಹೋಗಲು ದಬಾಯಿಸಿ ಬಿಟ್ಟಿದೆ.



ರಾಜಕೀಯ ಬಂಡವಾಳ

ಹೀಗಾಗಿಯೇ ಆ. 15ರಂದು 6000ದಷ್ಟು ಜನ ನಿಲ್ದಾಣದಲ್ಲಿ ಜಮಾಯಿಸಿದ್ದು, ಮರು ದಿನವೂ ಹೋಗಲು ಮತ್ತಷ್ಟು ಮುಗಿ ಬಿದ್ದಿರುವುದು. ಯಾರೂ ಹೆದರಬೇಕಿಲ್ಲವೆಂದು, ಅವೆಲ್ಲಾ ವದಂತಿಗಳಿಗೆ ಕಿವಿಗೊಡದೇ ಇಲ್ಲೇ ಉಳಿಯಿರೆಂದೂ, ಸರ್ವ ಭದ್ರತೆ ನೀಡುವುದಾಗಿ ಉನ್ನತ ಮಟ್ಟದ ಸಭೆಗಳನ್ನು ನಡೆಸಿದ ಸರಕಾರ ಸಿಎಂ, ಈಶಾನ್ಯ ಭಾರತದವರೇ ಆದ ಡಿಜಿಪಿ ಹೇಳುತ್ತಿದ್ದಾರೆ. ಆದರೆ ಆತಂಕ ಇನ್ನೂ ಕಡಿಮೆಯಾಗಿಲ್ಲ. ವಿಚಿತ್ರವೆಂದರೆ ಅತೀ ಗಣ್ಯರೂ, ಸಂಘಟನೆಗಳ ಅಗ್ರಗಣ್ಯರ ದಂಡು ರೈಲ್ವೇ ನಿಲ್ದಾಣದಲ್ಲಿ ಭೇಟಿ ನೀಡುತ್ತಾ ಸಾಂತ್ವನ ಹೇಳುತ್ತಾ ಕಾವು ಕಾಯ್ದಿರಿಸಿದ್ದಾರೆ. ವಿಶೇಷವೆಂದರೆ ಇವರೆಲ್ಲಾ ಬಹುತೇಕ ಸಂಘಪರಿವಾರದ ತುಂಡುಗಳೇ ಎಂಬುದು. ಅಸ್ಸಾಂನ ಜನ ಊರಿಗೆ ಮರಳದಂತೆ ಸರ್ಕಾರ ಒಳಗೊಂಡು ಇತರರು ವಿನಂತಿಸಿದರೂ ಹೋಗುವವರರ ಸಂಖ್ಯೆ ಬೆಳೆಯುತ್ತಲೇ ಇರುವುದೇ ಜನರಿಗೆ ಸರ್ಕಾರ ವಿಶ್ವಾಸ ಹುಟ್ಟಿಸುವಲ್ಲಿ ವಿಫಲವಾಗಿರುವುದು ಕಾಣುತ್ತದೆ. ಪ್ರಮೋದ ಮುತಾಲಿಕನಂತಹ 'ಆತಂಕವಾದಿ' ಆತಂಕದಲ್ಲಿರುವವರಿಗೆ ಎಂತಹ ಸಾಂತ್ವನ ಹೇಳಿಯಾನು? ಮುಸ್ಲಿಂರು ಮತ್ತು ಇತರೆ ಬುಡಕಟ್ಟುಗಳ ಮೇಲೆ ಅಸ್ಸಾಂ ಬೋಡೋ ಬುಡಕಟ್ಟು ಪ್ರತ್ಯೇಕವಾದಿಗಳು ಧಾಳಿ ಮಾಡಿದ್ದನ್ನು ಅತ್ಯಂತ ಸಕ್ರಿಯವಾಗಿ ಬೆಂಬಲಿಸಿರುವ ಬಿಜೆಪಿ–ಸಂಘಪರಿವಾರವೇ ಇಲ್ಲಿಯೂ ಅಣಿ ನೆರೆದಿದೆ. ಅಲ್ಲಿ ಸೇರಿದವರ ತಲೆಗೆ ಸಾಂತ್ವನ, ಧೈರ್ಯ ಹೇಳುವ ನೆಪದಲ್ಲಿ ಮುಸ್ಲಿಂರ ವಿರುದ್ಧ ಎತ್ತಿ ಕಟ್ಟುವ ವಿಷ ಪ್ರಚಾರ ನಡೆಸಿದೆ. ಹೋಗಬೇಡಿ ಎಂದು ಹೇಳುತ್ತಿದ್ದರೂ ಹೋಗಲು ಪ್ರಚೋದನೆಯನ್ನೂ ನೀಡುತ್ತಿದೆ. ಕಳೆದ ಹಲವಾರು ದಶಕಗಳಿಂದಲೂ ಈಶಾನ್ಯ ಭಾರತದ ವಿದ್ಯಾರ್ಥಿಗಳ ನಡುವೆ ವಿದೇಶಿಯರ ವಿಷಯವನ್ನೆತ್ತಿ ನಿರಂತರ ಅಪಪ್ರಚಾರ ಮಾಡುತ್ತಾ ಬಂದ ಎ.ಬಿ.ವಿ.ಪಿ. ಸಂಘಟನೆ



ಪುಟ 4 ಕ್ಕೆ

ಗುಲ್ಬರ್ಗ : ಜನದ್ರೋಹಿ 'ಆಹಾರ ಭದ್ರತಾ ಮಸೂದೆ' ಕೈಬಿಡಿ – ಬೃಹತ್ ಪತಿಭಟನೆಯಲ್ಲಿ ಆಗ್ರಹ

ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ಆಹಾರ ಭದ್ರತಾ ಮಸೂದೆಯನ್ನು ಕೈಬಿಡಬೇಕು ಹಾಗೂ ಎಪಿಎಲ್, ಬಿಪಿಎಲ್ ಎನ್ನದೇ ಕುಟುಂಬಕ್ಕೆ 35 ಕೆ.ಜಿ. ಆಹಾರ ಧಾನ್ಯ ಖಾತ್ರಿಪಡಿಸುವ ಪಡಿತರ ಪದ್ಧತಿ ಜಾರಿಗೆ ತರಬೇಕು ಎಂದು ಒತ್ತಾಯಿಸಿ ಜುಲೈ 29, 2012 ರಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಗುಲ್ಬರ್ಗಾ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಗುಲಬರ್ಗಾ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು. . ಈ ಸಂದರ್ಭದಲ್ಲಿ ನೆರೆದ ಬೃಹತ್ ಸಂಖ್ಯೆಯ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನ ಮತ್ತು ರೈತ ವಿರೋಧಿ ನೀತಿ ಅನುಸರಿಸುತ್ತಿವೆ.



ಬಡ ಜನರ ಬಗ್ಗೆ ಸರ್ಕಾರಗಳಿಗೆ ಕಾಳಜಿ ಇಲ್ಲ ಬಡವರಿಗೆ ಬಿಪಿಎಲ್ ಪಡಿತರ ಚೀಟಿ ನೀಡುತ್ತಿಲ್ಲ ಎಂದು ಶ್ರೀರಾಮರೆಡ್ಡಿ ಖಂಡಿಸಿದರು.

ನಗರದ ಸರದಾರ್ ವಲ್ಲಭಭಾಯಿ ಪಟೇಲ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಮಂಗಳೂರಿನಲ್ಲಿ ಹಿಂದೂ ಜಾಗರಣ ವೇದಿಕೆ ನಡೆಸಿದ ಘಟನೆ ಖಂಡಿಸಿ ಸಹ ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪ್ರತಿಕೃತಿ ದಹಿಸಲಾಯಿತು.

ರಾಜ್ಯದಲ್ಲಿ ಆವರಿಸಿರುವ ಬರಗಾಲವನ್ನು ಸಮರ್ಥವಾಗಿ ಎದುರಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಬರ ಪರಿಹಾರ ಕಾಮಗಾರಿಯನ್ನೂ ಎಲ್ಲೂ ಆರಂಭಿಸಿಲ್ಲ. ಅರ್ಹರಿಗೆ ಬಿಪಿಎಲ್ ಪಡಿತರ ಚೀಟಿ ಸಿಗುತ್ತಿಲ್ಲ.

ಎಲ್ಲ ಕುಟುಂಬಗಳಿಗೆ ಎರಡು ರೂಪಾಯಿಗೆ ಕೆ.ಜಿ.ಯಂತೆ ಪ್ರತಿ ತಿಂಗಳು 35 ಕೆಜಿ ಅಕ್ಕಿ ಒದಗಿಸಬೇಕು. ಎಫ್‌ಸಿಐ. ಸಿಸಿಐ. ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲಕ ರೈತರಿಂದ ಧಾನ್ಯ ಖರೀದಿಸುವುದನ್ನು ಮುಂದುವರಿಸಬೇಕು. ತೊಗರಿ ಆಮದು ನಿಲ್ಲಿಸಬೇಕು.

ಮಂಗಳೂರಿನಲ್ಲಿ ನಡೆದ ಘಟನೆಗೆ, ಸಂಬಂಧಿಸಿದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂಬುದು ಸೇರಿದಂತೆ ಅನೇಕ ಬೇಡಿಕೆಗಳಿಗೆ ಒತ್ತಾಯಿಸಲಾಯಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಯು. ಬಸವರಾಜು, ಕೆ.ನೀಲಾ, ಭೀಮಶೆಟ್ಟಿ ಯಂಪಳ್ಳಿ, ಮೇಘರಾಜ ಖಠಾರೆ, ಜೈಲಾಲ್ ತೋಟದಮನಿ, ಶಾಂತಾ ಘಂಟಿ, ಗಂಗಮ್ಮ ಬಿರಾದಾರ, ಶರಣ ಬಸವ ಮಮಶೆಟ್ಟಿ, ಸುಧಾಮ ಧನ್ನಿ, ಸಾಗರ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ■

ಅಂತೆ–ಕಂತೆಗಳಲ್ಲಿ ಹುಟ್ಟಿಕೊಂಡ ಆತಂಕ.....

ಪುಟ 3 ರಿಂದ

ಸಂಘಟಿತ ಜಾಲವನ್ನೂ ಹೊಂದಿದೆ. ಇದೇ ಎ.ಬಿ.ವಿ.ಪಿ. ಕೆಲವೇ ತಿಂಗಳ ಹಿಂದೆ ಬಾಂಗ್ಲಾದಿಂದ ವಲಸೆ ಬಂದ ಮುಸ್ಲಿಂರೇ ರಾಷ್ಟ್ರದ ಭದ್ರತೆಗೆ ಬಹು ದೊಡ್ಡ ಅಪಾಯವೆಂದು ದೇಶದಲ್ಲಿ ಮತ್ತು ರಾಜ್ಯದಲ್ಲಿ ವ್ಯಾಪಕ ಪ್ರಚಾರ ಕೈಗೊಂಡಿತ್ತು. ಅದಾದ ನಂತರದಲ್ಲಿ ಈಗಿನ ಅಸ್ಸಾಂ ಘಟನೆಗಳು ಮತ್ತು ಇಡೀ ಆಕ್ರಮಣಕಾರಿ ಧಾಳಿಯನ್ನು ಕೋಮುವಾದೀ ವಿಭಜಕ ನೆಲೆಯಲ್ಲಿಯೇ ವ್ಯಾಖ್ಯಾನಿಸುತ್ತಾ ಬಂದಿದೆ (ರಂಜಾನ್ ಪ್ರಸ್ತಾಪ, ಬಾಂಗ್ಲಾ ವಲಸಿಗರೆಂಬ ಮಾತುಗಳೇ ಸಾಕಲ್ಲವೇ?). ಇತ್ತೀಚೆಗೆ ಅದ್ವಾನಿಯವರ ಮಾತುಗಳು ಅಲ್ಲಿ ನಡೆದ ಭೀಕರ ಹತ್ಯಾಕಾಂಡದ ಬಗ್ಗೆ ಬಿಜೆಪಿಯ ನೋವಿನ ಮಾತಿರಲಿ ವಿಷಾದದ ಒಂದು ಎಳೆಯೂ ಇಲ್ಲದ ರಾಜಕೀಯ ಬಂಡವಾಳ ಮಾಡಿಕೊಳ್ಳುವ ಸ್ಪಷ್ಟ ಗುರಿಯನ್ನು ತೋರುತ್ತಿತ್ತು.

ಕಪಟ ನಾಟಕ!

ಈಗಲೂ ಅಸ್ಸಾಂನ ಹೊರಗೆ ಇರುವ 'ಮೂಲ ನಿವಾಸಿಗಳ' ನಡುವೆ ಅಸ್ಸಾಂನಲ್ಲಿ ನಡೆದ ಗಲಭೆಯನ್ನು ಬಳಸಿ ಬಿಜೆಪಿ– ಸಂಘಪರಿವಾರ ಕ್ರೋಢೀಕರಿಸಲು ತೊಡಗಿದೆ. ಬೆಂಗಳೂರಿನಲ್ಲೂ ಇದೇ ನಡೆದಿರುವುದರಲ್ಲಿ ಸಂಶಯವಿಲ್ಲ. ಅದಕ್ಕೆ ಮುಂಬರುವ ವಿಧಾನ ಸಭೆ ಮತ್ತು ಸಂಸತ್ ಚುನಾವಣೆಯನ್ನು ಗುರಿಯಾಗಿಸಿಕೊಂಡಿದೆ. ಅದಕ್ಕಾಗಿ ಯಾವ ಅವಕಾಶವನ್ನೂ ತಪ್ಪಿಸಿಕೊಳ್ಳಲು ಸಿದ್ಧವಿಲ್ಲ. ಈ ಬಾರಿಯಂತೂ ಬೆಂಗಳೂರಿನಾದ್ಯಂತ ಲಕ್ಷ, ಲಕ್ಷಾಂತರ ಹಣ ಖರ್ಚು ಮಾಡಿ ಸ್ವಾತಂತ್ರ್ಯ ಉತ್ಸವವನ್ನು ಹುರುಪಿನಿಂದ ಆಚರಿಸಿತು. ಅಲ್ಲಿ ಪ್ರದರ್ಶಿಸಿದ ನಕಾಶೆಯಲ್ಲಿ ಪಾಕಿಸ್ತಾನವೂ(ಮತ್ತಿತರೆ ನೆರೆ ಹೊರೆಯೂ) ಭಾರತದ ಭಾಗವೆಂದೇ ಪ್ರದರ್ಶಿಸಲಾಗಿತ್ತು. ಇದು ಆರೆಸ್ಸೆಸ್‌ನ ರಾಜಕೀಯ, ಸೈದ್ಧಾಂತಿಕ ಯುದ್ಧದ ಅಜೆಂಡಾ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗದ, ಬ್ರಿಟೀಷರ ಜೊತೆ ಕೈ ಜೋಡಿಸಿದವರಿಂದಲೇ ಇಂತಹ ಉತ್ಸವ! ಎಂಥ ವಿಪರ್ಯಾಸ–ಎಂಥ ಕಪಟ ನಾಟಕ!

ಖುಲಾಸೆ ಕ್ರಮಗಳು

ಆ ಕಾರಣದಿಂದಲೇ ರಾಜ್ಯದಲ್ಲಿ ಕೋಮುವಾದದ ಕತ್ತಿಯನ್ನು ಕೈಗೆತ್ತಿಕೊಂಡಿರುವುದನ್ನು ನಾವಾಗಲೇ ಗಮನಿಸಿದ್ದೇವೆ. ನೀವೇ ನೋಡಿ. ಮಂಗಳೂರಿನ ಹೋಂಸ್ಟೇಯಲ್ಲಿ ಯುವತಿಯರ ಮತ್ತು ಯುವಕರ ಮೇಲಿನ ಅತ್ಯಾಚಾರದ ಪ್ರಯತ್ನ, ಗೂಂಡಾ ಧಾಳಿಯನ್ನು ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲು ಮಹಿಳಾ ಆಯೋಗವೂ ಒಳಗೊಂಡು ಇಡೀ ಸಂಘಪರಿವಾರ ಯತ್ನಿಸಿದೆ. ಆರಂಭದಲ್ಲಿ ಖಂಡಿಸಿದಂತೆ ನಟಿಸಿದ್ದ ಸರಕಾರ ದಾಳಿಗೊಳಗಾದವರನ್ನೇ ಕ್ರಿಮಿನಲ್‌ಗಳನ್ನಾಗಿ ಚಿತ್ರಿಸಿ ಹಣಿಯಲು ಶತಾಯಗತಾಯ ತೊಡಗಿದೆ. ಹಾಗೇ ಹಿಂದು ಹುಡುಗಿಯರ 'ಸೇಫ್ಟಿ' ಪ್ರಶ್ನೆಯನ್ನು ಎತ್ತುವ ಮೂಲಕ ನಿಧಾನಕ್ಕೆ ಅಲ್ಪಸಂಖ್ಯಾತರನ್ನು ಅಪರಾಧಿಗಳನ್ನಾಗಿಸಿ ಬಾಣ ಬಿಡುತ್ತಿದೆ. ಇದೀಗ ಸ್ವಾತಂತ್ರ್ಯೋತ್ಸವಕ್ಕೆ ಎರಡು ಮುನ್ನಾದಿನ ಮುಜಾಹಿದ್ದೀನ್ ಭಯೋತ್ಪಾದಕರು ಬೆಂಗಳೂರು–ಮೈಸೂರು ನಡುವಿನ ರೈಲ್ವೇ ಹಳಿಗಳನ್ನು ಸ್ಫೋಟಿಸುವ ಸಂಚು ರೂಪಿಸಿರುವುದಾಗಿ ಕೇಂದ್ರ ಸರಕಾರದಿಂದ ಮಾಹಿತಿ ಬಂದಿರುವುದಾಗಿ ಸುದ್ದಿ ಹಬ್ಬಿಸಲಾಗಿತ್ತು. ಆದರೆ ಅಂತಹ ಯಾವ ಮಾಹಿತಿ ಬಂದೇ ಇಲ್ಲವೆಂದು ಗೃಹ ಸಚಿವರು ಎಷ್ಟೇ ದೊಡ್ಡ ಗಂಟಲ್ಲಿ ಹೇಳಿದರೂ ಅದು ಆಗಲೇ ಜನರ ಮನಸ್ಸಿನೊಳಗೆ ಆತಂಕ ಸೃಷಿಸಿತ್ತು. ಹೀಗೆ ಜನರಲ್ಲಿ ಅನುಮಾನ, ಆತಂಕ, ಆಕ್ರೋಶ ಹುಟ್ಟಲು ಬಹಳ ವ್ಯವಸ್ಥಿತವಾಗಿ ಕೆಲಸ ಮಾಡಲಾಗುತ್ತಿದೆ. ಅದೇ ಸಾಲಿನಲ್ಲಿ ಅಸ್ಸಾಂ ಸಂಬಂಧಿ ಘಟನೆಗಳನ್ನು ಅರಿಯಬೇಕು. ಇಲ್ಲಿ ಸರಕಾರ ಒಂದನ್ನು ಹೇಳುತ್ತದೆ. ಆದರೆ ಮಾಡಬೇಕಾದುದನ್ನು ಮಾಡುವವರು ಮಾಡುತ್ತಲೇ ಇರುತ್ತಾರೆ. ಅಧಿಕಾರದಲ್ಲಿರುವವರು ತಡೆಯುವ ಕಠಿಣ ಕ್ರಮ ವಹಿಸುವುದಿಲ್ಲ. ಒಂದರ್ಥದಲ್ಲಿ ಅಪರಾಧಿಗಳು ಖುಲಾಸೆಯಾಗುತ್ತಾರೆ.

ವಿಫಲವಾದ ಸರಕಾರ

ಹೀಗೇ ಸರಕಾರ ಬೋಡೋ ಸಮುದಾಯದ, ಈಶಾನ್ಯ ಬಾರತದ ಕೆಲವು ಸ್ಥಳೀಯ ನಾಯಕರ, ಮುಸ್ಲಿಂ ಮುಖಂಡರ ಸಭೆಗಳನ್ನು ಪ್ರತ್ಯೇಕವಾಗಿ ನಡೆಸಿದೆ. ಮುಸ್ಲಿಂ ನಾಯಕರು ತಮ್ಮ ಪ್ರಾಣಬೇಕಾದರೂ ನೀಡಿ ರಕ್ಷಣೆ ಮಾಡುವುದಾಗಿ ಹೇಳಿದ್ದಾರೆ. ಹಾಗೇ ಸರಕಾರ ನಡೆಸಿದ ಕೇವಲ ಪ್ರತ್ಯೇಕ ಸಭೆಗಳಿಗಿಂತ ವಿಶಾಲ ನೆಲೆಯ ಸಭೆಗಳೂ ಅಗತ್ಯವಿತ್ತು. ಅದು ಸೌಹಾರ್ದದ ಸಂದೇಶವನ್ನು ಇನ್ನಷ್ಟೂ ನಿಚ್ಚಳವಾಗಿ ನೀಡುತ್ತಿತ್ತು.

ಈ ಎಲ್ಲಾ ದೃಷ್ಟಿಯಲ್ಲೂ ರಾಜ್ಯದ ಬಿಜೆಪಿ ಸರಕಾರ ಸಂಪೂರ್ಣ ವಿಫಲವಾಗಿದೆ. ಅದರಲ್ಲೂ ಈ ಸರಕಾರ, ಆಡಳಿತರೂಢ ಬಿಜೆಪಿಯು ಆರಂಭದಿಂದಲೂ ಧಾರ್ಮಿಕ, ಭಾಷಾ ಅಲ್ಪಸಂಖ್ಯಾತರಲ್ಲಿ ನಿರಂತರ ಆತಂಕವನ್ನು ಮೂಡಿಸುತ್ತಲೇ ಬಂದಿದೆ. ವಿಶ್ವಾಸವನ್ನು ಹುಟ್ಟಿಸಿಲ್ಲ. ಅಧಿಕಾರ ದಾಹದ ಕಿತ್ತಾಟಗಳು ಮತ್ತು ಭ್ರಷ್ಟತೆಯಿಂದಾಗಿ ಆಡಳಿತವೇ ಜನರ ಪಾಲಿಗೆ ಇಲ್ಲವಾಗಿದೆ, ಅದರಲ್ಲೂ ಉಪ ಮುಖ್ಯಮಂತ್ರಿಯಾಗಿರುವ ಗೃಹ ಸಚಿವ ಅಶೋಕ 'ಚಕ್ರವರ್ತಿ'ಯವರಂತೂ ನಾಡಿನ ಜನರ ಆಸ್ತಿ, ಮಾನ, ಪ್ರಾಣ ರಕ್ಷಣೆಗಿಂತ ತಾವೆಸಗಿದ ಹಗರಣಗಳಿಂದ ತಪ್ಪಿಸಿಕೊಂಡು ಬಚಾವಾಗುವ ವರಸೆಯಲ್ಲೇ ನಿರತರಾಗಿ ಕರ್ತವ್ಯ ಮರೆತ ಹೊಣೆಗೇಡಿಯಾಗಿದ್ದಾರೆ. ಇಡೀ ಸಂಪುಟವೇ ಇಂತಹುದೇ ಕಿಸಾಮತಿಯಲ್ಲಿ ತೊಡಗಿದೆ. ಹೀಗಿದ್ದೂ ಜನರ ಹಿತ ರಕ್ಷಣೆ ಮಾಡದಿದ್ದರೂ ಮತ್ತೇ ಬಿಜೆಪಿ ಅಧಿಕಾರಕ್ಕೆ ಬರಬೇಕು, ಸುಲಭವೆಂದರೆ ಅದಕ್ಕಾಗಿ ಕೋಮುವಾದದ ಸರ್ಪ ಕುಟುಕಬೇಕು ಎಂಬ ಲೆಕ್ಕಾಚಾರ!. ಈ ಹಾವು ರಂಜಾನ್, ಗೌರಿ, ಗಣೇಶ, ದಸರಾ ದೀಪಾವಳಿ, ಕ್ರಿಸ್ಮಸ್ ಹಬ್ಬಗಳಲ್ಲಿ ಹರಿದಾಡುವುದಿಲ್ಲ, ಬುಸ್ ಗುಡುವುದಿಲ್ಲ ಅಂತಾ ಯಾವ ಗ್ಯಾರಂಟಿ ಇದೆ ಹೇಳಿ?

ಹಾಗೇ ಇದೇ ಹೊತ್ತಿನಲ್ಲಿ ಅಲ್ಪಸಂಖ್ಯಾತರ ನಡುವಿನ ಆತಂಕಗಳನ್ನು ದುರ್ಬಳಕೆ ಮಾಡಿ ಬೇಳೆ ಬೇಯಿಸಿಕೊಳ್ಳುವ ಮೂಲಭೂತವಾದಿಗಳ ಹುನ್ನಾರಗಳನ್ನೂ ಮರೆಯಬೇಕಿಲ್ಲ. ಅವರಿದ್ದರೆ ಇವರೂ, ಇವರಿದ್ದರೆ ಅವರೂ ಪ್ರೇರಕ–ಪೂರಕ ಆಗಿದ್ದಾರೆ ಅಲ್ಲವೇ?. ಇಂತಹವರಿಗೂ ನಾಡಿನ ಜನತೆ ಅವಕಾಶ ನೀಡಕೂಡದು. ಒಟ್ಟಾರೆ ಇಂದು ಆಗಬೇಕಿರುವುದು ಸುಳ್ಳು ಸುದ್ದಿ ಹಬ್ಬಿಸುತ್ತಿರುವವರನ್ನು ಪತ್ತೆ ಹಚ್ಚಿ ನಿಷ್ಠುರ ಕ್ರಮ ವಹಿಸುವುದು. ಸಂಘಪರಿವಾರದ 'ಅನುಕರಿಪದ ಕಾರ್ಯಕ್ರಮ' ಗಳಿಗೆ ಜನರ ತಿರಸ್ಕಾರ . ಆತಂಕಿತ ಜನರಿಗೆ ಭದ್ರತೆ ನೀಡುವುದು. ಇಂದು ಬೇಕಿರುವುದು ಶಾಂತಿ, ಸೌಹಾರ್ಧತೆ, ಸಹಬಾಳ್ವೆ, ದ್ವೇಷ ಹೆಚ್ಚಿಸುವ ಪ್ರಚೋದನೆಯಲ್ಲ. ಅದನ್ನು ಯಾರೇ ಮಾಡಲಿ ತಡೆದು ಶಿಕ್ಷಿಸಲೇಬೇಕು.ಇದಕ್ಕೆ ಜನತೆಯ ರಕ್ಷಣೆ, ಸರ್ವ ಸಹಕಾರ ನೀಡಿಕೆ.

ಇಂತಹ ರಾಜಕೀಯ ಗದ್ದುಗೆ ಏರುವ ಸಿದ್ಧತೆಯಲ್ಲಿ ಸಂಘಪರಿವಾರ ಮಗ್ನ. ಹೀಗಾಗಿ ಸೌಹಾರ್ದ ಕರ್ನಾಟಕ ಹಂತ ಹಂತವಾಗಿ ಭಗ್ನ! ಅದಕ್ಕೆ ಅವಕಾಶ ನೀಡಬೇಕೇ ಹೇಳಿ.

ಉತ್ತರ ಕರ್ನಾಟಕದ ಹಿಂದುಳಿದಿರುವಿಕೆ ಮತ್ತು ಯುವಜನ

dyfi
ಅಖಿಲ ಭಾರತ ಸಮ್ಮೇಳನ
11-15 ಸೆಪ್ಟೆಂಬರ್, 2012

ಉತ್ತರ ಕರ್ನಾಟಕದ ಜನರು, ಅದರ ಭಾಗವಾಗಿ ಯುವಜನರು ಹಿಂದುಳಿದಿದ್ದಾರೆ. ಅವರ ಕಷ್ಟ ಕೋಟಲೆಗಳು ಇತರ ಭಾಗದ ಯುವಜನರ ಪ್ರಶ್ನೆಗಳಿಗಿಂತ ಭಿನ್ನವಾದದ್ದು. ಅದಕ್ಕೆ ಪರಿಹಾರವೂ ಕೂಡ ಭಿನ್ನವೇ

ಬಿ. ರಾಜಶೇಖರ ಮೂರ್ತಿ

ಅಂದು ಬೆಳಗಿನ ಜಾವ 3 ಗಂಟೆ. ನಡುಕ ಹುಟ್ಟಿಸುವಷ್ಟು ಚಳಿ...., ಇದರ ನಡುವೆ ಕೂ......ಯೆಂದು ದೆಹಲಿ ಕಡೆಯಿಂದ ಬಂದ ಕರ್ನಾಟಕ ಎಕ್ಸ್‌ಪ್ರೆಸ್ ಎಂಬ ರೈಲು ಗುಲ್ಬರ್ಗಾದ ರೈಲು ನಿಲ್ದಾಣದಲ್ಲಿ ನಿಲ್ಲಿಸಿದ್ದೇ ತಡ. ತಂಡೋಪ ತಂಡವಾಗಿ ಜನರಲ್ ಬೋಗಿಗೆ ಧುಮ್ಮಿಕ್ಕ ತೊಡಗಿದ ಜನತೆ. **ಗುಳೆ ಎದ್ದವರು**

ಎಡಕೈಯಲ್ಲಿ ಎರಡು 3–4 ವರ್ಷದ ಮಕ್ಕಳು. ಕರಿಕಳಲ್ಲಿ 6 ತಿಂಗಳ ಮಗು, ತಲೆಯ ಮೇಲೆ ತಮ್ಮ ಜೀವನಕ್ಕೆ ಆಸರೆಯಾಗುವ ಆಸ್ತಿಗಳಾದ ಬಟ್ಟೆಬರೆ ಮತ್ತು ಪಾತ್ರೆಗಳ ಒಂದು ಚೀಲದ ಮೂಟೆ. ಈ ರೀತಿಯಲ್ಲಿನ ಗಂಟು ಮೂಟೆಗಳನ್ನು ಕಟ್ಟಿಕೊಂಡು ಹೆಂಗಸರು ಮತ್ತು ಗಂಡಸರು ಕುಟುಂಬ ಸಮೇತ ತಮ್ಮ ತಮ್ಮ ಊರು ಬಿಟ್ಟು ಗುಳೆ ಹೊರಟವರು. ದೂರ ದೂರದ ನಗರಗಳಿಗೆ ವಲಸೆ ಹೊರಟು ನಿಂತವರು. ಯಾಕೆಂದರೆ ಉತ್ತರ ಕರ್ನಾಟಕ ಹಿಂದುಳಿದಿದೆ. ಉತ್ತರ ಕರ್ನಾಟಕದ ಹಿಂದುಳಿದಿರುವಿಕೆಗೆ ಒಂದು ಮುಖ್ಯ ಕಾರಣ ನಿರುದ್ಯೋಗ. ಅದರಲ್ಲೂ ಗ್ರಾಮೀಣ ನಿರುದ್ಯೋಗ. ಈ ಭಾಗದ ಯುವಜನರು ಹೊಟ್ಟೆ ಹಸಿವಿನ ಕಾರಣಕ್ಕಾಗಿ ದೇಶಕ್ಕೆ ದೇಶವೆಲ್ಲಾ ಅಲೆಯುತ್ತಿದ್ದಾರೆ. ಬಾಂಬೆ, ಪೂನಾ, ಗೋವಾ, ಕೇರಳ, ಆಂಧ್ರ ಪ್ರದೇಶ, ತಮಿಳುನಾಡು, ಹಾಗೂ ಬೆಂಗಳೂರು, ಮಂಗಳೂರಿನಂತಹ ಮಹಾನಗರಗಳಿಗೆ ವಲಸೆ ಬಂದು ಹಲವಾರು ತಿಂಗಳು–ವರ್ಷಗಳು ಇರುತ್ತಾರೆ. ಹೋದಕಡೆಗಳಲ್ಲಿ ಬೀದಿ ಬದಿಗಳಲ್ಲಿ ಬದುಕುತ್ತಾರೆ. ಮದುವೆಯಾದ ಯುವಜನರೂ ಹಲವಾರೂ ತಿಂಗಳು ಗಟ್ಟಲೆ ತಮ್ಮ ಹೆಂಡತಿ ಮಕ್ಕಳನ್ನು ಬಿಟ್ಟು ದೂರ ಇರುತ್ತಾರೆ. ಹೀಗಾಗಿ ಯುವಕ–ಯುವತಿಯರಿಗೆ ಸಂಸಾರಗಳ ಸುಖ ಸಂತೋಷ, ಮಕ್ಕಳ ಜೊತೆಗಿನ ಒಡನಾಟ ಈ ಭಾಗದ ಲಕ್ಷಗಟ್ಟಲೇ ಯುವಜನತೆಗೆ ಇಲ್ಲ. ಅಥವಾ ಸಂಸಾರ ಸಮೇತ ವಲಸೆ ಹೋದವರು ನೀರು ಸೋರುತ್ತಿರುವ ಕಟ್ಟಡಗಳ ಅಡಿಯಲ್ಲಿ, ಸ್ಲಂ ಗಳಲ್ಲಿ, ಕೊಳಚೆ ಕಾಲುವೆಗಳ ಪಕ್ಕದಲ್ಲಿ ಬದುಕುತ್ತಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಬೆಂಗಳೂರು ನಗರಕ್ಕೆ ಈ ಭಾಗದಿಂದ ಬಂದು ವಾಸಿಸುವ ಜನತೆಯನ್ನು ನೋಡಬಹುದು.

ಮಹಿಳೆಯರ–ಯುವತಿಯರ ಪರಿಸ್ಥಿತಿ

ಇನ್ನೂ ಉತ್ತರ ಕರ್ನಾಟಕದ ಹಳ್ಳಿಗಳಲ್ಲೇ ಉಳಿದಿರುವವರು ಬಹಳಷ್ಟು ಮಹಿಳೆಯರು. ಈ ಮಹಿಳೆಯರಿಗೆ ಅತಿ ಕಡಿಮೆ ಕೂಲಿ, ಪುರುಷರು ವಲಸೆ ಹೋಗಿ ಪಡೆಯುವ ಕೂಲಿಗೆ ಹೋಲಿಸಿದರೆ ಕಾಲು ಭಾಗ ಕೂಲಿ ಮಾತ್ರ. ಅದರಲ್ಲೂ ವರ್ಷದಲ್ಲಿ ಕೇವಲ 70–80 ದಿವಸ ಬಿಟ್ಟರೆ ಉಳಿದಂತೆ ಕೂಲಿ ಕೆಲಸವೂ ಸಿಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಸಿವು ಮತ್ತು ನಿತ್ರಾಣದಿಂದ ಬದುಕುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಈಗಿನ ಯುವಜನರ ಹಿಂದಿನ ತಲೆಮಾರು ತಲಾತಲಾಂತರದಿಂದ ಉಳುತ್ತಾ ಇದ್ದ ಭೂಮಿಯನ್ನು ಕಸಿದುಕೊಂಡು ಹೊರಹಾಕಿದ್ದು. ಇದೇ ಅವರಿಗೆ ಸಿಕ್ಕ "ಭೂ ಸುಧಾರಣೆಯ" ಯ ಫಲ: ಕಾಂಗ್ರೆಸ್ ಬಹಳ ಕೊಚ್ಚಿಕೊಳ್ಳುವಂತಹ ಇಂದಿರಾಗಾಂಧಿ ಮತ್ತು ದೇವರಾಜು ಅರಸು ಕಾಲದ ಭೂ ಸುಧಾರಣೆ ಕಾಯ್ದೆಯ ಫಲವಿದು.

ಈಗ ಒಂದು ಶತಮಾನಕ್ಕೆ ಮೊದಲು ಈ ಭಾಗದ ಜನ ಗೇಣಿದಾರರಾಗಿ ಭೂಮಿಯನ್ನು ಉಳುಮೆ ಮಾಡುತ್ತಿದ್ದರು. ಬಾರಿ ಬಾರಿ ದೊಡ್ಡ ದೊಡ್ಡ ಭೂ ಮಾಲಿಕರು, ಸಾವಿರಾರು ಎಕರೆ ಹೊಂದಿರುವ ಭೂಮಾಲಿಕರ ಅಡಿಯೇ ಗೇಣಿದಾರರಾಗಿ ಕೆಲಸ ಮಾಡುತ್ತಿದ್ದರು. ಈ ರೀತಿಯಾಗಿ ಗೇಣಿದಾರರು ಭೂಮಿಯೇ ಆಧಾರವಾಗಿ ಬದುಕುತ್ತಿದ್ದರು. ಇಡೀ ದೇಶದ ತುಂಬ ಭೂ ಸುಧಾರಣೆಗಾಗಿ ಎದ್ದಂತಹ ಚಳುವಳಿ ಮತ್ತು ಹೈದರಾಬಾದ್ ಪ್ರದೇಶದಲ್ಲಿ ಎದ್ದ ಗೇಣಿದಾರರ ಹೋರಾಟದ ಫಲವಾಗಿ ರಾಜ್ಯದಲ್ಲಿಯೂ "ಉಳುವವನೆ ಹೊಲದೊಡೆಯ" ನಂತೆ ರಾಜ್ಯದಲ್ಲಿನ ಗೇಣಿದಾರರು ಸ್ವತಂತ್ರ ರೈತರಾಗಬೇಕಿತ್ತು. ಆದರೆ ನಮ್ಮ ರಾಜ್ಯದಲ್ಲಿ ಕಾಂಗ್ರೇಸ್ ತಂದ ವಿಚಿತ್ರ ಭೂಸುಧಾರಣೆಯ ಜಾರಿಯಿಂದಾಗಿ ಭೂಮಾಲೀಕರು ಹತ್ತಾರು ಲಕ್ಷ ಗೇಣಿದಾರರ ಕುಟುಂಬಗಳಿಂದ ಭೂಮಿಯನ್ನು ಕಸಿದುಕೊಂಡು ಓಡಿಸಿದರು. ಹೀಗಾಗಿ ಭೂಮಿಯನ್ನು ಕಳೆದುಕೊಂಡು ಈ ಭಾಗದ ಬಹತೇಕ ಜನ ನಿರ್ಗತಿಕರಾದರು. ಹೀಗಾಗಿ ಯುವಜನರೂ ಕೂಡ ತೀವ್ರಗತಿಯಲ್ಲಿ ನಿರ್ಗತಿಕರಾದರು.

ಪಟ್ಟಭದ್ರರ ಅಡ್ಡಗಾಲು

ಕರ್ನಾಟಕದದ ಬೇರೆ ಬೇರೆ ಭಾಗಗಳಲ್ಲಿ ಸ್ವಾತಂತ್ರ್ಯ ಬಂದ ಆರಂಭದ ದಶಕಗಳಲ್ಲಿ ಹೊಸ ಶಾಲೆಗಳು, ಹಳ್ಳಿಗಳಿಗೆ ರಸ್ತೆಗಳು ಮೊದಲಾದ ಅಭಿವೃದ್ಧಿ ಕೆಲಸಗಳು ಆಗುತ್ತಿದ್ದರೆ ಈ ಉತ್ತರ ಕರ್ನಾಟಕದ ಪ್ರದೇಶದ ಒಳಗಡೆ ಬಲಿಷ್ಠ ಭೂಮಾಲಿಕರು ಈ ಅಭಿವೃದ್ಧಿ ಕಾರ್ಯಗಳಿಗೆ ಅವಕಾಶ ಕೊಡದೆ ತಡೆವೊಡ್ಡಿ ಈ ಭಾಗ ಅಭಿವೃದ್ಧಿಯಿಂದ ವಂಚನೆಯಾಗುವಂತಾಯಿತು. **ಶಿಕ್ಷಣದ ದುಸ್ಥಿತಿ:** ಶಾಲೆಗೆ ಹೋಗುವ ಪ್ರಮಾಣ ಅದರಲ್ಲೂ ಗ್ರಾಮೀಣ ಯುವತಿಯರು ಮತ್ತು ದಲಿತ ಗ್ರಾಮೀಣ ಯುವತಿಯರ ಪರಿಸ್ಥಿತಿ ತುಂಬಾ ಹೀನಾಯವಾಗಿದೆ. ಜೀವನಕ್ಕೆ ಆಸರೆಯಾಗಿದ್ದ ಭೂಮಿ ಕಳೆದುಕೊಂಡರು. ಶಿಕ್ಷಣದಿಂದ ವಂಚಿತರಾದರು. ಈ ಹಿನ್ನೆಲೆಯಲ್ಲಿ ಈ ಭಾಗದ ಯುವಕ ಯುವತಿಯರು ಉತ್ತಮವಾದ ಉದ್ಯೋಗದ ಕನಸು ಕಾಣದೆ ಕೂಲಿಗಳಲ್ಲಿಯೇ ಅವಲಂಬಿತರಾಗಿ ದುರ್ಬಲ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಶಿಕ್ಷಣ ಇಲ್ಲದೆ ಇರುವುದರಿಂದ ಈ ಭಾಗದ ಮತ್ತು ರಾಜ್ಯ–



ದೇಶದ ಬೇರೆ ಬೇರೆ ಪ್ರದೇಶದ ಉದ್ಯೋಗವನ್ನು ದೊರಕಿಸಿಕೊಳ್ಳುವ ಹಾಗಿಲ್ಲ. ಹೀಗೆ ಅನೇಕ ಹುದ್ದೆಗಳ ನೇಮಕಾತಿಯಾಗುವವರು ಬೇರೆ ಬೇರೆ ಪ್ರದೇಶಗಳಿಂದ ಬಂದವರು. ಹೀಗಾಗಿ ಈ ಭಾಗದ ಬಹುತೇಕ ಯುವಜನತೆ ಶಿಕ್ಷಣ ವಂಚಿತರು ಹಾಗೂ ಉದ್ಯೋಗ ವಂಚಿತರೂ ಆಗಿದ್ದಾರೆ. ಉದಾಹರಣೆಗೆ ಅಭಿವೃದ್ಧಿ ಹೊಂದಿದ ಜಿಲ್ಲೆಗಳ ಮತ್ತು ಹಿಂದುಳಿದ ಜಿಲ್ಲೆಗಳ ಸಾಕ್ಷರತಾ ಪ್ರಮಾಣ(2011 ಜನಗಣತಿಯ ಪ್ರಕಾರ) ದಕ್ಷಿಣ ಕನ್ನಡ ಜಿಲ್ಲೆ ಶೇ. 88.62 ಆಗಿದ್ದರೆ, ಯಾದಗೀರ್ ಜಿಲ್ಲೆ ಶೇ.52.36 ರಷ್ಟಿದೆ. ಇನ್ನೂ ತಲಾ ವರಮಾನ 2009–2010 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂ.7,6438–00 ಇದ್ದರೆ ಬೀದರ್ ಜಿಲ್ಲೆ ರೂ.2,5078–00 ನ್ನು ಮಾತ್ರ ಹೊಂದಿದೆ.

ಉದ್ಯೋಗ ವಂಚಿತರು: ಮುಖ್ಯವಾಗಿ ಶಿಕ್ಷಣ ಪಡೆದ ಮಾನವ ಸಂಪನ್ಮೂಲ ಇಲ್ಲದಿರುವುದು. ರಸ್ತೆಗಳಿಲ್ಲದಿರುವುದು. ಇಂತಹ ಕಾರಣಕ್ಕಾಗಿ ಔದ್ಯೋಗಿಕವಾಗಿ ಹೆಚ್ಚು ಬೆಳೆಯಲಿಲ್ಲ. ಹೀಗಾಗಿ ಬೆಳೆಯುವ ಕೃಷಿ ಉತ್ಪನ್ನಗಳ ಪ್ರಾಥಮಿಕ ಸಂಸ್ಕರಣೆಗಳನ್ನು ಬಿಟ್ಟರೆ ಬೇರೆ ಹೆಚ್ಚೇನು ಇಲ್ಲ. ಸಿಮೆಂಟ್‌ಗೆ ಕಚ್ಚಾ ವಸ್ತುಗಳು ಸಿಗುತ್ತವೆಂದು ಸಿಮೆಂಟ್ ಕೈಗಾರಿಕೆಗಳು ಬೆಳೆದರೂ, ಸ್ಥಳೀಯರಿಗೆ ಉದ್ಯೋಗ ದೊರೆಯಲೇ ಇಲ್ಲ. ಇನ್ನು ಲಭ್ಯ ಇರುವ ಉದ್ಯೋಗದ ಅವಕಾಶಗಳನ್ನು ರಾಜ್ಯ ಸರ್ಕಾರ ಹೊರಗುತ್ತಿಗೆ ನೀಡುತ್ತಿದೆ. ಇಲ್ಲವೇ ಉದ್ಯೋಗಳನ್ನು ಕಡಿತ ಮಾಡಿ ಇಲ್ಲದಂತೆ ಮಾಡಿದೆ. ಸಂವಿಧಾನದ 371ರ ಕಲಮಿನ ತಿದ್ದುಪಡಿಯ ವಿಧಿಯಡಿ ಬಾರಿ ಅನುಕೂಲವಾಗುತ್ತದೆಂದು ಬಿಂಬಿಸಲಾಗುತ್ತಿದೆ. ಇದರಿಂದಾಗಿ ಬರಿ ಶಿಕ್ಷಣ ಮತ್ತು ಉದ್ಯೋಗದ ಪ್ರಶ್ನೆಗಳಲ್ಲಿ ಏನಾದರೂ ಒಂದಿಷ್ಟು ಆದ್ಯತೆಯ ಪ್ರಸ್ತಾಪಗಳು ಬರಬಹುದು. ಆದರೆ ಭೂರಹಿತ ಕೃಷಿಕೂಲಿಕಾರರ, ಬಡ ರೈತರ, ದಿನಗೂಲಿ ನೌಕರರ ಮತ್ತು ಲಿಂಗತಾರತಮ್ಯ ಅನುಭವಿಸುವ ಮಹಿಳೆಯರ ಪ್ರಶ್ನೆ, ಈ 371 ರ ವಿಧಿಯಡಿ ಬರುವುದಿಲ್ಲ. ಇನ್ನು ಕೇಂದ್ರ ಮತ್ತು ರಾಜ್ಯದ ನೀತಿಗಳು ಜನಮುಖಿ ಅಭಿವೃದ್ಧಿ ನೀತಿಗಳಾಗಿಲ್ಲ. ಬದಲಿಗೆ ಕೇವಲ ಕಾರ್ಪೋರೇಟ್ ಕಂಪನಿಗಳ ಪರವಾದ ನವ ಉದಾರೀಕರಣದ ನೀತಿಗಳನ್ನು ಅನುಸರಿಸುತ್ತಿರುವುದರಿಂದ ಸಾಮಾನ್ಯ ಜನತೆಗೆ ಇನ್ನಷ್ಟು ಕಷ್ಟಕರವಾದ ಪರಿಸ್ಥಿತಿಯನ್ನು ತಂದೊಡ್ಡಿವೆ. ಇಂತಹ ಎಷ್ಟೇ ಸಂವಿಧಾನದ ವಿಧಿಗಳು ಇದ್ದರೂ, ಜಾರಿಗೆ ತಂದರೂ ಈ ಬಹುತೇಕ ಪ್ರದೇಶದ ಜನತೆ ಅತ್ಯಂತ ಹೀನ ಸ್ಥಿತಿಯಲ್ಲಿದೆ. ಹೀಗಾಗಿ ಸಾಮಾಜಿಕ ಆರ್ಥಿಕ–ಮೂಲಭೂತ ಸೌಕರ್ಯಗಳು ಇಲ್ಲದ ಕಾರಣ ಆಧುನಿಕ ಕೈಗಾರಿಕೆಗಳು ಬೆಳೆಯಲು ಸಾಧ್ಯವಾಗಲಿಲ್ಲ. ಈ ಕಾರಣ ಸಣ್ಣ ಸಣ್ಣ ಮತ್ತು ಗುಡಿ ಕೈಗಾರಿಕೆಗಳು ಬೆಳೆಯಲು ಸಾಧ್ಯವಾಗಿಲ್ಲ. ಹೀಗಾಗಿ ಸ್ವಂತ ಉದ್ಯೋಗಗಳು ಸೃಷ್ಟಿಯಾಗಲಿಲ್ಲ. ಇದಕ್ಕೆಲ್ಲಾ ಮುಖ್ಯಕಾರಣ ಈಗಲೂ ಇಲ್ಲಿಯ 'ರಾಜಕಾರಣ' ಭೂಮಾಲಿಕ ಶಕ್ತಿಗಳ ಕೈಯಲ್ಲಿರುವುದು. ಹೀಗಾಗಿ ಇಲ್ಲಿರುವ ಆರ್ಥಿಕ–ಸಾಮಾಜಿಕ–ರಾಜಕೀಯ ಈ ಶಕ್ತಿಗಳ ಕೈಯಲ್ಲಿಯೇ ಇದೆ. ಹೀಗಾಗಿ ಉತ್ತರ ಕರ್ನಾಟಕಕ್ಕೆ ಸಾವಿರಾರು ಕೋಟಿ ಸುರಿದರೂ ಗಾಳಿಯಲ್ಲಿಯೇ ಮಂಗ ಮಾಯವಾಗುವಂತಾಗಿದೆ.


ಬಿಜೆಪಿ ಅಧಿಕಾರ–ಬಡವರಾಗುತ್ತಿರುವ ಯುವಜನ: ಇತ್ತೀಚಿನ ಬಿಜೆಪಿ ಸರ್ಕಾರ ಈ ಪ್ರದೇಶಗಳಿಂದ ಹೆಚ್ಚು ಆರಿಸಿ ಬಂದರೂ ಜನತೆ

ಪುಟ 14ಕ್ಕೆ

ಕುಂದಾಪುರ : ಹೋರಾಟದ ಹಾದಿಯಲ್ಲಿ ನಿವೇಶನ ರಹಿತರು

ರಾಜ್ಯದಲ್ಲಿ ಕನಿಷ್ಠ 40 ಲಕ್ಷ ಕುಟುಂಬಗಳು ವಸತಿ ರಹಿತವಾಗಿ ಬದುಕು ಸಾಗಿಸುತ್ತಿವೆ. ರಾಜ್ಯದಲ್ಲಿ ವಸತಿ ಮತ್ತು ನಿವೇಶನ ಸಮಸ್ಯೆ ಗಂಭೀರ ಹಂತಕ್ಕೆ ತಲುಪಿದ್ದು, ಇವೆರಡೂ ಪ್ರತ್ಯೇಕ ಸಮಸ್ಯೆಗಳಾಗಿ ಈ ರಾಜ್ಯವನ್ನು ಕಾಡುತ್ತಿದೆ. ನಿವೇಶನ ರಹಿತರು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ನೇತೃತ್ವದಲ್ಲಿ ನಿವೇಶನ ರಹಿತರಿಗೆ ನಿವೇಶನಕ್ಕಾಗಿ ನಿರಂತರ ನಡೆಸುತ್ತಿರುವ ಹೋರಾಟ ರಾಜ್ಯದಲ್ಲಿ ಈಗಾಗಲೇ ಜನಜನಿತವಾಗಿದೆ. ಇಂತಹ ಹೋರಾಟದ ಫಲವಾಗಿ ಕರ್ನಾಟಕವನ್ನು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡುತ್ತೇನೆಂಬ ಗುರಿಯನ್ನು ಘೋಷಿಸಬೇಕಾಗಿ ಬಂದಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ, ಮಾಜಿ ಶಾಸಕ ಜಿ.ವಿ. ಶ್ರೀರಾಮ ರೆಡ್ಡಿ ಹೇಳಿದರು.

ಅವರು ಕುಂದಾಪುರ ಪುರಸಭೆ ವ್ಯಾಪ್ತಿಯ ಮನೆ ನಿವೇಶನ ರಹಿತರ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಜಂಟಿಯಾಗಿ ಆಯೋಜಿಸಿದ್ದ ಕುಂದಾಪುರದ ಪುರಸಭೆಗೆ ಮುತ್ತಿಗೆ ಹಾಕುವ ಹೋರಾಟದ ಸಂದರ್ಭ ನಿವೇಶನ ರಹಿತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.



ಸರಕಾರವು ಹಲವು ರೀತಿಯ ವಸತಿ ಯೋಜನೆಗಳನ್ನು ಜಾರಿಗೆ ತಂದಿದ್ದರೂ, ಇವೆಲ್ಲವೂ ಅವೈಜ್ಞಾನಿಕ ತಳಹದಿಯಲ್ಲಿ ಜಾರಿಗೆ ಬಂದಿರುವುದರಿಂದ ಬಡವರ ಸಮಸ್ಯೆಗೆ ಪರಿಹಾರ ದೊರಕಿಲ್ಲ ಎಂದು ಹೇಳಿದರು.

ಪುರಸಭೆಯ ಅಧ್ಯಕ್ಷರು ಇತ್ತೀಚೆಗೆ ವಸತಿ ರಹಿತರಿಗೆ ಹಂಚಲು ಭೂಮಿ ಇಲ್ಲ ಎಂದು ಪತ್ರಿಕೆಗಳಿಗೆ ನೀಡಿದ ಹೇಳಿಕೆಯನ್ನು ಖಂಡಿಸಿದ ಶ್ರೀರಾಮ ರೆಡ್ಡಿ ಜನಪ್ರತಿನಿಧಿಗಳು ಜನರ ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು ಹೊರತು ಇಂತಹ ಹೇಳಿಕೆಗಳನ್ನು ನೀಡಿ ಜಾರಿಕೊಳ್ಳುವ ಪರಿಪಾಠ ನಾಚಿಕೆಗೇಡಿನ ಕೆಲಸ ಎಂದು ಹೇಳಿದರು.

ವಾಜಪೇಯಿ ನಗರ ನಿವೇಶನ ಯೋಜನೆಯಡಿಯಲ್ಲಿ ನಿವೇಶನ ರಹಿತರಿಗೆ ನಿವೇಶನ ವಿತರಿಸಲು ಸೂಕ್ತ ಸರಕಾರಿ ಜಾಗ ಪುರಸಭೆ ವ್ಯಾಪ್ತಿಯಲ್ಲಿ ಗುರುತಿಸಬೇಕು. ಪುರಸಭೆಯಿಂದ ಈಗಾಗಲೇ ಸೂಕ್ತ ಸ್ಥಳಕ್ಕಾಗಿ ಸರಕಾರಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆಯನ್ನು ಕೂಡಲೇ ಕಾರ್ಯಗತಗೊಳಿಸುವುದಕ್ಕೆ ಪುರಸಭೆ ಅಧಿಕಾರಿ ವರ್ಗ ಕ್ರಮಕೈಗೊಳ್ಳಬೇಕು. ಫೆಬ್ರವರಿ 11, 2011 ರಂದು ಸ್ವೀಕರಿಸಿದ 800 ಅರ್ಜಿಗಳನ್ನು ಪರಿಶೀಲಿಸಿ ಅರ್ಹ ನಿವೇಶನ ರಹಿತರ ಪಟ್ಟಿ ತಯಾರಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು. ಸರಕಾರದ ಆದೇಶದಂತೆ 2003 ರಲ್ಲಿ ಕುಂದಾಪುರ ಪುರಸಭೆ ವತಿಯಿಂದ ಸಮೀಕ್ಷೆ ನಡೆಸಿದ ನಿವೇಶನ ರಹಿತರ ಪಟ್ಟಿಯಂತೆ ಫಲಾನುಭವಿಗಳನ್ನು ಗುರುತಿಸಿ ಅಂತಿಮಗೊಳಿಸಬೇಕು. ಈ ಪಟ್ಟಿಯಲ್ಲಿರುವ ನಿವೇಶನ ರಹಿತರ ಅಸಮರ್ಪಕ ವಿಳಾಸವನ್ನು ಪುನರ್ ಪರಿಶೀಲಿಸಿ ಸಂಪೂರ್ಣ ವಿಳಾಸದಾರರ ಹೆಸರಿನ ಪಟ್ಟಿ ಅಂತಿಮಗೊಳಿಸಲು ಆಗ್ರಹಿಸಲಾಯಿತು.

ಕುಂದಾಪುರ ಪುರಸಭೆ ವ್ಯಾಪ್ತಿಯ ಮನೆ ನಿವೇಶನ ರಹಿತರ ಹೋರಾಟ ಸಮಿತಿ ಹಾಗೂ ಕೃಷಿಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಮೂಲಕ ಸಂಗ್ರಹಿಸಲಾದ 1,323 ಮನೆ ನಿವೇಶನ ರಹಿತರ ಅರ್ಜಿಗಳನ್ನು ಪುರಸಭೆ ಮುಖ್ಯಾಧಿಕಾರಿಯವರಿಗೆ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಪುರಸಭೆ ಅಧ್ಯಕ್ಷ ವಿ. ನರಸಿಂಹ, ಸದಸ್ಯೆ ಗುಣರತ್ನ ಉಪಾಧ್ಯಕ್ಷೆ ಕಲಾವತಿ, ಹೋರಾಟ ಸಮಿತಿಯ ಕೆ.ಶಂಕರ, ಮಹಾಬಲ ವಡೇರಹೋಬಳಿ, ಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ, ಉಪಾಧ್ಯಕ್ಷ ಯು. ದಾಸ ಭಂಡಾರಿ, ಕಾರ್ಯದರ್ಶಿ ವೆಂಕಟೇಶ ಕೋಣಿ, ಸುರೇಶ ಕಲ್ಲಾಗರ, ಡಿವೈಎಫ್‌ಐ ಮುಖಂಡ ಸುಧಾಕರ ಕಾಂಚನ್, ರಾಜೇಶ್ ವಡೇರಹೋಬಳಿ ಉಪಸ್ಥಿತರಿದ್ದರು.

ಆರಂಭದಲ್ಲಿ ಎಚ್. ನರಸಿಂಹ ಸ್ವಾಗತಿಸಿದರು. ಅಶ್ವಥ್ ಕುಮಾರ್ ವಂದಿಸಿದರು. ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಣೆ ಮಾಡಿದರು.

ವರದಿ: **ವೆಂಕಟೇಶ್ ಕೋಣಿ**

ಮಮತಾ ದೀದಿಗೆ ನೆತ್ತಿಗೇರಿದ ಮದ

ಕೆಲವು ವಾರಗಳ ಹಿಂದಿನ ಸಂಚಿಕೆಯಲ್ಲಿ ಪಶ್ಚಿಮ ಬಂಗಾಳದ ಮಮತಾ ದೀದಿ ಅಧಿಕಾರದ ಅಟ್ಟಹಾಸದ ಬಗ್ಗೆ ಬರೆಯಲಾಗಿತ್ತು. ಆದರೆ ಅದರ ನಂತರ ಅಂತಹ ಯಾವುದೇ ಘಟನೆಗಳು ಅಲ್ಲಿ ನಡೆದಿಲ್ಲ ಎಂದು ತಿಳಿದರೇ ಅದು ಶುದ್ಧ ಸುಳ್ಳಾದಿತು. ಏಕೆಂದರೆ ಅಲ್ಲಿ ಪ್ರತಿ ದಿನ ಒಂದಲ್ಲ ಒಂದು ರೀತಿಯ ಉದ್ಧಟತನದ ಪ್ರಸಂಗಗಳು ನಡೆಯುತ್ತಲೇ ಇರುತ್ತವೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಹಿಟ್ಲರ್‌ಶಾಹಿ ನಡವಳಿಕೆಗಳು ಸಾರ್ವತ್ರಿಕ ಟೀಕೆಗೆ ಗ್ರಾಸವಾಗುತ್ತಿರುತ್ತವೆ.

ರಾಜ್ಯದ ಜನರ ವಾಕ್ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಪತ್ರಿಕೆಗಳ ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದಂತೆ ಮಾಡಿದ್ದಾರೆ. ಜನ ಮತ್ತು ಪತ್ರಿಕೆಗಳು ರಾಜ್ಯದ ಅಭಿವೃಧ್ಧಿ ಕೆಲಸಗಳ ಕುರಿತು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಾಗದೆ, ತನ್ನ ಆಡಳಿತದಲ್ಲಿ ಆಗುತ್ತಿರುವ ಲೋಪ ದೋಷಗಳನ್ನು ಒಪ್ಪಿಕೊಳ್ಳದೆ ಪ್ರಶ್ನೆ ಕೇಳಿದವರ ಮೇಲೆ ಪೂರ್ವಾಗ್ರಹ ಪಿಡಿತವಾಗಿ ನೀವು ಮಾರ್ಕ್ಸ್‌ವಾದಿಗಳು, ಮಾವೋವಾದಿಗಳು ಎಂಬ ಹಣೆ ಪಟ್ಟಿ ಕಟ್ಟಿ ಅವರ ಮೇಲೆ ಕ್ರಮ ಕೈಗೊಳುವಂತೆ ಪೊಲೀಸ್ ಇಲಾಖೆಗೆ ಆದೇಶ ನೀಡುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಆದರೆ ದೀದಿಗೆ ಮಾತ್ರ ಅದು ತಪ್ಪು. ನಾನು ಜನರ ಮತ್ತು ಪತ್ರಿಕೆಗಳ ಸ್ವಾತಂತ್ರ್ಯ ಕಿತ್ತುಕೊಳುತ್ತಿದ್ದೇನೆ, ಪ್ರಜಾಪ್ರಭುತ್ವ ದೇಶದಲ್ಲಿ ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಕಾನೂನು, ಸಂವಿಧಾನ ವಿರೋಧವಾದ ಕಾರ್ಯ ಮಾಡುತ್ತಿದ್ದೇನೆ, ಎಂದು ಅನಿಸುತ್ತಿಲ್ಲ. ಬದಲಾಗಿ ತನ್ನ ಹುಂಬತನದ ಮಾತುಗಳಿಂದ ಮತ್ತು ಹುಚ್ಚು ಆಡಳಿತ ಕ್ರಮಗಳಿಂದ ಜನರ ಮೇಲೆ ಸವಾರಿ ಮಾಡುತ್ತಿದ್ದಾರೆ. ಇತ್ತೀಚಿಗೆ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಮಮತಾ ದೀದಿ ಸುದ್ದಿಯ ವಸ್ತು ಆಗಿದ್ದಾರೆ.

ವರದಿ 1) ಕಾರ್ಟೂನ್: ಮಮತಾ ಸರ್ಕಾರಕ್ಕೆ ದಂಡ

ದಿನೇಶ್ ತ್ರಿವೇದಿ ಅವರನ್ನು ಮಮತಾ ಬ್ಯಾನರ್ಜಿ ರೈಲ್ವೆ ಸಚಿವ ಸ್ಥಾನದಿಂದ ತೆಗೆದುಹಾಕಿದ ಬಳಿಕ ಮಮತಾ ಅವರನ್ನು ಅಣಕ ಮಾಡುವ ವ್ಯಂಗ್ಯಚಿತ್ರಗಳು ಇಂಟರ್ನೆಟ್‌ನಲ್ಲಿ ಹರಿದಾಡುತ್ತಿದ್ದವು. ಅಂಥ ಒಂದು ವ್ಯಂಗ್ಯಚಿತ್ರದ ಇ-ಮೇಲ್ ಪ್ರೊ. ಅಂಬಿಕೇಶ್ ಮಹಾಪಾತ್ರ ಅವರಿಗೂ ಬಂದಿತ್ತು. ಅದನ್ನು ಅವರ ಸ್ನೇಹಿತರಿಗೆ ಕಳುಹಿಸಿದರು ಎಂಬ ಕಾರಣಕ್ಕೆ ಅಂಬಿಕೇಶ್‌ರನ್ನು ಬಂಧಿಸಲಾಗಿತ್ತು. ಅದನ್ನು ಪ್ರಶ್ನಿಸಿದ್ದ ಸುಬ್ರತಾ ಸೇನ್‌ಗುಪ್ತಾ ಅವರನ್ನು ಬಂಧನ ಮಾಡಲಾಗಿತ್ತು.

ಆದರೆ ರಾಜ್ಯ ಮಾನವ ಹಕ್ಕುಗಳ ಆಯೋಗ ಇವರಿಬ್ಬರಿಗೂ ಸರ್ಕಾರ ತಲಾ 50 ಸಾವಿರ ರೂಗಳನ್ನು ಪರಿಹಾರ ನೀಡಬೇಕೆಂದು ಆದೇಶಿಸಿದೆ. ಅಲ್ಲದೆ ಈ ಇಬ್ಬರನ್ನೂ ಬಂಧಿಸಿದ್ದ ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆ ನಡೆಸುವಂತೆಯೂ ಶಿಫಾರಸು ಮಾಡಿದೆ. ಈ ಪರಿಹಾರ ಮತ್ತು ಇಲಾಖೆಯ ತನಿಖೆಗೆ ನ್ಯಾಯಮೂರ್ತಿ ಅಶೋಕ್ ಕುಮಾರ್ ಗಂಗೂಲಿ ಮತ್ತು ಇಬ್ಬರು ಸದಸ್ಯರನ್ನೊಳಗೊಂಡ ಮಾನವ ಹಕ್ಕು ಆಯೋಗವು ಆರು ತಿಂಗಳ ಗಡವು ನೀಡಿದೆ. ಇದರಿಂದ ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ತೀವ್ರ ಮುಖ ಭಂಗವಾಗಿದೆ.


ಕೃಪೆ : ದಿ ಹಿಂದೂ

ವರದಿ 2) ಮಮತಾ ಪ್ರಶ್ನಿಸಿದ್ದ ರೈತನಿಗೆ ಜಾಮೀನು ನಿರಾಕರಣೆ

ಝಾರ್ ಎಂಬ ಗ್ರಾಮದಲ್ಲಿ 'ದುಡ್ಡಿಲ್ಲದ ರೈತರು ಸಾಯುತ್ತಿದ್ದಾರೆ. ಅವರಿಗಾಗಿ ನೀವೇನು ಮಾಡಿದ್ದೀರಿ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಬಹಿರಂಗ ಸಭೆಯಲ್ಲಿ ಪ್ರಶ್ನಿಸಿದ ತಪ್ಪಿಗೆ ಬಂಧನದ ಶಿಕ್ಷೆಗೊಳಗಾಗಿರುವ ರೈತ ಶೀಲಾದಿತ್ಯ ಚೌಧುರಿಗೆ ಜಾಮೀನು ನೀಡಲು ಸ್ಥಳೀಯ ನ್ಯಾಯಾಲಯ ನಿರಾಕರಿಸಿದ ವರದಿ ಪ್ರಕಟವಾಗಿದೆ. ಆತನಿಗೆ, ನಕ್ಸಲ್, ಮಾವೋವಾದಿ ಎಂದು ಹಣೆ ಪಟ್ಟಿ ಕಟ್ಟಿದ ಮಮತಾ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವರದಿ 3) ನ್ಯಾಯಾಲಯದ ತೀರ್ಪು ಬಿಕರಿಗೆ: ದೀದಿ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಈಗ ನ್ಯಾಯಾಂಗವನ್ನೇ ನಿಂದಿಸುವಂತಹ ಹೇಳಿಕೆ ನೀಡಿ ವ್ಯಾಪಕ ಖಂಡನೆಗೆ ಗುರಿಯಾಗಿದ್ದಾರೆ. ವಿಧಾನ ಸಭೆಯಲ್ಲಿ ನ್ಯಾಯಾಂಗವನ್ನು ಬಾಯಿಗೆ ಬಂದಂತೆ ತೆಗಳುತ್ತಾ. ಕೆಲವೊಮ್ಮೆ ಕೋರ್ಟ್‌ಗಳ ತೀರ್ಪುಗಳನ್ನೂ ಹಣ ಕೊಟ್ಟು ಖರೀದಿಸಲಾಗುತ್ತದೆ. ನ್ಯಾಯಾಂಗದಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂದು ಹೇಳಿದ್ದಾರೆ. ಇತ್ತೀಚಿಗೆ ಕಾರ್ಟೂನ್ ವಿಷಯದಲ್ಲಿ ಮಾನವ ಹಕ್ಕು ಆಯೋಗದ ತೀರ್ಪಿನಿಂದ ತೀವ್ರ ಮುಖಭಂಗ ಅನುಭವಿಸಿದ ಹಿನ್ನಲೆಯಲ್ಲಿ ಮಮತಾ ಬ್ಯಾನರ್ಜಿ ನ್ಯಾಯಾಂಗದ ಮೇಲೆ ಈ ರೀತಿ ಆರೋಪ ಮಾಡಿದ್ದಾರೆ.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಬೇಜವಾಬ್ದಾರಿತನದ ಹೇಳಿಕೆಗೆ ವಿವಿಧ ರಾಜಕೀಯ ಪಕ್ಷಗಳು, ಕಾನೂನು ತಜ್ಞರು, ಹಿರಿಯ ನ್ಯಾಯವಾದಿಗಳಿಂದ ದೇಶದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

– ಮುರುಗೇಶ್ ವಿ. ಕರ್ಕಿಕಟ್ಟಿ

ನವ-ಉದಾರವಾದದ ಕೆಸರಲ್ಲಿ ಹೂತು ಹೋಗಿರುವ ಸ್ವಾತಂತ್ರ್ಯೋತ್ಸವ ದಿನದ ಭಾಷಣ

'ಪೀಪಲ್ಸ್ ಡೆಮಾಕ್ರೆಸಿ' ವಾರ ಪತ್ರಿಕೆಯ ಆಗಸ್ಟ್ 16, 2012 ರ ಸಂಚಿಕೆಯ ಸಂಪಾದಕೀಯ

ಪ್ರಧಾನ ಮಂತ್ರಿಗಳ ಆಗಸ್ಟ್ 15 ಭಾಷಣ ಕಳಾಹೀನವಾಗಿತ್ತು. ಇದು ನಾಲ್ಕನೇ ವರ್ಷ ಅಧಿಕಾರದಲ್ಲಿರುವ ಯುಪಿಎ-2 ಸರಕಾರದ - ನವ-ಉದಾರವಾದ ಮತ್ತು ಭ್ರಷ್ಟಾಚಾರದ ಕೆಸರಿನಲ್ಲಿ ಸಿಲುಕಿಕೊಂಡು ಕೈಕಾಲು ಬಡಿಯುತ್ತಿರುವ ಒಂದು ಸರಕಾರದ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸಿರುವ ಒಂದು ಭಾಷಣ. ಅದರಲ್ಲಿ ರಾಜಕೀಯ ಒಮ್ಮತವಿಲ್ಲ ಎಂಬ ಮೋಸದ ಮಾತಿತ್ತು, ಪರಿಣಾಮಕಾರಿ ಲೋಕಪಾಲ ಕಾನೂನಿನ ಬಗ್ಗೆ ಕಪಟತನದ ಮಾತಿತ್ತು.

65ನೇ ಸ್ವಾತಂತ್ರ್ಯೋತ್ಸವದಂದು ಪ್ರಧಾನ ಮಂತ್ರಿಗಳು ಕೆಂಪು ಕೋಟೆಯ ಎತ್ತರದಿಂದ ತನ್ನ ಸಾಂಪ್ರದಾಯಿಕ ಭಾಷಣ ಮಾಡಿದರು. ಪ್ರಧಾನ ಮಂತ್ರಿಗಳ ಆಗಸ್ಟ್ 15ರ ಭಾಷಣ ಕಳೆದ ಒಂದು ವರ್ಷದಲ್ಲಿ ದೇಶ ಹೇಗೆ ರೂಪುಗೊಂಡಿದೆ ಎಂದು ಜನತೆಗೆ ಹೇಳುವುದಕ್ಕಾಗಿ ಮತ್ತು ಮುಂದಿನ ಒಂದು ವರ್ಷ ದೇಶದ ಮುಂದಿರುವ ಸವಾಲುಗಳನ್ನು ಸರಕಾರ ಹೇಗೆ ಎದುರಿಸಬೇಕೆಂದಿದೆ ಎಂದು ಸೂಚಿಸುವುದಕ್ಕಾಗಿ.

ಈ ವರ್ಷ ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತಿರುವುದು ದೇಶವನ್ನು ಗಂಭೀರ ಆರ್ಥಿಕ ಸಂಕಟಗಳು ಆವರಿಸಿಕೊಂಡಿರುವ ಸಮಯದಲ್ಲಿ. ಜನತೆ ವಿಪರೀತ ಬೆಲೆಯೇರಿಕೆಯಿಂದ ನರಳುತ್ತಿದ್ದಾರೆ, ಆಹಾರ ಹಣದುಬ್ಬರ ದರ ಸ್ವಾತಂತ್ರ್ಯ ದಿನದ ಮುನ್ನಾದಿನದ ಪ್ರಕಟಣೆಯಂತೆ 10 ಶೇಕಡಾ ದಾಟಿದೆ. ಮಳೆಯ ಕೊರತೆಯಿಂದ ದೇಶದ ವಿಭಿನ್ನ ಭಾಗಗಳಲ್ಲಿ ಬರ ಪರಿಸ್ಥಿತಿಯಿದೆ. ಕೈಗಾರಿಕಾ ಉತ್ಪಾದನೆ ಹೊಸ ಆಳಕ್ಕೆ ಇಳಿದಿದೆ. ರಫ್ತುಗಳು ತೀವ್ರವಾಗಿ ಕುಸಿದಿವೆ. ಇವೆಲ್ಲಾ ಜನತೆಯ ಉದ್ಯೋಗ ಮತ್ತು ಜೀವನಾಧಾರಕ್ಕೆ ಎರಗಲಿರುವ ಕರಾಳ ದಿನಗಳ ಲಕ್ಷಣಗಳು.

ರಾಜಕೀಯ ಒಮ್ಮತವಿಲ್ಲ ಎಂಬ ವಂಚನೆ

ಇಂತಹ ಸನ್ನಿವೇಶದಲ್ಲಿ ಡಾ. ಮನಮೋಹನ ಸಿಂಗ್‌ರವರ ಭಾಷಣವಂತೂ ಕಳಾಹೀನವಾಗಿತ್ತು. ಇದು ನಾಲ್ಕನೇ ವರ್ಷ ಅಧಿಕಾರದಲ್ಲಿರುವ ಯುಪಿಎ-2 ಸರಕಾರದ - ನವ-ಉದಾರವಾದ ಮತ್ತು ಭ್ರಷ್ಟಾಚಾರದ ಕೆಸರಿನಲ್ಲಿ ಸಿಲುಕಿಕೊಂಡು ಕೈಕಾಲು ಬಡಿಯುತ್ತಿರುವ ಒಂದು ಸರಕಾರದ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸಿರುವ ಒಂದು ಭಾಷಣ.

"ದೇಶದೊಳಗೆ ತ್ವರಿತ ಆರ್ಥಿಕ ಬೆಳವಣಿಗೆಯ ಒಂದು ವಾತಾವರಣವನ್ನು ನಿರ್ಮಿಸುವ ಬಗ್ಗೆ ಹೇಳುವುದಾದರೆ, ಹಲವು ವಿಷಯಗಳಲ್ಲಿ ಒಂದು ರಾಜಕೀಯ ಒಮ್ಮತದ ಕೊರತೆಯಿಂದಾಗಿ ಇದನು ಸಾಧಿಸುವುದು ನಮಗೆ ಆಗುತ್ತಿಲ್ಲ ಎಂಬುದು ನನ್ನ ನಂಬಿಕೆ" ಎಂದರು ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ. ಇದೊಂದು ವಂಚಕ ಹೇಳಿಕೆ. ಪ್ರಧಾನ ಮಂತ್ರಿಗಳು ಮತ್ತು ಅವರ ಸರಕಾರ ನವ-ಉದಾರವಾದಿ ಕ್ರಮಗಳನ್ನು ಮುಂದೊತ್ತಲು ಏನೆಲ್ಲಾ ಪ್ರಯತ್ನ ನಡೆಸುತ್ತಿದೆ. ಅದಕ್ಕಾಗಿ ಅದು ಹಿಡಿಯದ ಅಡ್ಡ ಮಾರ್ಗಗಳಿಲ್ಲ. ಇತ್ತೀಚೆಗೆ ಪ್ರಧಾನ ಮಂತ್ರಿಗಳು ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಪ್ರಾಜೆಕ್ಟುಗಳಲ್ಲಿ ಖಾಸಗಿಯವರಿಗೆ ಭೂಮಿ ವರ್ಗಾವಣೆಯನ್ನು ಸಂಪುಟದ ಮಂಜೂರಾತಿಯಿಲ್ಲದೆ ಮಾಡಬಾರದು ಎಂಬ ನಿಷೇಧವನ್ನು ತೆಗೆದಿದ್ದಾರೆ. ಕಾರ್ಯಕಾರೀ ನಿರ್ಣಯದಿಂದ ಈ ರೀತಿ ಭೂಮಿ ವರ್ಗಾವಣೆ ಭ್ರಷ್ಟ ಆಚರಣೆಗಳಿಗೆ ಅವಕಾಶ ಕೊಡುತ್ತದೆ. ಇದೇ ರೀತಿ, ಸರಕಾರ ವಿಭಿನ್ನ ವಲಯಗಳನ್ನು ವಿದೇಶಿ ನೇರ ಹೂಡಿಕೆಗಳಿಗೆ ತೆರೆಯುವಾಗ ಯಾವುದೇ ರಾಜಕೀಯ ಒಮ್ಮತದ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಸದ್ಯದ ಆರ್ಥಿಕ ನಿಧಾನಗತಿಯನ್ನೇ ನೆಪ ಮಾಡಿಕೊಂಡು ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ವಿದೇಶಿ ಮತ್ತು ದೇಶಿ ಬಂಡವಾಳಕ್ಕೆ ಮತ್ತು ಕಾರ್ಪೊರೇಟ್‌ಗಳಿಗೆ ನೆರವಾಗುವ, ತೆರಿಗೆಗಳನ್ನು ತಪ್ಪಿಸಿಕೊಳ್ಳುವ ಹಲವಾರು ಕ್ರಮಗಳನ್ನು ಮುಂದೊತ್ತುವಲ್ಲಿ ಮಗ್ನರಾಗಿದ್ದಾರೆ.



ಈಡೇರದ ಭರವಸೆಗಳು

ಕಳೆದ ವರ್ಷ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನ ಮಂತ್ರಿಗಳು ಏರುತ್ತಿರುವ ಬೆಲೆಗಳ ಮೇಲೆ ಹತೋಟಿ ಎಲ್ಲಕ್ಕೂ ಮಿಗಿಲಾದ ಆದ್ಯತೆ ಎಂದಿದ್ದರು. ಭೂಮಿಯನ್ನು ಅವಲಂಬಿಸಿದವರ ಹಿತಗಳನ್ನು ರಕ್ಷಿಸುವ ಒಂದು ಹೊಸ ಭೂಸ್ವಾಧೀನ ಮತ್ತು ಮರುವಸತಿ ಕಾನೂನನ್ನು ತರುವುದಾಗಿ ಭರವಸೆ ನೀಡಿದ್ದರು. ಈ ವರ್ಷದ ಭಾಷಣದಲ್ಲಿ ಈ ದಿಕ್ಕಿನಲ್ಲಿ ಕೈಗೊಂಡ ಕ್ರಮಗಳ ಪ್ರಸ್ತಾಪವೇ ಇಲ್ಲ. ಬೆಲೆಗಳ ನಾಗಾಲೋಟ ಮುಂದುವರೆದಿದೆ ಮತ್ತು ಒಂದು ವರ್ಷವಾದರೂ ಭೂಸ್ವಾಧೀನ ಮತ್ತು ಮರುವಸತಿ ಕಾನೂನನ್ನು ಸಂಸತ್ತು ಇನ್ನೂ ಅಂಗೀಕರಿಸಿಲ್ಲ. ಅತ್ಯಂತ ತುರ್ತಾಗಿ ತರಬೇಕಾಗಿದ್ದ ಆಹಾರ ಭದ್ರತಾ ಕಾನೂನಿನ ಬಗ್ಗೆ ಪ್ರಧಾನ ಮಂತ್ರಿಗಳು ಮೌನ ವಹಿಸಿದ್ದಾರೆ.

2011ರ ಭಾಷಣದಲ್ಲಿ ಪ್ರಧಾನ ಮಂತ್ರಿಗಳು ಭ್ರಷ್ಟಾಚಾರದ ವಿಷಯಕ್ಕೆ ಸಾಕಷ್ಟು ಸ್ಥಳಾವಕಾಶ ನೀಡಿದ್ದರು. "ಇತರ ಕೆಲವು ಘಟನೆಗಳಲ್ಲಿ, ಸರಕಾರದ ವಿವೇಚನಾ ಅವಕಾಶವನ್ನು ಆಯ್ದ ಕೆಲವರಿಗೆ ಅನುಕೂಲ ಕಲ್ಪಿಸಲು ಬಳಸಲಾಗಿದೆ. ಸರಕಾರೀ ಕಾಂಟ್ರಾಕ್ಟುಗಳನ್ನು ತಪ್ಪು ವ್ಯಕ್ತಿಗಳಿಗೆ ತಪ್ಪಾಗಿ ನೀಡಿದ ಸಂದರ್ಭಗಳೂ ಇವೆ. ಇಂತಹ ಚಟುವಟಿಕೆಗಳು ಅಡೆ ತಡೆಯಿಲ್ಲದೆ ಮುಂದುವರೆಯಲು ಬಿಡಲಾಗದು" ಎಂದು ಅವರು ಹೇಳಿದ್ದರು.

ಯುಪಿಎ ಆಡಳಿತದ ಪ್ರಧಾನ ಲಕ್ಷಣವಾಗಿ ಬಿಟ್ಟಿರುವ ಬೃಹತ್ ಭ್ರಷ್ಟಾಚಾರ ಕಲ್ಲಿದ್ದಲು ಬ್ಲಾಕುಗಳ ಹಂಚಿಕೆಯ ಕುರಿತ ಸಿಎಜಿ ಯ ಇತ್ತೀಚಿನ ವರದಿಯಿಂದ ಮತ್ತೊಮ್ಮೆ ಬಯಲಿಗೆ ಬಂದಿದೆ. ಈ ಕಾಂಟ್ರಾಕ್ಟುಗಳನ್ನು ನೀಡುವಲ್ಲಿ 1.8ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಭ್ರಷ್ಟಾಚಾರ-ಕಪಟ ಮಾತು

ಭ್ರಷ್ಟಾಚಾರವನ್ನು ನಿಗ್ರಹಿಸುವಲ್ಲಿ ಒಂದು ಕ್ರಮವಾಗಿ ಒಂದು ಪರಿಣಾಮಕಾರಿ ಲೋಕಪಾಲ ಕಾನೂನನ್ನು ತರಲಾಗುವುದು ಎಂದು ಕಳೆದ ವರ್ಷದ ಭಾಷಣದಲ್ಲಿ ಭರವಸೆ ನೀಡಲಾಗಿತ್ತು. "ಈ ಕ್ಷೇತ್ರದಲ್ಲಿ ಕಳೆದ ಒಂದು ವರ್ಷದಲ್ಲಿ ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳಲು ನನಗೆ ಸಂತೋಷವಾಗುತ್ತದೆ" ಎಂಬ ಪ್ರಧಾನಿ ಭಾಷಣದಲ್ಲಿನ ಪ್ರಕಟಣೆ ಕಪಟತನದ್ದು. ಇದಕ್ಕೆ ಅವರು ಲೋಕಸಭೆಯಲ್ಲಿ ಅಂಗೀಕರಿಸಿದ ಲೋಕಪಾಲ ಮಸೂದೆಯನ್ನು ಉದಾಹರಣೆಯಾಗಿ ತೋರಿಸಿದರು. ರಾಜ್ಯಸಭೆಯಲ್ಲಿ, ಕಳೆದ ಡಿಸೆಂಬರಿನಲ್ಲಿ ಲೋಕಪಾಲ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಮುಂದಿಟ್ಟ ತಿದ್ದುಪಡಿಗಳನ್ನು ವಿಫಲಗೊಳಿಸುವ ಪ್ರಯತ್ನ ನಡೆಯಿತು. ಕಾಂಗ್ರೆಸ್ ಮುಖಂಡತ್ವ ಉನ್ನತ ಹಂತದ ಭ್ರಷ್ಟಾಚಾರದ ಅಪರಾಧಿಗಳನ್ನು ರಕ್ಷಿಸುವ ಪ್ರಯತ್ನದಲ್ಲಂತೂ ಎಂದೂ ಹಿಂದೆ ಬಿದ್ದಿಲ್ಲ.

ಪ್ರಧಾನ ಮಂತ್ರಿಗಳು ಅಸ್ಸಾಂನ ಬೋಡೋಲ್ಯಾಂಡ್ ಪ್ರದೇಶದಲ್ಲಿ ವ್ಯಾಪಕ ಪ್ರಮಾಣದ ಕೋಮು ಹಿಂಸಾಚಾರದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಆದರೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರ ಸೂಕ್ತ ಸಮಯದಲ್ಲಿ ಮತ್ತು ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸದೆ ಪರಿಸ್ಥಿತಿ ಗಂಭೀರವಾಗುವಂತೆ ಮಾಡಿದವು. ಬೇರೆಡೆಗಳಲ್ಲೂ ಕೋಮುವಾದಿ ಹಿಂಸಾಚಾರದ ಭೀತಿ ಮತ್ತು ಘಟನೆಗಳ ಆತಂಕಕಾರಿ ಲಕ್ಷಣಗಳು ಕಂಡಿದೆ. ಉತ್ತರ ಪ್ರದೇಶದಲ್ಲಿ, ನಿರ್ದಿಷ್ಟವಾಗಿ ಆ ರಾಜ್ಯದ ಪಶ್ಚಿಮ ಭಾಗದಲ್ಲಿ ಕೋಮು ಗಲಭೆಗಳ ಒಂದು ಸರಣಿಯೇ ಕಾಣ ಬಂದಿದೆ. ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯನ್ನು ಬಳಸಿಕೊಂಡು ಜನಗಳಲ್ಲಿ ಕೋಮುವಾದಿ ಬಿಗುವಿಗೆ ತಿದಿಯೂದಲು ಕೋಮುವಾದಿ ಶಕ್ತಿಗಳು ಪ್ರಯತ್ನಿಸುತ್ತಿವೆ. ಪುಣೆಯಲ್ಲಿನ ಸ್ಫೋಟಗಳನ್ನು ಇಂತಹ ಉಗ್ರಗಾಮಿ ಶಕ್ತಿಗಳ ಕೈವಾಡದ ಒಂದು ಭಾಗವೆಂದು ಕಾಣಬೇಕಾಗಿದೆ. ಸ್ವತಂತ್ರ ಭಾರತದ ಜಾತ್ಯಾತೀತ ಆಧಾರವನ್ನು ಕಾಯ್ದುಕೊಳ್ಳುವಲ್ಲಿ ಹೆಚ್ಚಿನ ಎಚ್ಚರ ಮತ್ತು ಪ್ರಯತ್ನ ಬೇಕಾಗಿದೆ.

ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಜನತೆಯನ್ನು ಸಂಕಟಕ್ಕೀಡು ಮಾಡುವ, ಅಸಮಾನತೆಗಳನ್ನು ಹೆಚ್ಚಿಸುವ ಸರ್ವವ್ಯಾಪೀ ಶೋಷಣೆಯ ವಿರುದ್ಧ ಹೋರಾಟವನ್ನು ದ್ವಿಗುಣಗೊಳಿಸುವ ಪಣ ತೊಡಬೇಕಾಗಿದೆ. ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆಯ ಅನ್ವೇಷಣೆಯನ್ನು ಮುಂದುವರೆಸಬೇಕಾಗಿದೆ. ಇದರಿಂದ ಮಾತ್ರವೇ ನಿಜವಾದ ಸ್ವಾತಂತ್ರ್ಯದ ಗುರಿ ಈಡೇರಲು ಸಾಧ್ಯ.



ಆಹಾ ! 'ಬರ'ದ ಕೊಯ್ಲು !!

ಎಲ್ಲ ಕಡೆ ಮಾತು 'ಮಳೆ ಕೊಯ್ಲು'ನ ಬಗೆಗೆ ಇರುವಾಗ ಪಿ. ಸಾಯಿನಾಥ್ 'ಬರ'ದ ಕೊಯ್ಲಿನ ಸಮಾಚಾರ ನೀಡುತ್ತಿದ್ದಾರೆ. ಒಳ್ಳೆಯ ಮಳೆಗಾಲದಲ್ಲೂ – ಹಸಿರು ಉಕ್ಕುವಲ್ಲಿಯೂ 'ಬರ ಅಪ್ಪಳಿಸಿ' ಮೌನವಾಗಿ ಬಿಕ್ಕುವ ರೈತರ ಕಣ್ಣೀರನ್ನು ಅವರು ಕಂಡುಹಿಡಿದ್ದಾರೆ. 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಯಾಕೆ ? ಅಂತ ಅವರು ಅಲ್ಲಲ್ಲಿ, ಹುಡುಕಿ ಹೆಕ್ಕಿಕೊಂಡದ್ದನ್ನು ಇಲ್ಲಿ ಹರಡಿದ್ದಾರೆ. ಕಂಡುಕೊಂಡರೆ ಎಷ್ಟೋ ಅರ್ಥಗಳು ಸಿಗುವ ಪುಸ್ತಕದ ಈ ಅಧ್ಯಾಯ– ನಿಮಗಾಗಿ.

ಈ ದೇಶ ಎದುರಿಸುತ್ತಿರುವ ಅತಿ ಗಂಭೀರ, ಪ್ರಶ್ನಾತೀತ ಸಮಸ್ಯೆ ಎಂದರೆ ಬರ. ಬರ ಪರಿಹಾರ ಎನ್ನುವುದೂ ಸಹ ಅಷ್ಟೇ, ಪ್ರಶ್ನಾತೀತವಾಗಿ ಗ್ರಾಮೀಣ ಭಾರತದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಉದ್ಯಮ. ಎಷ್ಟೋ ಬಾರಿ ಈ ಎರಡರ ನಡುವೆ ಇರುವ ಸಂಬಂಧ ಮಾತ್ರ ಅತ್ಯಲ್ಪ. ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಿಗೆ ಪರಿಹಾರ ಹೋಗಬಹುದು. ಕೊರತೆ ಇರುವ ಪ್ರದೇಶಗಳಿಗೆ ಹೋದ ಕಡೆಯೂ ಸಹ ಯಾರಿಗೆ ಅಗತ್ಯವಿದೆಯೋ ಅವರಿಗೆ ಇದರಿಂದ ಅನುಕೂಲ ಆಗಿರುವುದು ಕಡಿಮೆ. ಹಾಗಾಗಿಯೇ ಕೆಲವರು ಬರಪರಿಹಾರವನ್ನು 'ಮೂರನೆಯ ಬೆಳೆ' ಎಂದು ಕರೆಯುವುದು. ಇಲ್ಲಿ ವ್ಯತ್ಯಾಸವೆಂದರೆ ಈ ಮೂರನೆ ಬೆಳೆಯ ಲಾಭ ಪಡೆಯುವವರು ಇದನ್ನು ಬಿತ್ತಿದವರಲ್ಲ.

ಬರ'ಪರಿಹಾರ'ದ ಬಹುಭಾಗ ಹೋಗುವುದು ಖಾಸಗಿಗಳ ಕೈಯಲ್ಲಿರುವ ಗುತ್ತಿಗೆಗೆ. ಇವು ರಸ್ತೆ ನಿರ್ಮಿಸಲು, ಬಾವಿ ತೋಡಲು, ನೀರಿನ ಟ್ಯಾಂಕರ್‌ಗಳನ್ನು ಕಳಿಸುವುದು, ಟ್ಯಾಂಕುಗಳ ರಿಪೇರಿಯಂತಹ ಕೆಲಸಗಳಿಗೆ. ಇದರ ವೆಚ್ಚ ಎಷ್ಟಾಗಬಹುದು ಎಂದು ಯೋಚಿಸಿ. ಮತ್ತೆ ಯೋಚಿಸಿ ನೋಡಿ. ಒಂದು ವರ್ಷದಲ್ಲಿ ಈ ಉದ್ಯಮಕ್ಕೆ ಸೇರುವ ಹಣ ಬಿಹಾರದ ಪಶುಸಂಗೋಪನಾ ಇಲಾಖೆಯ ಹಣವನ್ನು ಕ್ಷುಲ್ಲಕವಾಗಿಸುತ್ತದೆ. ಈ ಬಿಹಾರ (ಮೇವಿನ???) ಹಗರಣ ಒಂದೂವರೆ ದಶಕಗಳ ಕಾಲ ಇತ್ತು. ಈ ಹಗರಣದ ವಿಶೇಷವೆಂದರೆ ಇದು 'ಕಾನೂನುಬದ್ಧ'ವಾಗಿತ್ತು. ಅದಕ್ಕೊಂದು 'ಆತ್ಮ'ವೂ ಇತ್ತು. ಇದೆಲ್ಲಾ ಒಳ್ಳೆಯದಕ್ಕೇ. ದುರಂತವೆಂದರೆ ಇದು ಬರ ಹಾಗು ನೀರಿನ ಕೊರತೆಯಂತಹ ನೈಜ ಸಮಸ್ಯೆಯನ್ನು ನಿವಾರಿಸಲು ಯತ್ನಿಸಿದ್ದು ಅಪರೂಪವಾಗಿ.



1994–95ರ ಒಂದು ವರ್ಷದಲ್ಲಿಯೇ ಮಹಾರಾಷ್ಟ್ರ ಸರ್ಕಾರ ಬರ ಹಾಗು ನೀರಿನ ಕೊರತೆಯನ್ನು ಅತ್ಯಂತ ತುರ್ತಾಗಿ ಎದುರಿಸಲು 1,170 ಕೋಟಿ ರೂಗಳನ್ನು ಖರ್ಚು ಮಾಡಿತು.

ಇದು ಟೀ, ಕಾಫಿ, ಸಿಮೆಂಟ್, ಆಟೋಮೊಬೈಲ್ ಕ್ಷೇತ್ರಗಳಂತಹ ಸಂಘಟಿತ ವಲಯದ ಎಲ್ಲಾ ಪ್ರಮುಖ ಕಂಪನಿಗಳ ಹಿಂದಿನ ವರ್ಷದ ಒಟ್ಟು ಆದಾಯಕ್ಕಿಂತ ಮಿಗಿಲಾದದ್ದು. ಭಾರತದ ಆರ್ಥಿಕತೆ ವಿಚಕ್ಷಣಾ ಕೇಂದ್ರ (ಸಿಎಂಐಇ) ನ ವರದಿ ಪ್ರಕಾರ ತೆರಿಗೆ ಕಡಿತದ ನಂತರ ಈ ಕಂಪನಿಗಳ ಒಟ್ಟು ಆದಾಯ 1,149 ಕೋಟಿ.

1995ರ ಆಗಸ್ಟಿನಲ್ಲಿ ಪ್ರಧಾನಿ ನರಸಿಂಹರಾವ್ ಅವರು ಒರಿಸ್ಸಾದಲ್ಲಿ ಬರವಿರೋಧಿ ಯೋಜನೆಯೊಂದನ್ನು ಉದ್ಘಾಟಿಸಿದರು. ಈ ಯೋಜನೆ ವರ್ಷಕ್ಕೆ 750 ಕೋಟಿಯಂತೆ ಆರು ವರ್ಷಗಳಲ್ಲಿ 4557 ಕೋಟಿಗಳನ್ನು ಕಾಲಾಹಂಡಿ, ಬೊಳಾಂಗೀರ್, ಕೋರಾಪುಟ್‌ನಂತಹ ಕೆಲವೇ ಜಿಲ್ಲೆಗಳ ಮೇಲೆ ಖರ್ಚು ಮಾಡುವುದಿತ್ತು. ಕೊರತೆಯನ್ನು ಹೊಡೆದೋಡಿಸಿ ಉತ್ತಮ ಮೂಲ ಸೌಕರ್ಯಗಳನ್ನು ನಿರ್ಮಿಸುವುದಾಗಿದ್ದಲ್ಲಿ ಇದರ ಮೇಲೆ ವೆಚ್ಚ ಮಾಡುವ ಪ್ರತಿಯೊಂದು ಪೈಸೆಯೂ ಉಪಯುಕ್ತವಾಗುತ್ತಿತ್ತು. ಆದರೆ ಇದು ಆಗುವುದು ಬಹುತೇಕ ಸಾಧ್ಯವಿಲ್ಲ. ಏಕೆಂದರೆ ಈ ಪ್ರದೇಶಗಳು ಎದುರಿಸುತ್ತಿರುವ ಸಮಸ್ಯೆಯ ಮೂಲ ಕಾರಣಗಳು ಸಹಾ ಪರಿಹಾರ ಹುಡುಕಲು ಆರಂಭಿಸುವುದಕ್ಕೂ ಸಾಧ್ಯವಿಲ್ಲ.

ಬರಪೀಡಿತ ಬ್ಲಾಕುಗಳು ಕೇಂದ್ರದ ಬರಪೀಡಿತ ಪ್ರದೇಶ ಕಾರ್ಯಕ್ರಮ (ಡಿಪಿಎಪಿ) ಯೋಜನೆಯ ವ್ಯಾಪ್ತಿಗೆ ಬರುತ್ತದೆ. ಆದರೆ ಬ್ಲಾಕುಗಳನ್ನು ಡಿಪಿಎಪಿ ವ್ಯಾಪ್ತಿಗೆ ತರುವುದು ಸಂಪೂರ್ಣವಾಗಿ ರಾಜಕೀಯ ನಿರ್ಧಾರ. ಡಿಪಿಎಪಿಗೆ ಕೇಂದ್ರದ ಅನುದಾನ ಸಾಧಾರಣದ್ದಾಗಿರಬಹುದು. ಆದರೆ ಒಂದು ಬ್ಲಾಕ್ ಈ ಡಿಪಿಎಪಿ ಅಡಿ ಬಂದರೆ ದೊಡ್ಡದಾದ ರೀತಿಯಲ್ಲಿ ಹಣದ ಹೊಳೆ ಹರಿಸುವ ಹಲವಾರು ಯೋಜನೆಗಳ ಸರಮಾಲೆಯೇ ಬರುತ್ತದೆ. ಇದೇ ಬ್ಲಾಕುಗಳು ಉದ್ಯೋಗ ಖಾತರಿ ಯೋಜನೆ (ಇ ಎ ಎಸ್), ಮರುಭೂಮಿ ತಡೆ ಯೋಜನೆ, ಕುಡಿಯುವ ನೀರಿನ ಯೋಜನೆ ಹೀಗೆ ಹಲವಾರು ಕಾರ್ಯಕ್ರಮಗಳ ಹಣ ಬರುತ್ತದೆ. ಹೌದು ಕೆಲವು ಮಂದಿಯಂತೂ ಖಂಡಿತಾ ಲಾಭ ಪಡೆಯುತ್ತಾರೆ.

ಹಲವಾರು ರಾಜ್ಯಗಳಲ್ಲಿ ಈ ಡಿಪಿಎಪಿ ಹಲವಾರು ಕುತೂಹಲ ಸಂಗತಿಗಳನ್ನು ಎತ್ತಿ ತೋರಿಸಿದೆ. ಮಹಾರಾಷ್ಟ್ರದಲ್ಲಿ ಒಂದು ವರ್ಷದ ಹಿಂದೆ ಇದ್ದ ಡಿಪಿಎಪಿ ಬ್ಲಾಕುಗಳ ಸಂಖ್ಯೆ 96. 1996ರಲ್ಲಿ ಈ ಸಂಖ್ಯೆ 147. ಮಧ್ಯಪ್ರದೇಶದಲ್ಲಿ ಇದೇ ಅವಧಿಯಲ್ಲಿ ಡಿಪಿಎಪಿ ಬ್ಲಾಕುಗಳ ಸಂಖ್ಯೆ 60 ರಿಂದ 135 ಕ್ಕೆ ಬಹುತೇಕ ದುಪ್ಪಟ್ಟಾಗಿ ಹೋಯಿತು. ಬಿಹಾರದಲ್ಲಿ 80ರ ದಶಕದುದ್ದಕ್ಕೂ ಸುಮಾರು ಡಿಪಿಎಪಿ ಬ್ಲಾಕುಗಳಿದ್ದವು. 90ರ ದಶಕದ ಆರಂಭದಲ್ಲಿ ರಾಮೇಶ್ವರ ಠಾಕೂರ್ ಕೇಂದ್ರ ಸಚಿವರಾದಾಗ ಈ ಸಂಖ್ಯೆ 55 ಆಯಿತು. ಠಾಕೂರ್ ಅವರ ಸ್ವ ಕ್ಷೇತ್ರ ಈ ಯೋಜನೆಯಡಿ ಸೇರಿತು. ಈಗ ಈ ರಾಜ್ಯದಲ್ಲಿ 122 ಡಿಪಿಎಪಿ ಬ್ಲಾಕುಗಳಿವೆ.

ಈ ಎಲ್ಲವೂ ಆಗಿರುವುದು ಸತತ ಒಳ್ಳೆಯ ಮಳೆಗಾಲವಿದ್ದಾಗ. ಆದರೆ ಕೆಲವರಿಗೆ ಕೊರತೆಯೂ ಇತ್ತು. ಆದರೆ ಅದು ಇನ್ನೊಂದು ಬೇರೆಯದೇ ಕಥೆ.

ಈ ವಿಭಾಗದಲ್ಲಿರುವ ವರದಿಗಳು ಮುಂದಿಡುವಂತೆ ಕಾಲಾಹಂಡಿಯ ಪ್ರಮುಖ ಸಮಸ್ಯೆ ಎದುರಾಗಿರುವುದು ಕಡಿಮೆ ಮಳೆ ಪ್ರಮಾಣದಿಂದಾಗಿ ಅಲ್ಲ. ಇದನ್ನು ಜಲಸಂಪನ್ಮೂಲ ತಜ್ಞರು ಹಾಗು ಆಡಳಿತಗಾರರು ಬಹುತೇಕ ಅನುಮೋದಿಸುತ್ತಾರೆ. ಕೆಲವು ಬಾರಿ ಮಳೆ ಬೀಳುವ ಸಮಯದಲ್ಲಿ ಆಗುವ ವ್ಯತ್ಯಾಸ ಹಾಗು ವ್ಯಾಪ್ತಿಯ ಏರುಪೇರನ್ನು ಹೊರತುಪಡಿಸಿದರೆ ಭಾರತದ ಬಹುತೇಕ ಜಿಲ್ಲೆಗಳಲ್ಲಿ ವಾರ್ಷಿಕವಾಗಿ 800 ಮಿ.ಮೀ.ನಷ್ಟು ಮಳೆಯಾಗುತ್ತದೆ. ಕಳೆದ 20 ವರ್ಷಗಳಲ್ಲಿ ಕಾಲಾಹಂಡಿಯಲ್ಲಿ ಆಗಿರುವ ಅತಿ ಕಡಿಮೆ ಮಳೆ ಪ್ರಮಾಣವೆಂದರೆ 978 ಮಿ.ಮೀ. ಇದು ಎಷ್ಟೋ ಜಿಲ್ಲೆಗಳ 'ಸಾಧಾರಣ' ವರ್ಷಗಳಲ್ಲಿ ಕಾಣುವ ಮಳೆ ಪ್ರಮಾಣಕ್ಕಿಂತ ಹೆಚ್ಚು. ಇದಲ್ಲದಿದ್ದರೆ ಕಾಲಾಹಂಡಿಯ ಸರಾಸರಿ ಮಳೆಪ್ರಮಾಣ 1250 ಮಿ.ಮೀ. ಇದು ಒಳ್ಳೆಯ ಮಳೆ ಪ್ರಮಾಣವೇ. 1990–91ರಲ್ಲಿ ಈ ಜಿಲ್ಲೆಯಲ್ಲಿ 2247 ಮಿ.ಮೀ. ಮಳೆಯಾಗಿತ್ತು. ಇದಲ್ಲದೆ ಕಾಲಾಹಂಡಿಯಲ್ಲಿ ತಲಾ ಅಹಾರ ಉತ್ಪಾದನೆ ಒರಿಸ್ಸಾ ಹಾಗು ಇಡೀ ದೇಶದ ಪ್ರಮಾಣಕ್ಕಿಂತ ಹೆಚ್ಚಿತ್ತು. ಹಳೆಯ ಕಾಲಾಹಂಡಿಯ ಅತ್ಯಂತ ಕಳಪೆ ಪ್ರದೇಶವಾಗಿದ್ದ ಈಗ ಪ್ರತ್ಯೇಕ ಜಿಲ್ಲೆಯಾಗಿರುವ ನೌಪಾದದಲ್ಲಿಯೂ ಸಹಾ 1994ರಲ್ಲಿ ಆದ ಮಳೆಯ ಪ್ರಮಾಣ 2366 ಮಿ.ಮೀ.

ಪಲಮಾವುವಿನಲ್ಲಿ ಸಹಾ ಸರಾಸರಿ ಮಳೆಯ ಪ್ರಮಾಣ ಕೆಟ್ಟದ್ದಾಗೇನಿಲ್ಲ. ಸಾಧಾರಣ ವರ್ಷದಲ್ಲಿ ಈ ಜಿಲ್ಲೆಯಲ್ಲಿ 1200 ರಿಂದ 1230 ಮಿ.ಮೀ. ಮಳೆಯಾಗುತ್ತದೆ. ಇತಿಹಾಸದ ಅತಿ ಕೆಟ್ಟ ವರ್ಷದಲ್ಲಿ ಇಲ್ಲಿ 630 ಮಿ.ಮೀ. ಮಳೆಯಾಗಿದೆ. ಭಾರತದ ಕೆಲವು ಜಿಲ್ಲೆಗಳಲ್ಲಿ ಇನ್ನೂ ಕಡಿಮೆ ಮಳೆಯಿದ್ದರೂ ಈ ಮಟ್ಟದ ಅನಾಹುತವಾಗುವುದಿಲ್ಲ.


ಸುರ್ಗುಜಾದಲ್ಲಿ ಮಳೆ ಪ್ರಮಾಣ 1200 ಮಿ.ಮೀ.ಗಿಂತ ಕಡಿಮೆಯಿಲ್ಲ. ಕೆಲವು ವರ್ಷಗಳಲ್ಲಿ ಇದು 1500ರಿಂದ 1600


...ಈ ದೇಶ ಎದುರಿಸುತ್ತಿರುವ ಅತಿ ಗಂಭೀರ, ಪ್ರಶ್ನಾತೀತ ಸಮಸ್ಯೆ ಎಂದರೆ ಬರ. ಬರ ಪರಿಹಾರ ಎನ್ನುವುದೂ ಸಹ ಅಷ್ಟೇ, ಪ್ರಶ್ನಾತೀತವಾಗಿ ಗ್ರಾಮೀಣ ಭಾರತದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಉದ್ಯಮ.

ಪುಟ 10ಕ್ಕೆ

ಒಲಿಂಪಿಕ್ಸ್ ಫಲಿತಾಂಶ–ಭಾರತ ಏಕೆ ಹಿಂದೆ ಹಿಂದೆ?

ಲಂಡನ್ ಒಲಿಂಪಿಕ್ಸ್ ಮೇಲೆ ತೆರೆ ಬಿದ್ದಿದೆ. ಭಾರತ ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಗೆದ್ದಿದೆ. ಒಲಿಂಪಿಕ್ಸ್‌ನಲ್ಲಿ ಭಾರತದ ಸಾಧನೆ ಬಗ್ಗೆ ಎಂದಿನಂತೆ ಚರ್ಚೆ– ವಿವಾದ ಎದ್ದಿದೆ. ಕೆಲವರು ಈ ಬಾರಿಯ ಸಾಧನೆ ಉತ್ತಮ ಮುನ್ನಡೆ ಎಂದಿದ್ದಾರೆ. 1900 ರಿಂದ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಭಾರತ ಈ ಬಾರಿ ಅತ್ಯಂತ ಹೆಚ್ಚು (ಆರು) ಒಲಿಂಪಿಕ್ಸ್ ಪದಕಗಳನ್ನು ಗೆದ್ದಿದೆ. 1900 ರಿಂದ ಭಾರತ ಗಳಿಸಿರುವ ಒಟ್ಟು 22 ಪದಕಗಳಲ್ಲಿ ಕಾಲು ಭಾಗಕ್ಕಿಂತ ಹೆಚ್ಚು ಈ ಬಾರಿ ಗಳಿಸಿದೆ. ಕುಸ್ತಿ, ಬಾಕ್ಸಿಂಗ್, ಶೂಟಿಂಗ್, ಬ್ಯಾಡ್ಮಿಂಟನ್‌ಗಳಲ್ಲಿ ಪದಕ ಗಳಿಸಿದೆ. ಇಬ್ಬರು ಮಹಿಳೆಯರು ಮೊದಲ ಬಾರಿ ಆಯಾ ವಿಭಾಗಗಳಲ್ಲಿ ಪದಕ ಗಳಿಸಿದ್ದಾರೆ. ಹಾಕಿ ಮತ್ತು ಟೆನ್ನಿಸ್ ಪಂದ್ಯಗಳಲ್ಲಿ ತೀವ್ರ ನಿರಾಶಾದಾಯಕ ಆಟವನ್ನು ಗಮನಿಸಿಯೂ ಇದು ದೊಡ್ಡ ಸಾಧನೆ ಎನ್ನುತ್ತಾರೆ ಅವರು.









ಆದರೆ ಹಲವರು ಭಾರತದ ಜನಸಂಖ್ಯೆ, ಆರ್ಥಿಕ ಬಲ ಮತ್ತು ದೀರ್ಘ ಇತಿಹಾಸ ಪರಂಪರೆಗಳನ್ನು ಗಮನಿಸಿದರೆ ಈ ಬಾರಿಯ ಫಲಿತಾಂಶವೂ ಕಳಪೆ ಎನ್ನುತ್ತಾರೆ. ಭಾರತ ಪದಕ ಪಟ್ಟಿಯಲ್ಲಿ 55ನೇ ಸ್ಥಾನದಲ್ಲಿದೆ. ಭಾರತ ಪ್ರಮುಖ ಪಾಶ್ಚಿಮಾತ್ಯ ಅಭಿವೃದ್ಧ ದೇಶಗಳು ಮತ್ತು ಚೀನಾ (2ನೇ ಸ್ಥಾನ)ಕ್ಕಿಂತ ಬಹಳ ಹಿಂದಿದೆ. ಮಾತ್ರವಲ್ಲ, ಕ್ರೀಡೆಗಳಲ್ಲಿ ಮುಂದಿದ್ದ ಆದರೆ ಈಗ ಆರ್ಥಿಕವಾಗಿ ಸವಾಲುಗಳನ್ನು ಎದುರಿಸುತ್ತಿರುವ ಮಾಜಿ/ಹಾಲಿ ಸಮಾಜವಾದಿ ದೇಶಗಳಿಗಿಂತಲೂ–ರಶ್ಯಾ(4), ಹಂಗೆರಿ(9), ಕಝಾಕಿಸ್ತಾನ (12), ಕ್ಯೂಬಾ (14), ಉತ್ತರ ಕೊರಿಯಾ(20)–ಬಹಳ ಹಿಂದೆ ಉಳಿದಿದೆ. ಹಲವು ಅಭಿವೃದ್ಧಿಶೀಲ ದೇಶಗಳಿಗಿಂತಲೂ–ಇರಾನ್(17), ಬ್ರೆಜಿಲ್ (22), ದಕ್ಷಿಣ ಆಫ್ರಿಕಾ (23), ಇಥಿಯೋಪಿಯಾ(24) – ಹಿಂದಿದೆ. ಹಿಂದುಳಿದ ಅಥವಾ ಚಿಕ್ಕ ದೇಶಗಳಾದ ಟುನಿಶಿಯಾ, ಕೊಲಂಬಿಯಾ, ಗ್ರೆನಾಡಾ, ಟ್ರಿನಿಡಾಡ್, ಉಗಾಂಡಾ, ಬಹಾಮಾಸ್ ನಂತಹ ದೇಶಗಳಿಗಿಂತಲೂ ಹಿಂದಿದೆ. ಭಾರತ ಜನಸಂಖ್ಯೆಯಲ್ಲಿ ಎರಡನೇ ಮತ್ತು ಆರ್ಥಿಕ ಗಾತ್ರದಲ್ಲಿ 10 ನೇ ಅತಿ ದೊಡ್ಡ ದೇಶ ಎಂದು ಗಮನಿಸಿದಾಗ ಭಾರತದ ಫಲಿತಾಂಶ ಎಷ್ಟು ಕಳಪೆ ತಿಳಿಯುತ್ತದೆ ಎಂದು ಅವರ ವಾದ. ಜಿಡಿಪಿ ಅಥವಾ ಒಟ್ಟು ಆರ್ಥಿಕ ಉತ್ಪನ್ನ(78ನೇ) ಮತ್ತು ಜನಸಂಖ್ಯೆ (85ನೇ)ಗಮನಿಸಿ ತಯಾರಿಸಿದ ಪದಕ ಪಟ್ಟಿಯಲ್ಲಿ ಭಾರತ ಹೆಚ್ಚು ಕಡಿಮೆ ಕೊನೆಯ ಸ್ಥಾನ ಪಡೆಯುತ್ತದೆ.

ಲಂಡನ್ ಒಲಿಂಪಿಕ್ಸ್ ಮೇಲೆ ತೆರೆ ಬಿದ್ದಿದೆ. ಭಾರತ ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಗೆದ್ದಿದೆ. ಒಲಿಂಪಿಕ್ಸ್‌ನಲ್ಲಿ ಭಾರತದ ಸಾಧನೆ ಬಗ್ಗೆ ಎಂದಿನಂತೆ ಚರ್ಚೆ– ವಿವಾದ ಎದ್ದಿದೆ. ಯಾಕೆ ಭಾರತ ಹಿಂದೆ ಬಿದ್ದಿದೆ?

ಎನ್.ಕೆ.ವಸಂತರಾಜ

ಒಲಿಂಪಿಕ್ಸ್ ಪದವಿ ಗಳಿಕೆ ನಮಗೇಕೆ ಆದ್ಯತೆ?

ಭಾರತದ ಸಂದರ್ಭಕ್ಕೆ ಬಂದಾಗ ಒಲಿಂಪಿಕ್ಸ್ ಪದವಿ ಗಳಿಕೆ ನಮಗೆ ಅಷ್ಟು ದೊಡ್ಡ ಆದ್ಯತೆ ಆಗಬೇಕೆ ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಏಳುತ್ತದೆ. ಈ ಪ್ರಶ್ನೆಯನ್ನು ಸದ್ಯಕ್ಕೆ ಬದಿಗಿಟ್ಟರೂ, ಐವರಲ್ಲಿ ಒಬ್ಬ ಸದಾ ಹಸಿವಿನಿಂದ ಬಳಲುತ್ತಿರುವ ಮತ್ತು ಅರ್ಧಕ್ಕೂ ಹೆಚ್ಚು ಅಪೌಷ್ಟಿಕತೆಯಿಂದ ನರಳುತ್ತಿರುವ ದೇಶ ಆಟೋಟಗಳಲ್ಲಿ ಹೇಗೆ ಮುಂದಿರಲು ಸಾಧ್ಯ? ನಾಳೆಯ ಒಲಿಂಪಿಕ್ಸ್ ಪದವಿ ಗಳಿಕೆಗೆ ಭದ್ರ ನೆಲೆಯಾಗಬೇಕಾಗಿದ್ದ ಮಕ್ಕಳ ಸ್ಥಿತಿ ಇನ್ನೂ ಚಿಂತಾಜನಕ. ಶೇ.42 ಮಕ್ಕಳು ತೀವ್ರ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಈ ಸಮಸ್ಯೆ ಬಗೆಹರಿಸದೆ ಒಲಿಂಪಿಕ್ಸ್ ಫಲಿತಾಂಶ ಉತ್ತಮಪಡಿಸುವ ಬಗ್ಗೆ ಚರ್ಚೆ ಅರ್ಥಹೀನ. ಆದರೆ ಹಸಿವು ಅಪೌಷ್ಟಿಕತೆ ನಿರ್ಮೂಲನ ವಾದರೆ ಈ ಸಮಸ್ಯೆ ತನ್ನಿಂತಾನೇ ಬಗೆಹರಿಯುತ್ತದೆಯೇ ? ಆರೋಗ್ಯವಂತ ಕೆಲವರಿಗೂ ಕ್ರೀಡೆಯಲ್ಲಿ ತೊಡಗಿಸುವ ವ್ಯವಸ್ಥೆ ನಮ್ಮ ಶಾಲಾ ಕಾಲೇಜುಗಳಲ್ಲಿ ಸ್ಥಳೀಯ ಸಮುದಾಯಗಳಲ್ಲಿ ಇದೆಯೆ ? ಕ್ರೀಡೆಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಎಂತಹ ಆದ್ಯತೆ ಇದೆ ? ಕ್ರೀಡೆಯಲ್ಲಿ ತೀವ್ರವಾಗಿ ತೊಡಗಿಸಿಕೊಳ್ಳುವರಿಗೆ ಎಂತಹ ಅವಕಾಶಗಳಿವೆ, ಎಂತಹ ಸಾಮಾಜಿಕ ಆರ್ಥಿಕ ಭದ್ರತೆ ಇದೆ ?

ಆದ್ದರಿಂದ ಇಂತಹ ಕಳಪೆ ಫಲಿತಾಂಶಕ್ಕೆ ಕಾರಣ ಏನು ಎಂಬುದರ ಬಗ್ಗೆ ವಿಶ್ಲೇಷಣ ಅಗತ್ಯ. ಮಾತ್ರವಲ್ಲ, ಇಂತಹ ವಿಶ್ಲೇಷಣೆಯಿಂದ ಹೊರಡುವ ತೀರ್ಮಾನಗಳು, ಹಸಿವು ಅಪೌಷ್ಟಿಕತೆ ನಿರ್ಮೂಲನದ ಜತೆಗೆ ಹಮ್ಮಿಕೊಳ್ಳಬೇಕಾದ ಆರೋಗ್ಯ ಸೇವೆ ಉತ್ತಮಪಡಿಸುವಿಕೆ ಮತ್ತು ಸ್ವಸ್ಥ ಸಮಾಜದ ನಿರ್ಮಾಣದ ಯೋಜನೆಗೆ ಬಹಳ ಪ್ರಯೋಜನಕಾರಿ ಆಗುತ್ತವೆ. ಒಲಿಂಪಿಕ್ಸ್ ಪದವಿ ಗಳಿಕೆಯ ಸವಾಲು ಎದುರಿಸುವಲ್ಲಿ ಸ್ವಾಭಾವಿಕವಾಗಿ ಹೊಮ್ಮುವ ರಾಷ್ಟ್ರೀಯ ದೃಢನಿಶ್ಚಯ ಮತ್ತು ಐಕ್ಯತೆ, ಯುವಜನರ ಶಿಕ್ಷಣ ಸಮಗ್ರ ಬೆಳವಣಿಗೆ ಮತ್ತು ಸಮುದಾಯ ಅಭಿವೃದ್ಧಿಯಲ್ಲೂ ದೊಡ್ಡ ರೀತಿಯಲ್ಲಿ ಪಾತ್ರ ವಹಿಸಬಹುದು. ಈ ಹಿನ್ನೆಲೆಯಲ್ಲಿ ನಮ್ಮ ಒಲಿಂಪಿಕ್ಸ್ ಫಲಿತಾಂಶ ಇಷ್ಟೇಕೆ ಕಳಪೆ ಎಂಬ ಪ್ರಶ್ನೆ ಸಮಯೋಚಿತವಾಗುತ್ತದೆ.

ಸಮಗ್ರ ಕ್ರೀಡಾ ನೀತಿ/ಬೆಂಬಲ ವ್ಯವಸ್ಥೆ

ಭಾರತ ಮಾತ್ರವಲ್ಲ ಪ್ರಮುಖವಾಗಿ ಅಭಿವೃದ್ಧಿಶೀಲ ದೇಶಗಳ ಒಲಿಂಪಿಕ್ಸ್ ಸಾಧನೆ ಉತ್ತಮಪಡಿಸಲು ನೀತಿ ನಿರೂಪಿಸುವ ಉದ್ದೇಶದ ಹಲವು ಅಧ್ಯಯನಗಳನ್ನು ಮಾಡಲಾಗಿದೆ. ಪ್ರಸಿದ್ಧ ಪ್ರೈಸ್–ವಾಟರ್–ಕೂಪರ್ ಹೌಸ್ (ಪಿ.ಡಬ್ಲ್ಯೂ.ಸಿ.)ಎಂಬ ಸಂಸ್ಥೆ ಈ ವರೆಗಿನ ಎಲ್ಲಾ ಒಲಿಂಪಿಕ್ಸ್ ಫಲಿತಾಂಶಗಳನ್ನು ವಿಶ್ಲೇಷಿಸಿ, ಒಲಿಂಪಿಕ್ಸ್ ಫಲಿತಾಂಶಗಳಿಗೆ ಕಾರಣವಾಗಬಹುದಾದ ಕೆಲವು ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿದೆ. ದೇಶದ ಆರ್ಥಿಕ ಗಾತ್ರವಲ್ಲದೆ, ಸರಾಸರಿ ಆದಾಯ, ಹಾಲಿ/ಮಾಜಿ ಸಮಾಜವಾದಿ ದೇಶಗಳಲ್ಲಿ ಅನುಸರಿಸಲಾದ ಸಮಗ್ರ ಕ್ರೀಡಾ ನೀತಿ ಮತ್ತು ಪ್ರಬಲವಾದ ಸರ್ಕಾರಿ ಬೆಂಬಲ ವ್ಯವಸ್ಥೆ, ಆತಿಥೇಯ ದೇಶವಾಗಿರುವುದು (ಕಳೆದ ಕೆಲವು ಒಲಿಂಪಿಕ್ಸ್ ಕ್ರೀಡೆಗಳಿಂದ) – ಇಂತಹ ಕೆಲವು ಪ್ರಮುಖ ಅಂಶಗಳು ಎಂದಿದೆ ಪಿ.ಡಬ್ಲ್ಯೂ.ಸಿ..



ಸೋವಿಯೆಟ್ ಒಕ್ಕೂಟದ ಪತನದ ಎರಡು ದಶಕಗಳ ನಂತರವೂ ಆರ್ಥಿಕವಾಗಿ ದುರ್ಬಲವಾಗಿದ್ದರೂ ಮಾಜಿ ಸೋವಿಯೆತ್ ದೇಶಗಳ ಒಲಿಂಪಿಕ್ಸ್ ಪದವಿ ಗಳಿಕೆಯಲ್ಲಿ (ಒಟ್ಟು ಪದವಿಗಳ ಪ್ರಮಾಣ 1988 ರಲ್ಲಿ ಶೇ.18ರಿಂದ 2012ರಲ್ಲಿ ಶೇ.16ಕ್ಕೆ) ಸ್ವಲ್ಪವೇ ಕಡಿಮೆ ಆಗಿದೆ ಎಂದು ಅದು ಗುರುತಿಸಿದೆ. ತೀವ್ರ ರಾಜಕೀಯ ಬದಲಾವಣೆಗಳಾದರೂ ಹಿಂದಿನ ಸಮಗ್ರ ಕ್ರೀಡಾ ನೀತಿ/ಬೆಂಬಲ ವ್ಯವಸ್ಥೆ ಉಳಿಸಿಕೊಂಡಿರುವುದು ಕಾರಣವಿರಬಹುದು ಎಂದಿದೆ. ಆದರೆ ಅದೇ ಅವಧಿಯಲ್ಲಿ ಆರ್ಥಿಕವಾಗಿ ಗಟ್ಟಿಯಾದರೂ ಪೂರ್ವ ಯುರೋಪಿನ ಮಾಜಿ ಸಮಾಜವಾದಿ ದೇಶಗಳ ಒಲಿಂಪಿಕ್ಸ್ ಪದವಿ ಗಳಿಕೆಯಲ್ಲಿ (ಒಟ್ಟು ಪದವಿಗಳ ಪ್ರಮಾಣ 1988 ರಲ್ಲಿ ಶೇ.30 ರಿಂದ 2012ರಲ್ಲಿ ಶೇ.7ಕ್ಕೆ) ಕುಸಿದಿದೆ. ಜರ್ಮನಿ ಏಕೀಕರಣ ಮತ್ತು ಹಿಂದಿನ ಸಮಗ್ರ ಕ್ರೀಡಾ ನೀತಿ/ಬೆಂಬಲ ವ್ಯವಸ್ಥೆಯನ್ನು (ಮುಖ್ಯವಾಗಿ ಹಿಂದಿನ ಪೂರ್ವ ಜರ್ಮನಿಯಲ್ಲಿ) ಕಳಚಿ ಹಾಕಿರುವುದು ಬಹುಶಃ ಇದಕ್ಕೆ ಕಾರಣ.

ವ್ಯಾಪಕ ಸಾಮುದಾಯಿಕ ನೆಲೆ

ಇತರ ಅಧ್ಯಯನಗಳು ಇತರ ಕೆಲವು ಅಂಶಗಳತ್ತ ಬೊಟ್ಟುಮಾಡಿವೆ. ಮಾನವ ಅಭಿವೃದ್ಧಿ ಸೂಚಕದ ಉತ್ತಮ ಪಡಿಸುವಿಕೆ ಒಲಿಂಪಿಕ್ಸ್ ಪದವಿ ಗಳಿಕೆ ಉತ್ತಮಗೊಳ್ಳುವುದಕ್ಕೆ ಅಗತ್ಯ. ಆದರೆ ಅದೇ ಸಾಲುವುದಿಲ್ಲ ಎಂದು ಹಲವು ಅಧ್ಯಯನಗಳು ಹೇಳಿವೆ. ಅಂತರ್ರಾಷ್ಟ್ರೀಯ ಒಲಿಂಪಿಕ್ಸ್ ಪದವಿ ಪಡೆಯಲು ಯಾವುದೇ ಕ್ರೀಡೆಗೆ ದೊಡ್ಡ ಸಾಮುದಾಯಿಕ ನೆಲೆ ಇರಬೇಕು. ಅಂದರೆ ಅದನ್ನು ದೊಡ್ಡ ಸಂಖ್ಯೆಯಲ್ಲಿ ಜನ ಆಡಬೇಕು. ಅದಕ್ಕೆ ಬೇಕಾದ ಸ್ಥಳೀಯ ಮಟ್ಟದ ಪರಿಕರಗಳು ಮತ್ತು ಸ್ಪರ್ಧೆ ಇರಬೇಕು. ಎಲ್ಲಾ ಮಟ್ಟಗಳಲ್ಲಿ ಸರ್ಕಾರ ಮತ್ತು ಜನ ಮನ್ನಣೆ ಇರಬೇಕು. ಆಗ ಮಾತ್ರವೇ ದೊಡ್ಡ ಪ್ರಮಾಣದ ತಳಮಟ್ಟದ ಆಟಗಾರರ ನಡುವೆ ನಿಪುಣ ಆಟಗಾರರನ್ನು ಹುಡುಕಿ ತರಬೇತಿ ಮಾಡಿ ಅಂತರ್ರಾಷ್ಟ್ರೀಯ ಮಟ್ಟದ ಶ್ರೇಷ್ಠ ಆಟಗಾರರಾಗಿ ಮಾಡುವುದು ಸಾಧ್ಯವಾಗುತ್ತದೆ. ಇದಕ್ಕೆ ಸಾಮಾಜಿಕ ಮತ್ತು ಪ್ರಾದೇಶಿಕ ಚಲನಶೀಲತೆ, ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಸಹ ಅಗತ್ಯವಾಗುತ್ತದೆ ಎನ್ನುತ್ತವೆ ಕೆಲವು ಅಧ್ಯಯನಗಳು. ನಮ್ಮ ದೇಶದಲ್ಲಿ ಕ್ರಿಕೆಟ್ ಆಟಕ್ಕೆ ಮಾತ್ರ ಇಂತಹ ವ್ಯಾಪಕ ನೆಲೆ ಇದೆ ಎಂದು

ಪುಟ 14 ಕ್ಕೆ

ಆಹಾ ! 'ಬರ'ದ ಕೊಯ್ಲು !!....

ಪುಟ 8 ರಿಂದ

ಮಿ.ಮೀ. ಮಳೆ ಕಾಣುತ್ತದೆ. ಇದು ಕ್ಯಾಲಿಫೋರ್ನಿಯಾ ಪಡೆಯುವ ಮಳೆಯ ಪ್ರಮಾಣಕ್ಕಿಂತ ನಾಲ್ಕು ಪಟ್ಟು ಹೆಚ್ಚು. ಮತ್ತು ಕ್ಯಾಲಿಫೋರ್ನಿಯಾದಲ್ಲಿ ದ್ರಾಕ್ಷಿ ಬೆಳೆಯುತ್ತಾರೆ.

ಆದರೂ ಈ ಮೇಲೆ ಹೆಸರಿಸಿದ ಜಿಲ್ಲೆಗಳಲ್ಲಿ ನೀರಿಗೆ ಸಂಬಂಧಿಸಿದ ಸಮಸ್ಯೆಗಳು ಭೀಬತ್ಸ್ಯವಾಗಿವೆ. ಅನುದಾನ ನಿವಾರಿಸುವ ಸಮಸ್ಯೆಗಳಿಗಿಂತ ಇವು ಭಿನ್ನ. ಸರಳವಾಗಿ ನೋಡುವುದಾದರೆ ಭಾರತದಲ್ಲಿ ಸಾಕಷ್ಟು ಮಳೆಯಾಗದ ಹಲವಾರು ಜಿಲ್ಲೆಗಳಿವೆ. ಆದರೆ ಮೇಲ್ಕಾಣಿಸಿದ ಜಿಲ್ಲೆಗಳಲ್ಲೇ ಭಾರತದ ಒಂದು ವರ್ಗವಾದ ಬಡವರು ತೀವ್ರ ಬರದಿಂದ ನರಳುತ್ತಾರೆ. ಇದು ಆಗುವುದು ಲಭ್ಯವಿರುವ ಜಲಸಂಪನ್ಮೂಲವನ್ನು ಬಲಿಷ್ಠರು ವಸಾಹತುವಾಗಿ ಮಾಡಿಕೊಂಡಾಗ ಮತ್ತು ಈ ಬರ ನಿವಾರಕ ಹಣ ತರುವ 'ಯೋಜನೆ'ಗಳನ್ನು ರೂಪಿಸುವಾಗ ಈ ಬಡವರನ್ನು ಭಾಗಿಯಾಗಿ ಮಾಡುವುದಿಲ್ಲ, ಕನಿಷ್ಠ ಸಂಪರ್ಕಿಸುವುದೂ ಇಲ್ಲವೆಂದಾಗ.

ಹಣದ ಹೊಳೆ ಹರಿಯಲು ಬರ ಮತ್ತು ಡಿಪಿಎಪಿಯನ್ನು ಕೊಂಡಿ ಹಾಕಿದಾಗ ಪ್ರತಿಯೊಬ್ಬರಿಗೂ ತಮ್ಮ ಬ್ಲಾಕು ಈ ಯೋಜನೆಯಡಿ ಬರಬೇಕು ಎನ್ನುವ ಆಸೆ. ಹಲವು ಪ್ರಕರಣದಲ್ಲಿ ಬಲಿಷ್ಠರು ತಮ್ಮ ಬ್ಲಾಕುಗಳನ್ನು ಈ ಯೋಜನೆಯಡಿ ತಂದದ್ದಷ್ಟೇ ಅಲ್ಲ ಇದರಿಂದ ಬಂದ 'ಫಲ'ವನ್ನೂ ಪಡೆದುಕೊಂಡರು.

ಮಹಾರಾಷ್ಟ್ರವನ್ನೇ ತೆಗೆದುಕೊಳ್ಳಿ, ರಾಜ್ಯದಲ್ಲಿ ಬೆಳೆಯುವ ಶೇಕಡಾ 73ರಷ್ಟು ಕಬ್ಬು ಈ ಡಿಪಿಎಪಿ ಬ್ಲಾಕುಗಳಲ್ಲಿಯೇ ಬೆಳೆಯಲಾಗುತ್ತದೆ! ಅತಿ ಹೆಚ್ಚು ನೀರು ಬಯಸುವ ಬೆಳೆ ಈ ಕಬ್ಬು. ಎರಡನೆಯದಾಗಿ ಮಹಾರಾಷ್ಟ್ರದಲ್ಲಿ ನೀರಾವರಿಯಡಿ ಇರುವ ಪ್ರದೇಶಗಳ ಸ್ಥಿತಿ ಶೋಚನೀಯ. ಇದು ಶೇಕಡಾ 15 ಬೆಳೆ ಭೂಮಿಗೆ ಕುಸಿಯುತ್ತದೆ. ಆದರೆ ಡಿಪಿಎಪಿ ಬ್ಲಾಕುಗಳಲ್ಲಿ ಒಂದು ಅಂದಾಜಿನ ಪ್ರಕಾರ ಈ ಸಂಖ್ಯೆ ಶೇಕಡಾ 22. ರಾಜ್ಯದ ಸರಾಸರಿಗಿಂತ ಶೇಕಡಾ 50ರಷ್ಟು ಹೆಚ್ಚು. ಪುಣೆಯ ಬಳಿ ಇರುವ ಲೋನಾವಲದಲ್ಲಿ ಮಳೆ ಪ್ರಮಾಣ ಕಡಿಮೆ ಎಂದರೆ 1650 ಮಿ.ಮೀ. ಹೆಚ್ಚೆಂದರೆ 2000 ಮಿ.ಮೀ. ಲೋನಾವಲ ಡಿಪಿಎಪಿ ಬ್ಲಾಕಿನಲ್ಲಿದೆ!

ಹಲವಾರು ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಪರಿಹಾರ ಹಾಗು ನೀರಾವರಿಯ ಮೇಲೆ ವೆಚ್ಚ ಮಾಡುತ್ತಿರುವ ನೂರಾರು ಕೋಟಿ ಹಣದಿಂದ ನೀರಾವರಿ ಪ್ರದೇಶದಲ್ಲಿ ಪ್ರಶಂಸನೀಯ ಹೆಚ್ಚಳವೇನೂ ಆಗಿಲ್ಲ. ಡಿಪಿಎಪಿ ಬ್ಲಾಕಿನಲ್ಲಿರುವ ಸಣ್ಣ ರೈತರೇ ಹೆಚ್ಚು ಒತ್ತಡವನ್ನು ಅನುಭವಿಸುವವರು. ಇಲ್ಲಿ ನೀರನ್ನು ಶ್ರೀಮಂತರು ಹಾಗು ರೈತರು ವಶಪಡಿಸಿಕೊಂಡಿದ್ದಾರೆ. ಇಂತಹ ಪ್ರದೇಶಕ್ಕೆ ಹಣ ಚೆಲ್ಲುವ ಮೂಲಕ ಸರ್ಕಾರ ಬಾಲಿಶವಾಗಿ ವರ್ತಿಸುತ್ತಿದೆ. ಹೆಚ್ಚು ಮತ ಇರುವ ಸಣ್ಣ ಮೀನನ್ನು ಸಮಾಧಾನ ಪಡಿಸಬಹುದು. ವಾಸ್ತವದಲ್ಲಿ ಇಲ್ಲಿಗೆ ಹೋಗುತ್ತಿರುವ ಹಣದ ಸಿಂಹಪಾಲು ಸೇರುತ್ತಿರುವುದು ಬಲಿಷ್ಠರ ಜೇಬನ್ನು. ನೀರಾವರಿಗೆ ಬೇಕಾದ ನೀರು? ಈ ರಾಜ್ಯದ ಕೇವಲ ಶೇಕಡಾ 2 ರಷ್ಟು ಮಂದಿ ರೈತರು ಮಾತ್ರ ಶೇಕಡಾ 70 ರಷ್ಟು ನೀರನ್ನು ಬಳಸುತ್ತಾರೆ.

ಬರ ಎನ್ನುವುದು ಒಂದು ಸಂಕೀರ್ಣ ಪ್ರಕ್ರಿಯೆ. ಹವಾಮಾನ ಬರ ಇಲ್ಲದಿದ್ದಾಗಲೂ ಸಹ ಕೃಷಿ ಬರ ಕಾಣಿಸಿಕೊಳ್ಳಬಹುದು. ಅಂದರೆ ಸಾಕಷ್ಟು ಮಳೆಯಾಗಿದ್ದರೂ ಸಹ ಬೆಳೆ ವಿಫಲವಾಗಬಹುದು ಅಥವಾ ನದಿ, ತೊರೆ, ಜಲಪಾತಗಳ ಬತ್ತುವಿಕೆಯೊಂದಿಗೆ ಅಂತರ್ಜಲ ಮಟ್ಟ ಕುಸಿದು ಜಲಕ್ಷಾಮ ತಲೆದೋರಬಹುದು. ಇದೆಲ್ಲಕ್ಕೂ ಕಾರಣ ಗೊತ್ತಿದ್ದರೂ ಸಹ ಅದನ್ನು ಬಗೆಹರಿಸಿದ್ದಿಲ್ಲ. ಎಲ್ಲವನ್ನೂ ಪ್ರಕೃತಿಯ ಮುನಿಸಿನ ಮೇಲೆ ಎತ್ತಿಹಾಕುವುದು ಒಳ್ಳೆಯ ವಿಧಾನ. ಅದು ಹೀಗಾಗಲು ಹಲವು ಶಕ್ತಿಗಳು, ಹಲವು ಹಂತಗಳಲ್ಲಿ ಬರ ಕೈಗಾರಿಕೆಯಲ್ಲಿ ಸೇರಿಹೋಗುವುವು ಅಥವಾ ಬರವನ್ನು ಬಳಸಿಕೊಳುವುವು.



ಅದು ಹೇಗೆ ಎಂದರೆ : ಯಾವುದೇ ಒಂದು ಜಿಲ್ಲೆಯನ್ನು ತೆಗೆದುಕೊಳ್ಳಿ. ಉದಾಹರಣೆಗೆ ಸುರ್ಗುಜಾ (ಅಥವಾ ಯಾವುದೂ ಆಗಬಹುದು). ರೈತರು ಹಲವು ನೀರು ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬ್ಲಾಕ್ ಮಟ್ಟದ ಶಕ್ತಿಗಳು ಅಂದರೆ ಕಂಟ್ರ್ಯಾಕ್ಟರುಗಳು ಹಾಗು ರಾಜಕಾರಣಿಗಳು ಈ 'ವಿಷಯ'ವನ್ನು ಕೈಗೆತ್ತಿಕೊಳ್ಳುತ್ತಾರೆ. ದೂರು ಸರಿಸುಮಾರಾಗಿ ಹೀಗಿರುತ್ತದೆಯೆಂದರೆ: ನಮ್ಮ ಬ್ಲಾಕಿಗೆ ಇತರ ಬ್ಲಾಕಿಗಳಿಗಿಂತ ಕಡಿಮೆ ಹಣ ಬಂದಿದೆ. ಜಿಲ್ಲಾಧಿಕಾರಿ ನಮ್ಮನ್ನು ಕಡೆಗಣಿಸುತ್ತಿದ್ದಾರೆ. ಅದಕ್ಕಾಗಿಯೇ ಹೀಗಾಗುತ್ತಿದೆ.

ಸರಿ, ನಿಜಕ್ಕೂ ಎರಡು ಸಂಗತಿಗಳಂತೂ ಜರುಗುತ್ತವೆ. ಮೊದಲನೆಯದು ಸುರ್ಗುಜಾದ ರೈತರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು ತೀವ್ರಗೊಳ್ಳುತ್ತವೆ. ಎರಡನೆಯದು, ಕೆಲವು ನಿರ್ದಿಷ್ಟ ಶಕ್ತಿಗಳು ಜಿಲ್ಲಾ ಕೇಂದ್ರದಲ್ಲಿ ಕುಳಿತು ಬ್ಲಾಕಿಗೆ ಇನ್ನೂ ಹೆಚ್ಚು ಹಣ ತರಲು ಯತ್ನಿಸುತ್ತವೆ.

ಪತ್ರಿಕೆಯೊಂದರ ಅರೆಕಾಲೀಕ ವರದಿಗಾರ (ಉದಾಹರಣೆಗೆ ಬಿಲಾಸಪುರದಲ್ಲಿರುವ ಜಿಲ್ಲಾಧಿಕಾರಿ ನಮ್ಮ ಬ್ಲಾಕನ್ನು ಕಡೆಗಣಿಸುತ್ತಿದ್ದಾರೆ) ಈ ಸುದ್ದಿಯನ್ನು ಕೈಗೆತ್ತಿಕೊಳ್ಳುತ್ತಾನೆ. ಬಹುತೇಕ ಪತ್ರಿಕೆಗಳು ತಮ್ಮ ಅರೆಕಾಲೀಕ ವರದಿಗಾರರಿಗೆ ತೀರಾ ಕಡಿಮೆ ಸಂಭಾವನೆ ನೀಡುತ್ತವೆ. ಕೆಲವು ಅರೆಕಾಲೀಕರಂತೂ ತಿಂಗಳಿಗೆ 50 ರೂ. ಪಡೆಯುತ್ತಾರೆ. ಹಾಗಾಗಿ ಇನ್ನಿತರ ಮೂಲಗಳಿಂದ ಆದಾಯ ಇರುವವರು ಮಾತ್ರ ಅರೆಕಾಲೀಕ ವರದಿಗಾರರಾಗಿ ಕೆಲಸ ಮಾಡಬಹುದು. ಈ ಜಿಲ್ಲೆಯ ಬಹು ಭಾಗಗಳಲ್ಲಿ ಈ ರೀತಿಯ ಅರೆಕಾಲೀಕ ವರದಿಗಾರ ಪೆಟ್ಟಿ ಅಂಗಡಿಯಾತ ಇಲ್ಲವೇ ಪುಡಿ ವ್ಯವಹಾರಸ್ಥನಾಗಿರುತ್ತಾನೆ.

ವಿವಿಧ 'ಲೋಕೋಪಯೋಗಿ ಕೆಲಸ'ಗಳಿಗೆ ಬ್ಲಾಕ್ ಹಾಗು ಜಿಲ್ಲೆಗೆ ಗುತ್ತಿಗೆಯೇನಾದರೂ ಬಂದರೆ ಫಲಾನುಭವಿಗಳ ಪಟ್ಟಿಯಲ್ಲಿ ಈ ಅರೆಕಾಲೀಕ ವರದಿಗಾರನೂ ಇರುತ್ತಾನೆ. ಇದು ಎಲ್ಲರ ವಿಚಾರದಲ್ಲಿ ನಿಜವಲ್ಲವಾದರೂ ಕೆಲವು ಅರೆಕಾಲೀಕ ವರದಿಗಾರರಿಗಂತೂ ಖಂಡಿತವಾಗಿ ಅನ್ವಯಿಸುತ್ತದೆ. ನಾನು ಹಲವು ಬುದ್ಧಿವಂತ, ವಿಷಯ ಜ್ಞಾನವಿರುವ ಇಂತಹ ವರದಿಗಾರರನ್ನು ಭೇಟಿಯಾದೆ. ಅವರು ಪ್ರತಿಭಾವಂತರು. ನೆಲದ ವಾಸ್ತವಕ್ಕೆ ಕಿವಿಗೊಟ್ಟವರು. ಪರಿಸ್ಥಿತಿಗೆ ಬೇಗ ಸ್ಪಂದಿಸುವವರು. ಈ ಪೈಕಿ ಕೆಲವರು ಸಣ್ಣ ಗುತ್ತಿಗೆದಾರರು. ಹಾಗೆಯೇ ಬ್ಲಾಕ್ ಮಟ್ಟದ ರಾಜಕಾರಣಿಗಳು. (ಹಾಗೆಯೇ ಹಲವು ರಾಷ್ಟ್ರಮಟ್ಟದ ರಾಜಕಾರಣಿಗಳು ಹಾಗು ಪತ್ರಿಕಾ ಮಾಲೀಕರು.. ಅದು ಇನ್ನೊಂದೇ ಕಥೆ)

ತೀವ್ರಗೊಳ್ಳುತ್ತಿರುವ ಬರದ ಬಗೆಗಿನ ವರದಿಗಳು ಸಂಪನ್ಮೂಲಕ್ಕಾಗಿ ಒದ್ದಾಡುತ್ತಿರುವ ಜಿಲ್ಲಾ ಆಡಳಿತದ ಮೇಲೆ ಒತ್ತಡ ಹೇರುತ್ತದೆ. (ಕೆಲವು ವರದಿಗಳಲ್ಲಿ ಸಾವಿನ ಸಂಖ್ಯೆಯನ್ನು ವೈಭವೀಕರಿಸಿದ್ದರೂ ಸತ್ಯದ ಅಂಶಗಳಿವೆ.) ಜಿಲ್ಲಾಧಿಕಾರಿ ತನ್ನ ಕೆಲವು ಜಿಲ್ಲಾಮಟ್ಟದ ವರದಿಗಾರ ಮಿತ್ರರನ್ನು ಕರೆಯುತ್ತಾನೆ. ಈ ಜಿಲ್ಲೆ ನೆರೆಯ ಜಿಲ್ಲೆಗೆ ಹೋಲಿಸಿದರೆ ರಾಜ್ಯ ಸರ್ಕಾರದಿಂದ ಕಡಿಮೆ ಹಣ ಪಡೆಯುತ್ತಿದೆ ಎಂದು ವಿವರಿಸುತ್ತಾನೆ. ಇದು ನಿಜವೂ ಇರಬಹುದು. ಜಿಲ್ಲಾಧಿಕಾರಿ ರಾಜಧಾನಿಯಲ್ಲಿ ಕೂತು ಹೆಚ್ಚಿನ ಸಂಪನ್ಮೂಲಕ್ಕಾಗಿ ಪ್ರಯತ್ನಿಸುತ್ತಿರುತ್ತಾನೆ. ಸುರ್ಗುಜಾ ಅಥವಾ ಅಂತಹ ಯಾವುದೇ ಜಿಲ್ಲೆಗೆ ಪಕ್ಷಪಾತ ಧೋರಣೆ ಅನುಕರಿಸಲಾಗುತ್ತಿದೆ ಎಂಬ ವರದಿಗಳು ರಾಜಧಾನಿಯ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳಲು ಆರಂಭಿಸುತ್ತವೆ.

ಇದು ರಾಜ್ಯ ಸರ್ಕಾರಕ್ಕೆ ಮುಜುಗರ ಉಂಟುಮಾಡುತ್ತದೆ. ಅದು ಹೇಗೆ ಪ್ರತಿಕ್ರಿಯಿಸುತ್ತದೆ? ಸ್ಥಳೀಯವಾಗಿ ಅದು ಏನನ್ನು ಮಾಡಬಹುದೋ ಅದನ್ನು ಮಾಡುತ್ತಾ ಬರಪರಿಹಾರಕ್ಕೆ ಇನ್ನೂ ಹೆಚ್ಚಿನ ಹಣ ಬೇಕು ಎಂದು ಕೇಂದ್ರವನ್ನು ಒತ್ತಾಯಿಸುತ್ತದೆ. ರಾಜ್ಯ ಸರ್ಕಾರಗಳು ಪ್ರಮುಖ ಪತ್ರಿಕೆಗಳ ಬಾತ್ಮೀದಾರರನ್ನು ರಾಜ್ಯದ ರಾಜಧಾನಿಗೆ ಕರೆದುಕೊಂಡು ಬರುತ್ತವೆ. 'ಬರ ಪೀಡಿತ ಪ್ರದೇಶ'ಗಳಿಗೆ ಇವರ ದೂರು ಆರಂಭವಾಗುತ್ತದೆ. ಸರ್ಕಾರ ಇಂತಹ ಪ್ರೆಸ್ ಟೂರುಗಳಿಗಾಗಿಯೇ ಒಂದು ವಾಹನವನ್ನು ಮೀಸಲಾಗಿಟ್ಟಿರುತ್ತದೆ. ಸೂಕ್ಷ್ಮ ಪ್ರದೇಶಗಳಿಗೆ ಹಲವೊಮ್ಮೆ ಹಿರಿಯ ಅಧಿಕಾರಿಗಳು ಪತ್ರಕರ್ತರನ್ನು ಕರೆದೊಯ್ಯುತ್ತಾರೆ.

ಹೃದಯವಿದ್ರಾವಕ ವರದಿಗಳ ಮಾತು ಬಂದಾಗ ನಗರದ ಪತ್ರಿಕೆಗಳ ನಾಜೂಕು ಬರಹಗಾರರು ಸ್ಥಳೀಯ ಪತ್ರಿಕೆಗಳವರಿಗಿಂತ ಮೇಲು ಮಟ್ಟದವರು. ಬರ ಈಗ ರಾಷ್ಟ್ರೀಯ ಪ್ರಶ್ನೆ. 'ಅಂತ್ಯವಿಲ್ಲದ ಬಿರುಕು ಬಿಟ್ಟ ನೆಲ' ಎಂಬ ಪದಗುಚ್ಛಗಳ ವರದಿ ಛಾಯಾಚಿತ್ರಗಳ ಸಮೇತ ಓದುಗರನ್ನು ಮುಟ್ಟುತ್ತದೆ. (ಈಗ 'ಬಿರುಕು ಬಿಟ್ಟ ನೆಲ' ಎನ್ನುವುದು ಬರದ ಸಂಕೇತವಾಗಿರಬೇಕಾಗಿಲ್ಲ. ಕೊಳದಲ್ಲಿ ನೀರು ಬತ್ತಿದರೂ ನೀರಿರುವ ಸ್ಥಳ ಬಿರುಕು ಬಿಟ್ಟಿರಬಹುದು. ಹಸಿರೋ ಹಸಿರು ಪ್ರದೇಶದಂತೆ ಕಾಣುವ ಕಡೆಯೂ ನೀರಿನ ಕೊರತೆ ಇರಬಹುದು. ಆದರೆ 'ಬಿರುಕು ಬಿಟ್ಟ ನೆಲ' ಎನ್ನುವುದು ಛಾಯಾಚಿತ್ರಗಳ ಸಮೇತ ಒಳ್ಳೆಯ ವರದಿಯೇ). ಇದು ಇಂಗ್ಲೀಷ್ ಭಾಷೆಯ ಪತ್ರಿಕೆಗಳ ಮಟ್ಟಿಗಂತೂ ಇನ್ನೂ ನಿಜ. ಪ್ರಾದೇಶಿಕ ಪತ್ರಿಕೆಗಳಿಗೆ ಹಲವು ಗಂಭೀರ ಸಮಸ್ಯೆಗಳಿವೆ. ಆದರೂ ಇವು ವಾಸ್ತವದಲ್ಲಿ ಸತ್ಯಕ್ಕೆ ಹತ್ತಿರವಾಗಿವೆ.

ವರದಿಗಾರರು ಕಂಗೆಟ್ಟ ಪ್ರದೇಶಗಳಿಗೆ ಭೇಟಿ ಕೊಟ್ಟಾಗ ಮಧ್ಯಾಹ್ನದ ಸಮಯವಾಗಿದ್ದರೆ ಸುಡುವ ಬಿಸಿಲು ಕೆಲವರನ್ನು ಆಕರ್ಷಿಸುತ್ತದೆ. ನಿಮ್ಮ ಚರ್ಮ ಹಾಗು ಕೂದಲು ಬೆಂಕಿಯಂತೆ ಸುಡುವಾಗ ಇಲ್ಲಿ ಅನಾದಿಕಾಲದಿಂದಲೂ ಬರ ಇದೆ ಎಂದು ಸುಲಭವಾಗಿ ನಂಬಬಹುದು. ಇಲ್ಲಿ ಎರಡು ತಿಂಗಳ ಹಿಂದೆ ಪ್ರವಾಹ ಇದ್ದಿರಬಹುದು, ಆದರೂ ಈಗಿನ ಮಟ್ಟಿಗೆ ಅದು ವಿಷಯವಲ್ಲ.

ಪ್ರತಿಯೊಬ್ಬ ಸಂಪಾದಕನಿಗೂ ಬರ ಎಂದರೆ ಬಿರುಕು ಬಿಟ್ಟ ನೆಲ ಹಾಗು ಕಂಗೆಟ್ಟ ರೈತನ ಚಿತ್ರ ಎನ್ನುವುದು ಗೊತ್ತು. 'ಮಾನವ ಆಸಕ್ತಿ' ವರದಿ ಎಂದರೆ ಇದೇ. ಅಲ್ಲವೇ ?

**(ಪುಸ್ತಕ : ಅಭಿನವ ಪ್ರಕಾಶನ
ಮುಖ ಬೆಲೆ : ರೂ. 350)**

ಬಿಜೆಪಿ ಸರ್ಕಾರದಿಂದ ವಿದ್ಯಾರ್ಥಿ ಪಾಸ್ ದರ ಏರಿಕೆ–ಎಬಿವಿಪಿಯಿಂದ ಪ್ರತಿಭಟನೆ


...ನೀನು ಸತ್ತಂಗೆ ಮಾಡು, ನಾನು ಅತ್ತಂಗೆ ಮಾಡ್ತೀನಿ.....

ಇದೊಂದು ಬಗೆಯ ಸೊಗಸಾದ ನಾಟಕ. ಇತ್ತೀಚೆಗೆ ಅಂದರೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲೆ ಈ ನಾಟಕ ಪ್ರತಿವರ್ಷವೂ ಹೆಚ್ಚು ಕಡಿಮೆ ಸಾಂಗವಾಗಿ ನಡೆದುಕೊಂಡು ಬರುತ್ತಿದೆ. ಪ್ರತಿ ವರ್ಷ ಶಾಲಾ ಕಾಲೇಜುಗಳು ಆರಂಭವಾಗುವಾಗ ವಿದ್ಯಾರ್ಥಿಗಳ ರಿಯಾಯಿತಿ ಬಸ್ ಪಾಸ್ ದರಗಳನ್ನು ಸರ್ಕಾರ ಏರಿಸುವುದು. ಏರಿಸುವಾಗ ಕೊಂಚ ಧಾರಾಳವಾಗಿಯೇ ಏರಿಸುವುದು. ಆಮೇಲೆ ಆರೆಸೆಸ್ಸ್‌ನ ವಿದ್ಯಾರ್ಥಿ ರಂಗದ ಮುಖವಾಡವಾಗಿರುವ ಎಬಿವಿಪಿ ಸಂಘಟನೆ ಪ್ರತಿಭಟನೆ ಮಾಡಿದ ಶಾಸ್ತ್ರ ಮಾಡುವುದು. ಶಿಕ್ಷಣ ಸಚಿವರು ಎಬಿವಿಪಿ ಪ್ರತಿಭಟನೆಯನ್ನು ಪರಿಗಣಿಸಿ ಪಾಸ್ ಶುಲ್ಕವನ್ನು ಸ್ವಲ್ಪ ಇಳಿಸಿರುವುದಾಗಿ ಪ್ರಕಟಿಸುವುದು.

ಅಂದರೆ ವಿದ್ಯಾರ್ಥಿ ಪೋಷಕರಿಗೆ ನಾಲ್ಕು ಬರೆ ಹಾಕುವುದು. ಆಮೇಲೆ ಬರೆಯ ಗಾಯಕ್ಕೆ ಮುಲಾಮು ಹಚ್ಚಿದ ಕೀರ್ತಿಯನ್ನು ಎಬಿವಿಪಿಗೆ ಕೊಡಿಸಲು ಸಹಾಯ ಮಾಡುವ ಉದ್ದೇಶದಿಂದ ನೂರಿನ್ನೂರು ರೂಪಾಯಿ ಕಡಿತ ಮಾಡುವುದು. ಈ ಬಾರಿ ರಾಜ್ಯದಲ್ಲಿ ಬರ ಪರಿಸ್ಥಿತಿ ಇರುವುದರಿಂದ ಶುಲ್ಕ ಏರಿಕೆಯನ್ನು ಕಡಿತ ಮಾಡಲಾಗುತ್ತಿದೆಯಂತೆ. ಎಬಿವಿಪಿ 'ಪ್ರತಿಭಟನೆ' ಮಾಡಿದ ದಿನ ರಾಜ್ಯಕ್ಕೆ ಬರ ಮೇಲಿನಿಂದ ಇಳಿದು ಬಂತಾ ? ಅದಕ್ಕೆ ಮೊದಲು ಬರ ಇರಲಿಲ್ಲವಾ ? ಆಗ ಸರ್ಕಾರದ ಬುದ್ದಿ ಏನು ಮೇಯಲು ಹೋಗಿತ್ತು ?

ಮೊದಲು ಪಾಸ್ ಪಡೆದುಕೊಳ್ಳಲು ದಿನಗಟ್ಟಲೆ ಸಾಲುಗಟ್ಟಿ ನಿಂತು ಸುಸ್ತಾದ ವಿದ್ಯಾರ್ಥಿಗಳು ವಾಪಸ್ಸು ಬರುವ ಈ ಹಣಕ್ಕಾಗಿ ಬೇರೆ ದಿನಗಟ್ಟಲೆ ಸಾಲುಗಟ್ಟಿ ನಿಲ್ಲಬೇಕು. ಏನು 'ಜ್ಞಾನ'ವೋ ? ಏನು 'ಶೀಲ'ವೋ ? ಏನು 'ಏಕತೆ'ಯೋ (ಈ ಸರ್ಕಾರ–ಎಬಿವಿಪಿಗಳ ನಡುವೆ ? ಏನು 'ಕರ್ಮ'ವೋ ಪಾಪ ಅಮಾಯಕ ವಿದ್ಯಾರ್ಥಿಗಳದ್ದು.

ಅಣ್ಣಾ ಹಜಾರೆಯವರು, ಬಾಬಾ ರಾಮೇದೇವ್‌ರವರು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವಂತ ಹೊರಟಿದ್ದ ಹೊತ್ತಲ್ಲಿ ಈ ಎಬಿವಿಪಿಗಳು ಕಾಲೇಜು ಬಿಡಿಸಿ 'ಮಕ್ಕಳ'ನ್ನು ಕರೆದುಕೊಂಡು ಹೋಗಿ ಕೇಂದ್ರ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಕೂಗಿಸಿದರು. ಅದು ಸರಿಯೇ. ಅದನ್ನು ಯಾರೂ ಬೇಡವೆನ್ನಲಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಮುಖ್ಯ ಮಂತ್ರಿಗಳು, ಮಂತ್ರಿಗಳು ಅಜೀರ್ಣವಾಗುವಷ್ಟು ತಿಂದು ವಾಂತಿ ಬೇಧಿ ಮಾಡಿಕೊಂಡು ಒಡ್ಡಾಡುತ್ತಿರುವಾಗಲೂ, ಸಾಲು, ಸಾಲಾಗಿ ಪರಪ್ಪನ ಅಗ್ರಹಾರ ಯಾತ್ರೆ ಮಾಡಿದಾಗಲೂ ಅದರ ಬಗ್ಗೆ ತುಟಿ ಬಿಚ್ಚಲಿಲ್ಲ. ಲೋಕಾಯುಕ್ತರನ್ನು ನೇಮಕ ಮಾಡದೇ ಸಂಸ್ಥೆಯನ್ನು ವರ್ಷಗಟ್ಟಲೆ ಸರ್ಕಾರ ಕೈ–ಕಾಲು ಕಟ್ಟಿಹಾಕಿ, ಬಾಯಿಗೆ ಬಟ್ಟೆ ತುರುಕಿಟ್ಟಿದ್ದರೂ ಆ ಬಗೆಗೆ ಬಾಯೇ ಬಿಡುವುದಿಲ್ಲ. ಅದೇನು ಶೀಲವೋ ? ಅದೇನು ಜ್ಞಾನವೋ ಆ ಶ್ರೀರಾಮ ಚಂದ್ರನೇ ಬಲ್ಲ !!




ಆರ್. ರಾಮಕೃಷ್ಣ

ಯಶಸ್ವಿ ರಾಜ್ಯ ಯುವಜನ ಸಮಾವೇಶ

ಆಗಸ್ಟ್ 4 ರಂದು ಚಿಕ್ಕಬಳ್ಳಾಪುರದಲ್ಲಿ ನಡೆದ ಡಿವೈಎಫ್ಐ ರಾಜ್ಯ ಸಮಾವೇಶದಲ್ಲಿ ಸಂಘಟನೆಯ ಅಖಿಲ ಭಾರತ ಅಧ್ಯಕ್ಷರಾದ ಶ್ರೀರಾಮಕೃಷ್ಣನ್ ಮಾತನಾಡುತ್ತಿರುವುದು. ಡಿವೈಎಫ್ಐ ಮಾಜಿ ರಾಜ್ಯ ಮುಖಂಡರಾದ ಜಿ.ವಿ.ಶ್ರೀರಾಮರೆಡ್ಡಿ ಡಿವೈಎಫ್ಐನ ರಾಜ್ಯ ಅಧ್ಯಕ್ಷರಾದ ಎನ್.ಎಲ್. ಭರತ್‌ರಾಜ್, ರಾಜ್ಯ ಉಪಾಧ್ಯಕ್ಷ ಪಿ. ಮುನಿವೆಂಕಟಪ್ಪ, ಎಸ್ಎಫ್ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ಶ್ರೀನಿವಾಸ ರೆಡ್ಡಿ ಮುಂತಾದವರು.





ಅನ್ನದಾತನ ಅಂತ್ಯ ಸಂಸ್ಕಾರವೂ ಬಿಜೆಪಿ ಸಚಿವರ ನಾಲಿಗೆ ಸಂಸ್ಕಾರವೂ

ಅದು ಹೈದರಾಬಾದ್ ಕರ್ನಾಟಕ ಭಾಗದ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಮುಕ್ಕುಂದಾ ಗ್ರಾಮ. ಆ ರೈತರ ಹೆಸರು ಹುಲುಗಪ್ಪ. ವಯಸ್ಸು 52. ತೀರಿಸಲಾಗದ ಸಿಂಡಿಕೇಟ್ ಬ್ಯಾಂಕಿನ ಸಾಲ ಈ ಅನ್ನದಾತನ ಉಸಿರನ್ನು ನಿರುಮ್ಮಳವಾಗಿ ಬಲಿ ತೆಗೆದುಕೊಂಡು ಬಿಡುತ್ತದೆ. ಹುಲುಗಪ್ಪ ವಿಷ ಕುಡಿದು ಬಿಟ್ಟಿದ್ದಾರೆ......

ಅದು ಮಲೆನಾಡಿನ ಒಂದು ಊರು.. ಸುಂಟಿಕೊಪ್ಪ ಸಮೀಪದ ನಾಕೂರು ಶಿರಂಗಾಲ ಗ್ರಾಮದ ನೆರೆಯ ಮಳ್ಳೂರು. ಆ ರೈತರ ಹೆಸರು ಎಚ್.ಬಿ. ಕಾಳಪ್ಪ. ವಯಸ್ಸು 83. ನೇಗಿಲ ಯೋಗಿಗೇನು ನಿವೃತ್ತಿಯೇ ? ಪಿಂಚಣಿಯೇ ? ಈ ವಯಸ್ಸಿನಲ್ಲೂ ಅವರು ರೈತರಾಗಿದ್ದರು. ಒಂದು ವಿಷಾದನೀಯ ಗಳಿಗೆ. ಅವರದ್ದೇ ಬಂದೂಕಿನ ಗುಂಡು ಅವರದ್ದೇ ತಲೆ ಸೀಳಿತು. ಪಾಪ. ತಲೆ ಯಾರದ್ದಾದರೇನು? ಸಿಡಿದ ಮೇಲೆ ಅಡ್ಡ ಬಂದದ್ದನ್ನು ಸೀಳುವುದೊಂದೇ ಗೊತ್ತಿರುವುದು ಆ ಗುಂಡಿಗೆ.

ಆದರೆ ಮನುಷ್ಯನಿಗೆ ?

ಅಧಿಕಾರಿಗಳು... ಶಾಸಕರು... ಸಂಸದರಿಗೆ....? ಛೇ ಪಾಪ. ಅವರ ಕಷ್ಟ ಅವರಿಗೆ. ಇನ್ನೇನು ಈ ವಿಧಾನ ಸಭೆಯ ಅವಧಿ ಮುಗಿದು ಹೊಗುತ್ತಿದೆ. ವಿದೇಶ ಪ್ರವಾಸದ ಅವಕಾಶ ಕೊನೆಗೂ ಕೈ ತಪ್ಪಿ ಹೋಗುವುದಾ ? ಇಲ್ಲ ಕೈಗಟುವುದಾ ?.... ಚಿಂತೆ. ರಾಜ್ಯದ ನೂರಕ್ಕೂ ಹೆಚ್ಚು ಶಾಸಕರಿಗೆ ವಿದೇಶ ಪ್ರವಾಸದ ಚಿಂತೆ. ವೀಸಾ–ಪಾಸ್ ಪೋರ್ಟ್ ಸಿದ್ಧತೆಯ ಚಿಂತೆ. ಅಧಿಕಾರಿಗಳಲ್ಲಿ ಕೆಲವರಿಗೆ ತಮ್ಮ ಮಡದಿಯನ್ನೂ ವಿದೇಶ ಪ್ರವಾಸದ ಪಟ್ಟಿಯಲ್ಲಿ ಸೇರಿಸುವ ತವಕ. 'ಹಾಳು ಬರ' ಎಲ್ಲವನ್ನೂ ಹಾಳು ಮಾಡುವಂತೆ ಕಾಣುತ್ತಿದೆ.

ಅಯ್ಯೋ !! ಬೆಂಕಿಯ ಕೆಂಡ ಸಿಗರೇಟನ್ನು ಸುಡುವಂತೆ ಬಿಕ್ಕಟ್ಟು ಅನ್ನದಾತನ ಬದುಕನ್ನು ಸದ್ದಿಲ್ಲದೇ ಸುಡುತ್ತಾ ಹೊರಟಿದೆ.

ಇಂಥಾ ಒಂದು ಹೊತ್ತಲ್ಲಿ ನಾಡಿನ ಕೃಷಿ ಸಚಿವರು ಘೋಷಿಸುತ್ತಾರೆ.

"ರಾಜ್ಯದಲ್ಲಿ ಬರ ಎದುರಾಗಿದೆ ಎಂದು ಯಾರೂ ಮದುವೆ ಮಾಡಿಕೊಳ್ಳುವುದನ್ನು ನಿಲ್ಲಿಸಿಲ್ಲ. ಅಂತ್ಯ ಸಂಸ್ಕಾರಗಳನ್ನು ನಿಲ್ಲಿಸಿಲ್ಲ. ಅದರಂತೆ ಶಾಸಕರು ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸ ಕೈ ಗೊಂಡರೆ ತಪ್ಪೇನೂ ಇಲ್ಲ."

ಆಹಾ! ಏನು ಸಂಸ್ಕಾರ. ಜನ ಪ್ರತಿನಿಧಿಗಳಾದವರು ಆಡಬೇಕಾದ ಮಾತೇ ಇದು!! ಸ್ವಂತ ಖರ್ಚಿನಲ್ಲಿ ಬರೀ ವಿದೇಶ ಪ್ರವಾಸ ಮಾಡಿಕೊಂಡೇ ಇದ್ದು ಬಿಡಬಹುದಾಗಿತ್ತಲ್ಲ ಈ ಜನ. ನೂರಾರು ಭರವಸೆ ಕೊಟ್ಟು ಚುನಾವಣೆಗೆ ಏಕೆ ನಿಲ್ಲಬೇಕಿತ್ತು. ಅನ್ನದಾತನ ಅಂತ್ಯ ಸಂಸ್ಕಾರ ನಡೆಯುತ್ತಿರುವ ಮನೆಗೆ ಹೋಗಿ ಆ ಜಗಲಿ ಕಟ್ಟೆಯ ಮೇಲೆ ಕೈಯೂರಿ ಕೂರಲು ಯಾವ ವೀಸಾ–ಪಾಸ್ ಪೋರ್ಟ್ ಕೂಡ ಬೇಕಿಲ್ಲ ಅಂತಾ ಈ ಅವಿವೇಕಿ ಸಚಿವರುಗಳಿಗೆ, ಶಾಸಕರುಗಳಿಗೆ ಹೇಳುವವರು ಯಾರು. ಅಡ್ವಾಣಿ–ಗಡ್ಕರಿ ಯಡಿಯೂರಪ್ಪ, ಈಶ್ವರಪ್ಪ.... ಯಾರಪ್ಪ ಹೇಳುವವರು...

ಪುಟ 15ಕ್ಕೆ

ಕಟುಕರ ಕೈಯ್ಯಲ್ಲಿ ಸಂಸ್ಕೃತಿ ಮತ್ತು ರಾಜಕಾರಣ

ಶಾಸಕರು, ಮಂತ್ರಿಗಳು ರೇವ್‌ಪಾರ್ಟಿ ಮಾಡಿದರೆ ಅದಕ್ಕಾಗಿ ಜಿಲ್ಲಾಡಳಿತವನ್ನು, ಸರ್ಕಾರಿ ಅಧಿಕಾರಿಗಳನ್ನೂ ಬಳಸಿಕೊಂಡರೆ ಅದನ್ನೊಂದು ಹೆಗ್ಗಳಿಕೆ ಎಂಬಂತೆ ಬಿಂಬಿಸುವ ಮಂದಿ ಯುವಜನರು ಸಂತೋಷ ಕೂಟಗಳನ್ನೇರ್ಪಡಿಸಿಕೊಂಡರೆ ಸಂಸ್ಕೃತಿಯ ನಾಶ ಎಂದು ಗದ್ದಲ ಎಬ್ಬಿಸುವುದು ಏಕೆ?

ಮಂತ್ರಿಯೋರ್ವರು ಅತ್ಯಾಚಾರವೆಸಗಿ ಸಿಕ್ಕಿಬಿದ್ದರೂ, ಅಪರಾಧ ಸಾಬೀತಾದರೂ ಸಂಸ್ಕೃತಿಯ ನೆನಪಾಗುವುದಿಲ್ಲ. ಅತ್ಯಾಚಾರಿಗೆ ಶಿಕ್ಷೆಯಾಗಲಿ ಎಂದು ಗದ್ದಲವೆಬ್ಬಿಸುವುದಿರಲಿ ಸಣ್ಣ ಸದ್ದನ್ನೂ ಮಾಡುವುದಿಲ್ಲ. ಮಹಿಳೆಯೋರ್ವರನ್ನು ಕಾಮಚೇಷ್ಟೆಗಳಿಗೆ ಬಳಸಿಕೊಂಡ ಆರೋಪ ಸ್ಥಾನದಲ್ಲಿ ನಿಂತ ನಂತರದಲ್ಲಿ ಶಾಸಕರೋರ್ವರು ಕ್ಯಾಬಿನೆಟ್ ಮಂತ್ರಿಯಾಗಿ ಈ ರಾಜ್ಯವಾಳಲು ಹೊರಟಾಗ ಪ್ರತಿರೋಧ ವ್ಯಕ್ತವಾಗುವುದಿಲ್ಲ. ಕಳೆದು ಹೋದ ಶಾಸಕರೊಬ್ಬರ ಪತ್ನಿ ಅನುಮಾನಾಸ್ಪದ ರೀತಿಯಲ್ಲಿ ಶವವಾಗಿ ದೊರಕಿದಾಗ, ಇದು ನಡೆದದ್ದು ಹೇಗೆ? ಈ ಬಗ್ಗೆ ತನಿಖೆಯಾಗಲಿ ಎಂದು ಯಾವೊಬ್ಬ ಸಂಸ್ಕೃತಿ ರಕ್ಷಕನು ಕೇಳಿದ್ದಿಲ್ಲ. ಶಾಸನಗಳನ್ನು ರೂಪಿಸುವ ಜವಾಬ್ದಾರಿ ಸ್ಥಾನದಲ್ಲಿ ಕೂತು ಸಮಾಜಕ್ಕೆ ಮಾದರಿಯಾಗಬೇಕಾದ ಮಂತ್ರಿಗಳು, ಶಾಸಕರು ಸದನ ನಡೆಯುವಾಗ ಬ್ಲೂಫಿಲಂ ನೋಡಿದ್ದು ಯಾವ ಸಂಸ್ಕೃತಿ ವಕ್ತಾರನನ್ನು ಕೆರಳಿಸಲಿಲ್ಲ.

ನಿರ್ದಿಷ್ಟವಾಗಿ ಪಡಿಲ್ ಘಟನೆಯ ಬಗ್ಗೆಯೇ ಅವಲೋಕಿಸೋಣ. ಸಂಸ್ಕೃತಿ ವಕ್ತಾರರ ಪ್ರಕಾರ ಅಲ್ಲಿ ನಿಜವಾಗಿಯೂ ನಡೆದದ್ದು ಸಂಸ್ಕೃತಿ ರಕ್ಷಣೆಯ ಕೆಲಸವೇ? ಕೆಳಕಂಡ ಪ್ರಶ್ನೆಗಳಿಗೆ ಅವರಲ್ಲಿ ಉತ್ತರವಿದೆಯೇ?

- ತುಂಡುಡುಗೆ ತೊಡುವುದು ಅಪಚಾರ, ಇದು ನಮ್ಮ ಸಂಸ್ಕೃತಿಯ ಲಕ್ಷಣ ಅಲ್ಲ ಆದ್ದರಿಂದಲೆ ಇಂಥಾ ಉಡುಪಿನಲ್ಲಿದ್ದ ಹೆಣ್ಣುಮಕ್ಕಳಿಗೆ ಬುದ್ಧಿಕಲಿಸಲು ಮುಂದಾದದ್ದು ಎಂದು ಕೆಲ ಹಿಂದೂವಾದಿಗಳು ಮಾಧ್ಯಮಗಳಲ್ಲಿ ಸಮರ್ಥಿಸಿಕೊಂಡರು. ಸರಿ. ಬಟ್ಟೆಯ ವಿಷಯವೇ ನಿಜವಾಗಿದ್ದಿದ್ದರೆ ಬಟ್ಟೆಯನ್ನು ಅವರ ಮೇಲೆ ಹೊದಿಸಿ ಮೈಮುಚ್ಚುವಂತಹ ಕಾಳಜಿಯನ್ನು ತೋರಿಸಬಹುದಿತ್ತೇ ಹೊರತು ಇದ್ದ ಬಟ್ಟೆಯನ್ನು ಕಿತ್ತು ಎಸೆಯುವ ಅಗತ್ಯವಿತ್ತೆ?
- ಇನ್ನೂ ಕೆಲ ಸಂಸ್ಕೃತಿ ರಕ್ಷಕರು ಸಮರ್ಥಿಸಿಕೊಂಡಂತೆ, ಅಣ್ಣ–ತಮ್ಮರ ಸ್ಥಾನದಲ್ಲಿ ನಿಂತು ಹೆಣ್ಣುಮಕ್ಕಳನ್ನು ದಂಡಿಸಿ ಬುದ್ಧಿ ಹೇಳುವುದು ತಪ್ಪಲ್ಲ ಹೀಗಾಗಿ ಈ ಘಟನೆಗೆ ತುಂಬಾ ಮಹತ್ವ ಕೊಡುವುದು ಬೇಡಾ. ಸಂಸ್ಕೃತಿ ವಕ್ತಾರರೆ ಹೇಳಿ, ನಿಮ್ಮ ಮನೆಗಳಲ್ಲಿ ಹೆಣ್ಣು ಮಕ್ಕಳ ಕಪಾಳಕ್ಕೆ ಹೊಡೆದೇ ಗಂಡುಮಕ್ಕಳು ಬುದ್ಧಿಕಲಿಸುವುದಾ? ಆ ಹೊತ್ತಿನಲ್ಲಿ ಅಣ್ಣ–ತಮ್ಮರು ತಮ್ಮ ಸಹೋದರಿಯರ ಬಟ್ಟೆಯನ್ನು ಕಳಚಿಯೇ ಪಾಠ ಹೇಳುವುದಾ? ಎಲ್ಲಿ ಬೇಕಾದರು, ಹೇಗೆ ಬೇಕಾದರು ಮುಟ್ಟುತ್ತಲೇ ಸಂಸ್ಕೃತಿ ಕಲಿಸುವುದಾ?
- ಪೊಲೀಸು ಹಾಗೂ ಕಾನೂನು ಸಂಸ್ಕೃತಿ ಉಳಿಸುತ್ತಿಲ್ಲ, ಹೀಗಾಗಿ ಅದರ ರಕ್ಷಣೆಗೆ ಇಂಥಾ ಪ್ರಯತ್ನಗಳು ನಡೆಯುತ್ತವೆಂದು ಕೆಲ ಹಿಂದೂ ಸಂಘಟನೆಗಳ ಮುಖಂಡರ ಅಭಿಪ್ರಾಯ. ಹಾಗಿದ್ದ ಮೇಲೆ ಗೃಹಮಂತ್ರಿಗಳಿಗೂ, ಕಾನೂನು ಮಂತ್ರಿಗಳಿಗೂ ಏನೇನೂ ಕೆಲಸವಿಲ್ಲವೆಂದಾಯ್ತು. ಇಷ್ಟಾದ ಮೇಲೆ ತಮ್ಮ ಬೆಂಬಲಿಗ ಸಂಘಟನೆಗಳ ಅಭಿಪ್ರಾಯಕ್ಕೆ ಮಾನ್ಯತೆ ನೀಡಿ ಈ ಇಬ್ಬರು ಸಚಿವರು ರಾಜೀನಾಮೆ ಸಲ್ಲಿಸುವರೇ? ಅಥವಾ ತಮ್ಮ ಈ ಬೆಂಬಲಿಗರ ಮೂಲಕವೇ ನೈತಿಕ ಪೊಲೀಸ್‌ಗಿರಿಯನ್ನು ಮುಂದುವರೆಸುವರೇ?

ಪೋಲೀಸ್ ಇಲಾಖೆ ಹೋಂ ಸ್ಟೇ ನಲ್ಲಿ ನಡೆದದ್ದು ಹುಟ್ಟು ಹಬ್ಬದ ಪಾರ್ಟಿ. ಅದು ರೇವ್ ಪಾರ್ಟಿ ಅಲ್ಲ. ವಿದ್ಯಾರ್ಥಿಗಳಾರು ಮಾದಕ ವಸ್ತು ಸೇವಿಸಿರಲ್ಲಿಲ್ಲ, ಅಂತದ್ದೇನು ಅಲ್ಲಿ ದೊರೆತ್ತಿಲ್ಲ ಎಂದು ಸ್ಪಷ್ಟವಾಗಿ ವರದಿ ನೀಡಿದ್ದರೂ ಮಹಿಳಾ ಆಯೋಗ ಅಲ್ಲಿ ಸೇರಿದ್ದ ವಿದ್ಯಾರ್ಥಿಗಳು ಗಾಂಜಾ ಸೇವಿಸಿದ್ದರು. ಅವರ ವೈದ್ಯಕೀಯ ಪರೀಕ್ಷೆಯನ್ನು ಮಾಡಬೇಕಿತ್ತು ಎಂದು ಹಸೀ ಸುಳ್ಳುಗಳನ್ನು ಹೇಳುತ್ತಿರುವುದು ಏಕೆ? ಧಾಳಿಕೋರರಲ್ಲಿ ಹಲವಾರು ಜನ ಕುಡಿದು ಓಲಾಡುತ್ತಿದ್ದರು ಎನ್ನುವುದನ್ನು ಮರೆ ಮಾಚುವುದೇಕೆ?



ವಿದ್ಯಾರ್ಥಿ–ವಿದ್ಯಾರ್ಥಿನಿಯರ ತಂದೆ ತಾಯಂದಿರು ನಾವೇ ಪಾರ್ಟಿಹಾಲ್‌ಗೆ ಮಕ್ಕಳನ್ನು ಬಿಟ್ಟು ಬಂದೆವು. ಆ ಮಕ್ಕಳೆಲ್ಲಾ ನಮ್ಮ ಪರಿಚಯದವರು ಎಂದು ಹೇಳಿರುವುದಕ್ಕೆ ಬೆಲೆಯೇ ಇಲ್ಲವೇ?

ಹೆಣ್ಣು ಮಕ್ಕಳ ಮೇಲೆ ಪೈಶಾಚಿಕ ದಾಳಿ, ಲೈಂಗಿಕ ಆಕ್ರಮಣ ಮಾಡಿದ ಗೂಂಡಾ ಪಡೆ 'ಹಿಂದೂ ಜಾಗರಣ ವೇದಿಕೆ'ಯ ಹೆಸರನ್ನೇ ಮಹಿಳಾ ಆಯೋಗ ತನ್ನ ವರದಿಯಲ್ಲಿ ನಮೂದಿಸದೆ ಬಿಟ್ಟಿದೆಯೆಂದರೆ ಅದರ ಅರ್ಥ ಏನು? ಮಹಿಳಾ ಆಯೋಗ ತನ್ನ ಮೂಲ ಉದ್ದೇಶ, ಆಶಯ, ಘೋಷಣೆಗಳಿಗೆ ವಿರುದ್ಧವಾಗಿ ಹಿಂದುತ್ವ ಗೂಂಡ ಪಡೆಗಳ ಅತ್ಯಾಚಾರ, ಅನಾಚಾರಗಳ ಸಮರ್ಥನೆಗೆ ನಿಂತಿದೆ ಎಂದು ಅರ್ಥ ತಾನೆ? ಇಂತಹ ಮಹಿಳಾ ಆಯೋಗದ ಅಧ್ಯಕ್ಷೆ ಎಂದುಕೊಳ್ಳುವವರು ಇನ್ನೂ ಆ ಸ್ಥಾನದಲ್ಲಿ ಮುಂದುವರೆದಿರುವುದು ಅತ್ಯಂತ ನಾಚಿಕೆಗೇಡಿನ ವಿಷಯ.

ಎನ್. ಪ್ರಭಾ

ಮಹಿಳಾ ಆಯೋಗವಲ್ಲ ಅವಹೇಳನ ಆಯೋಗ

ಪಡಿಲ್ ಘಟನೆಯ ವಿಚಾರಣೆ ನಡೆಸಿ ಮಹಿಳಾ ಆಯೋಗದ ಅಧ್ಯಕ್ಷರು ವರದಿ ನೀಡಿದರು. "ಬಲಿಪಶುಗಳ ದೂಷಣೆ" (Victim blaming) ಎನ್ನುವ ಪದಕ್ಕೆ ಸರಿಯಾದ ವ್ಯಾಖ್ಯಾನ ಬೇಕು ಎನ್ನುವವರು ಇವರ ವರದಿಯನ್ನು ಅಭ್ಯಾಸ ಮಾಡಬೇಕು. ಮಹಿಳಾ ಆಯೋಗವೆಂಬುದೊಂದನ್ನು ಸ್ಥಾಪಿಸಲು ಮಹಿಳಾ ಸಂಘಟನೆಗಳು ನಡೆಸಿರುವ ಹೋರಾಟಗಳು ಅಷ್ಟಿಷ್ಟಲ್ಲ. ಆಯೋಗದ ಈ ವರದಿಯನ್ನು ನೋಡಿದವರಿಗೆ ಅಸಹ್ಯವಾಗುತ್ತದೆ. ಅಪಾಯಕ್ಕೆ ಸಿಲುಕಿದ ಮಹಿಳೆಯರ ರಕ್ಷಣೆಗೆ ನಿಲ್ಲಬೇಕಾದ ಮಹಿಳಾ ಆಯೋಗ ಪುಂಡರು–ಪೋಕರಿಗಳು, ಗೂಂಡಾಗಳ ಪರವಾಗಿ ವಕಾಲತ್ತು ವಹಿಸುವುದು ಅಂದರೇನು? ಖಂಡನಾರ್ಹವಾದಂತಹ ನೀಚಮಟ್ಟದ ವರದಿಯೊಂದನ್ನು ನೀಡುವ ಆಲೋಚನೆ ಆಯೋಗದ ಅಧ್ಯಕ್ಷರಿಗೆ ಬಂದದ್ದಾದರೂ ಹೇಗೆ? ಅವರು ಪ್ರತಿನಿಧಿಸುತ್ತಿರುವ ಸ್ಥಾನದ ಕುರಿತು ಅವರಿಗೆ ತಿಳಿದಿಲ್ಲವೋ ? ಇಲ್ಲ ಈ ರಾಜ್ಯದ ಪ್ರಜ್ಞಾವಂತ ಜನ ಕಣ್ಣುಮುಚ್ಚಿ ಕೂತಿದ್ದಾರೆ ಎನ್ನುವ ಧೈರ್ಯವೋ, ಅಥವಾ ಆಪರೇಷನ್ ಕಮಲಕ್ಕೆ ನೆರವಾದ ಗಣಿಧಣಿಗಳಿಗೆ ಈ ಸರ್ಕಾರ ಒತ್ತೆಇಟ್ಟುಕೊಂಡಂತೆ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಜನರೆಲ್ಲರೂ ಬಿಜೆಪಿ ಸರ್ಕಾರಕ್ಕೆ ಒತ್ತೆ ಇಟ್ಟುಕೊಂಡಿದ್ದಾರೆ ಎನ್ನುವ ಭ್ರಮೆಯಿಂದಲೋ?


ವರದಿ ಒಪ್ಪಿಸಿ ಅವರು ಕೇಳುತ್ತಾರೆ...

"ರೈಲಿನಿಂದ ಯುವತಿಯನ್ನು ದೂಡಿದವರ ಬಗ್ಗೆ ಇಲ್ಲದ ಆಕ್ರೋಶ ಈ ಘಟನೆಯ ಬಗ್ಗೆ ಏಕಿರಬೇಕು"? "ಪಾರ್ಟಿ ಮಾಡಿದವರ ಹಿನ್ನೆಲೆ ಪರಿಶೀಲಿಸಬೇಕು" "ಸ್ಟೇ ಹೋಂ ಮಾಲಕರು ಅನುಮತಿ ಪಡೆದಿದ್ದರೇ ಎಂಬುದನ್ನು ನೋಡಬೇಕು" "ಪಾರ್ಟಿಗೆ ಸೇರಿದ್ದ ಯುವಕರು ಏನೇನು ಸೇವಿಸಿದ್ದರು ಅನ್ನುವುದನ್ನು ಪರಿಶೀಲಿಸಬೇಕಿತ್ತು" "ಮಾಧ್ಯಮಗಳು ಪೊಲೀಸರಿಗೆ ದೂರು ನೀಡಬೇಕಿತ್ತು" "ಮಾಧ್ಯಮದವರು ಹುಡುಗಿಯರನ್ನೇ ಏಕೆ ಮತ್ತೆ-ಮತ್ತೆ ತೋರಿಸಬೇಕಿತ್ತು, ಅವರ ಜೊತೆಯಿದ್ದ ಹುಡುಗರನ್ನು ಏಕೆ ತೋರಿಸಬಾರದಿತ್ತು?" ಇಂಥವೇ ಪ್ರಶ್ನೆಗಳ ಸುರಿಮಳೆಯನ್ನು ಘನ ಅಧ್ಯಕ್ಷರು ಸುರಿಸಿದ್ದಾರೆ.

ಅವರಿಗೂ ಕೆಲವು ಪ್ರಶ್ನೆಗಳಿವೆ ಉತ್ತರಿಸಲಿ ಅವರೂ...

- ಯುವತಿಗೆ ಕಿರುಕುಳ ನೀಡಿ ಆಕೆಯನ್ನು ರೈಲಿನಿಂದ ತಳ್ಳುವಂತೆ ಯಾರಾದರು ಆ ಹುಡುಗರನ್ನು ಪುಸಲಾಯಿಸಿ ಕಳಿಸಿಕೊಟ್ಟಿದ್ದರೇ ? ಸಂಸ್ಕೃತಿ ರಕ್ಷಣೆ ಹೆಸರಲ್ಲಿ ಯಾರಾದರೂ ಅದನ್ನು ಸಮರ್ಥಿಸಿದಾರೆಯೇ ?
- ನಿಮ್ಮ ಪ್ರಕಾರ ಪಡಿಲ್ ಘಟನೆಗೂ ರೈಲಿನ ಘಟನೆಗೂ ವ್ಯತ್ಯಾಸವಿಲ್ಲವೇ? ನೊಂದ ಆ ಸಹೋದರಿಯ ಪರವಾಗಿ ನೀವೊಬ್ಬರೇ ನಿಂತಿರುವುದೇ? ಮಂಗಳೂರಿನ ಘಟನೆಯನ್ನು ಖಂಡಿಸಿದವರೆಲ್ಲರು ಈ ಹುಡುಗಿಗೆ ಶತೃಗಳೇ?
- ನೀವು ಪಾರ್ಟಿ ಮಾಡಿದವರ ಹಿನ್ನೆಲೆಯನ್ನು ಮಾತ್ರ ವಿಚಾರಿಸಿ ವರದಿ ನೀಡಲು ಮಂಗಳೂರಿಗೆ ಹೋಗಿದ್ದವರೇ? ಆರ್.ಎಸ್.ಎಸ್

ಪುಟ 14ಕ್ಕೆ



ಕುಂದಾಪುರದಲ್ಲಿ ಪ್ರತಿಭಟನೆ


ಸಂವಿಧಾನಿಕ ಹೊಣೆಗಾರಿಕೆಯನ್ನೂ ಬದಿಗೊತ್ತಿಸಿದ ಪಿ.ಪಿ.ಪಿ. ಗೀಳು



ವೇದರಾಜ ಎನ್.ಕೆ.

ಯುಪಿಎ-2 ಪ್ರಧಾನ ಮಂತ್ರಿಗಳು ತಮ್ಮ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡದೇ ಇರಲು ಸಾಧ್ಯವಿರಲಿಲ್ಲ. ಆದರೆ ಅವರಿಗೆ ಮತ್ತು ಅವರ ಸರಕಾರಕ್ಕೆ ಭ್ರಷ್ಟಾಚಾರ ಈಗಲೂ ಮುಖ್ಯ ಸಮಸ್ಯೆಯೇ ಅಲ್ಲ ಎಂದು ಮತ್ತೊಮ್ಮೆ ಸ್ಪಷ್ಟವಾಗಿದೆ. ಒಂದು ವರ್ಷದ ಹಿಂದೆ 2ಜಿ ಹಗರಣ ಬಯಲಾದಾಗ, ಚರ್ಚೆಗೆ ಬಂದ ಹಲವು ವಿಷಯಗಳಲ್ಲಿ ಒಂದೆಂದರೆ, ನಿರ್ಣಾಯಕ ಪ್ರಶ್ನೆಗಳಲ್ಲಿ ಕೇಂದ್ರ ಸಂಪುಟ ಸಮಗ್ರ ಉಸ್ತುವಾರಿ ವಹಿಸದೆ ಅಂತಹ ನಿರ್ಣಯಗಳನ್ನು ಸಂಬಂಧಪಟ್ಟ ಇಲಾಖೆಗಳಿಗೇ ಬಿಟ್ಟು ಕೊಟ್ಟರೆ ಭ್ರಷ್ಟಾಚಾರಕ್ಕೆ ಹೆಚ್ಚಿನ ಅವಕಾಶಗಳು ಸಿಗುತ್ತವೆ ಎಂಬುದು. ಆದ್ದರಿಂದಲೇ ಆಗ ಮೂಲಸೌಕರ್ಯ ವಲಯದಲ್ಲಿ ಪಿಪಿಪಿ, ಅಂದರೆ ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಪ್ರಾಜೆಕ್ಟುಗಳಲ್ಲಿ ಫಲಾನುಭವಿ ಖಾಸಗಿಯವರಿಗೆ ಸರಕಾರೀ ಭೂಮಿಯನ್ನು ಸಂಪುಟದ ಮಂಜೂರಾತಿ ಇಲ್ಲದೆ ವರ್ಗಾಯಿಸುವಂತಿಲ್ಲ ಎಂಬ ನಿಷೇಧ ತರಲಾಯಿತು. ಆದರೆ ಯುಪಿಎ-2 ಪ್ರಧಾನ ಮಂತ್ರಿಗಳು ಈಗ ಸದ್ದಿಲ್ಲದೆ ಆ ನಿಷೇಧವನ್ನು ತೆಗೆದು ಹಾಕಿದ್ದಾರೆ. ದೇಶ ಈಗ ತುರ್ತಾಗಿ ಮೂಲಸೌಕರ್ಯ ಪ್ರಾಜೆಕ್ಟುಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ, ಸಂಪುಟದ ಮಂಜೂರಾತಿಯ ಪ್ರಶ್ನೆಯಿಂದಾಗಿ ಕನಿಷ್ಟ ಆರು ತಿಂಗಳ ವಿಳಂಬವಾಗುವುದನ್ನು ತಡೆಯಲಿಕ್ಕಾಗಿ ಈ ಕ್ರಮ ಎಂದು ಯುಪಿಎ-2 ವಕ್ತಾರರು ಈ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಪಿಪಿಪಿ ಫಲಾನುಭವಿ ಖಾಸಗಿಯವರಿಗೆ ಇಡೀ ಸಂಪುಟದ ಮಂಜೂರಾತಿಗೆ ತಮ್ಮ ಪ್ರಭಾವ ಬಳಸುವುದಕ್ಕಿಂತ ಒಂದು ಇಲಾಖೆಯ ಅಧಿಕಾರಿಗಳು, ಮಂತ್ರಿಗಳಿಗೆ ಆಮಿಷಗಳನ್ನು ತೋರಿಸಿ ಸರ್ಕಾರೀ ಭೂಮಿಯ ಅಕ್ರಮ ವರ್ಗಾವಣೆ ಮಾಡಿಸಿಕೊಳ್ಳುವುದು ಸುಲಭ; ಆದರೆ ಇಲ್ಲಿರುವುದು ಈ ಮೂಲಕ ಉಂಟಾಗುವ ಸೀಮಿತ ಭ್ರಷ್ಟಾಚಾರದ ಪ್ರಶ್ನೆಯಷ್ಟೇ ಅಲ್ಲ, ಇಲ್ಲಿ ವಿಶಾಲ ಅರ್ಥದ ಭ್ರಷ್ಟಾಚಾರದ ಪ್ರಶ್ನೆಯೂ ಇದೆ ಎನ್ನುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ ಪಟ್ನಾಯಕ್. ವಾಸ್ತವವಾಗಿ ಈ ಪಿಪಿಪಿ ಮಾದರಿ ಮೂಲಸೌಕರ್ಯ ಪ್ರಾಜೆಕ್ಟುಗಳು ಮೂಲತಃ ಖಾಸಗಿ ಡೆವಲಪರುಗಳ ರಿಯಲ್ ಎಸ್ಟೇಟ್ ಪ್ರಾಜೆಕ್ಟುಗಳು ಎಂಬುದು ಈಗ ಅನುಭವಸಿದ್ಧ ಸಂಗತಿ. ಸರ್ಕಾರೀ ಜಮೀನನ್ನು ಇಂತಹ ಖಾಸಗಿ ಡೆವಲಪರುಗಳ ಲಾಭಕ್ಕೆ ಒಪ್ಪಿಸಿಕೊಡುವಾಗ, ಅದನ್ನು ಹೆಚ್ಚು ಉನ್ನತವಾದ ಸಾಮಾಜಿಕ ಆದ್ಯತೆಯ ಉಪಯೋಗಕ್ಕೆ ಬಳಸಬಹುದೇ ಎಂಬ ಪರ್ಯಾಯದ ಬಗ್ಗೆ ಯೋಚಿಸುವುದು ಅಗತ್ಯ. ಈ ಪ್ರಶ್ನೆ 2ಜಿ ತರಂಗಾಂತರ ಹಂಚಿಕೆಯಲ್ಲಿ ಮುಂಚೂಣಿಗೆ ಬಂದ ಹಿನ್ನೆಲೆಯಲ್ಲಿ ಈ ನಿಷೇಧವನ್ನು ತರುವಾಗ ಇದರಿಂದಾಗಿ ಈ ಪ್ರಾಜೆಕ್ಟುಗಳ ಜಾರಿಯಲ್ಲಿ ವಿಳಂಬವಾಗಬಹುದು ಎಂಬುದು ಚೆನ್ನಾಗಿಯೆ ಗೊತ್ತಿದ್ದ ಸಂಗತಿ. ಹೀಗಿರುವಾಗ ಇಂತಹ ಭ್ರಷ್ಟ ಆಚರಣೆಗಳಿಗೆ ಅವಕಾಶವಿರದಂತೆ ಮಾಡಲು, ಸಮಾಜದ ಆದ್ಯತೆಗಳಿಗಿಂತ ಖಾಸಗಿಯವರ ಲಾಭಕ್ಕೆ ಹೆಚ್ಚು ಒತ್ತು ಕೊಡುವ ಪ್ರವೃತ್ತಿಯನ್ನು ತಡೆಯಲು ಪರ್ಯಾಯ ವ್ಯವಸ್ಥೆಗಳನ್ನೇನೂ ಮಾಡದೆಯೆ ಈ ನಿಷೇಧವನ್ನು ತೆಗೆದು ಹಾಕಿ,



ಸರಕಾರ ಇಂತಹ ಭ್ರಷ್ಟಾಚಾರದ ಬಗ್ಗೆ ತಾನೇನೂ ತಲೆಕೆಡಿಸಿಕೊಳ್ಳುವದಿಲ್ಲ ಎಂಬ ಸ್ಪಷ್ಟ ಸಂಕೇತ ನೀಡಿದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್. 2ಜಿ ಹಗರಣದ ಬಿಸಿಯಲ್ಲಿ ತಕ್ಷಣಕ್ಕೆ ಬಚಾವಾಗಲು ನಿಷೇಧ ತರಲಾಯಿತು, ಆ ಬಿಸಿ ಆರಿದೆ ಎಂದು ಅನಿಸಿದಾಗ ಅದನ್ನು ಸದ್ದಿಲ್ಲದೆ ತೆಗೆದು ಹಾಕಲಾಗಿದೆ, ಅಷ್ಟೇ.

ಆದರೆ ಅಷ್ಟೇ ಅಲ್ಲ, ಈಮೂಲಕ ಯುಪಿಎ-2 ಸರಕಾರ ತನಗೆ ಸಂವಿಧಾನಕ್ಕೆ ಬದ್ಧತೆಗಿಂತ ನವ-ಉದಾರವಾದಕ್ಕೆ ಬದ್ಧತೆಯೇ ಬಹಳ ಮುಖ್ಯ ಎಂಬುದನ್ನು ಕೂಡ ಮತ್ತೊಮ್ಮೆ ಸಾಬೀತು ಮಾಡಿದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್. ಈ ಹಿಂದೆ ಆಗಿನ ದೂರಸಂಪರ್ಕ ಮಂತ್ರಿ 2ಜಿ ತರಂಗಾಂತರ ಹಂಚಿಕೆಯಲ್ಲಿ ಹರಾಜು ಮಾರ್ಗವನ್ನು ಅನುಸರಿಸಿ ಎಂಬ ತನ್ನ ನಿರ್ದೇಶನವನ್ನು ಉಲ್ಲಂಘಿಸಿದಾಗ ಪ್ರಧಾನ ಮಂತ್ರಿಗಳು ಕಣ್ಣುಮುಚ್ಚಿ ಕುಳಿತುಕೊಂಡದ್ದನ್ನು 'ಸಮ್ಮಿಶ್ರ ಧರ್ಮ'ದಿಂದಾಗಿ ಎಂದು ಸಮರ್ಥಿಸಿಕೊಂಡು ಸಂವಿಧಾನ ಬದ್ಧತೆಗಿಂತ ಆ 'ಧರ್ಮ'ವೇ ಮುಖ್ಯವೇ ಎಂದು ಪ್ರದರ್ಶಿಸಿದ್ದರು. ಈಗ ಮತ್ತೆ ಅದೇ ತಪ್ಪನ್ನು ಮಾಡುತ್ತಿದ್ದಾರೆ ಎಂದು ಪ್ರೊ. ಪಟ್ನಾಯಕ್ ಟೀಕಿಸಿದ್ದಾರೆ. ಪಿಪಿಪಿ ಮಾದರಿಗೆ ಅವರು ಮತ್ತು ಅವರ ಯೋಜನಾ ಆಯೋಗದ ಭಕ್ತಿಪೂರ್ಣ ಸಮರ್ಪಣೆಯ ಹಿನ್ನೆಲೆಯಲ್ಲಿ, ಇದಕ್ಕೆ ಸಮ್ಮಿಶ್ರ ಸಂಪುಟದಲ್ಲಿ ಒಮ್ಮತದ ಸಾಧ್ಯತೆ ಇಲ್ಲವಾದ್ದರಿಂದ, ತಮ್ಮ ಹಿಂಬಾಲಕರು ಸಂಪುಟವನ್ನು ಬದಿಗೊತ್ತಿ ಮುಂದುವರಿಯಲು ಅವಕಾಶ ಕಲ್ಪಿಸಿ ಕೊಡಲಿಕ್ಕಾಗಿ ಈ ಕ್ರಮ ಕೈಗೊಂಡಿದ್ದಾರೆ, ಅದಕ್ಕಾಗಿ ಸಂಪುಟದ ಸಾಮೂಹಿಕ ಹೊಣೆಗಾರಿಕೆ ಎಂಬ ಸಾಂವಿಧಾನಿಕ ತತ್ವಕ್ಕೆ ಸಂಚಕಾರ ತರಲು ಹಿಂಜರಿದಿಲ್ಲ.

ಮತ್ತೊಂದು ಮಹಾಹಗರಣ:
ಮತ್ತೊಮ್ಮೆ ಸಿಎಜಿ ಲೆಕ್ಕಾಚಾರಕ್ಕೆ ಸವಾಲು

ಯುಪಿಎ-2 ಸರಕಾರ ನಿಜವಾಗಿಯೂ ಭ್ರಷ್ಟಾಚಾರದ ಬಗ್ಗೆ ತಲೆ ಕೆಡಿಸಿಕೊಂಡಿಯೇ ಇಲ್ಲ ಎನ್ನುವುದು ಈಗ ಬಯಲಾಗುತ್ತಿರುವ ಇನ್ನೊಂದು ಮಹಾಹಗರಣದ ಕುರಿತು ಅದರ ನಿಲುವಿನಿಂದ ಇನ್ನಷ್ಟು ಸ್ಪಷ್ಟವಾಗುತ್ತದೆ. 2ಜಿ ಹಗರಣದಲ್ಲಿ ಸರ್ಕಾರೀ ಬೊಕ್ಕಸಕ್ಕೆ 1.76 ಕೋಟಿ ರೂ. ನಷ್ಟವಾಗಿದೆ ಎಂಬ ಸಿಎಜಿ ಲೆಕ್ಕಾಚಾರ, ಅದಕ್ಕೆ ಅದು ಅನುಸರಿಸಿದ ವಿಧಾನ ಸರಿಯಾಗಿಲ್ಲ ಎಂದು ಯುಪಿಎ ಸರಕಾರದ ವಕ್ತಾರರು ಹೇಳುತ್ತಾ ತಿರುಗುತ್ತಿದ್ದರೂ, ಸುಪ್ರಿಂ ಕೋರ್ಟಿನ ತೀರ್ಪಿನ ನಂತರ, ಅದೆಲ್ಲ ಸರಿಯಾಗಿಯೇ ಇತ್ತು ಎಂಬುದನ್ನು ಸ್ವತಃ ಸರಕಾರವೇ ಪರೋಕ್ಷವಾಗಿಯಾದರೂ ಒಪ್ಪಿಕೊಂಡಿದೆ ಎಂಬುದು 2ಜಿ ತರಂಗಾಂತರದ ಮರು ಹಂಚಿಕೆಗೆ ಅದು ಗೊತ್ತು ಪಡಿಸಿದ ಮೊತ್ತದಿಂದ ಸ್ಪಷ್ಟವಾಗುತ್ತದೆ ಎಂಬುದನ್ನು ಈ ಅಂಕಣದಲ್ಲಿ ಕಳೆದ ವಾರ ಗಮನಿಸಿದ್ದೇವೆ.

ಈಗ. ಸಿಎಜಿ ಇನ್ನೂ ಒಂದು ವರದಿ ಮಂಡಿಸಿದ್ದು, ಅದು ಇನ್ನೂ ದೊಡ್ಡದಾದ ಇನ್ನೊಂದು ಹಗರಣದ ಸೂಚನೆ ನೀಡುತ್ತಿದೆ ಎನ್ನಲಾಗುತ್ತಿದೆ. ಅದನ್ನು ಸದ್ಯದಲ್ಲಿಯೇ ಸಂಸತ್ತಿನಲ್ಲಿ ಮಂಡಿಸಬೇಕಾಗಿದೆ. ಆಗ, ಮತ್ತೆ ಹಿಂದಿನಂತೆ ಇಲ್ಲಿಯೂ ಹಗರಣವೇ ಇಲ್ಲ, ಸಿಎಜಿ ಲೆಕ್ಕಾಚಾರವೇ ಸರಿಯಿಲ್ಲ ಎಂದು ತನ್ನನ್ನು ಸಮರ್ಥಿಸಿಕೊಳ್ಳಲು ಅದು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆಯಂತೆ. ಕಲ್ಲಿದ್ದಲು ಗಣಿಗಳನ್ನು ಕೆಲವು ಖಾಸಗಿಯವರಿಗೆ ನಿರ್ದಿಷ್ಟವಾಗಿ ಹಂಚಿರುವುದರಿಂದ ಟಾಟಾಗಳು, ನವೀನ್ ಜಿಂದಾಲ್ ಗುಂಪು, ಭೂಷಣ್ ಸ್ಟೀಲ್ ಮತ್ತು ಜೇಪಿ ಮತ್ತು ಅದಾನಿ ಗುಂಪುಗಳಿಗೆ ಒಟ್ಟು 1.86 ಲಕ್ಷ ಕೋಟಿ ರೂ.ಗಳ ಲಾಭವಾಗಿದೆ ಎಂಬ ತೀರ್ಮಾನಕ್ಕೆ ದೇಶದ ಈ ಅತ್ಯುನ್ನತ ಲೆಕ್ಕ ಪರಿಶೋಧಕ ಸಂಸ್ಥೆ ಬಂದಿದೆ ಎನ್ನಲಾಗಿದೆ. ಆದರೆ ಈ ಲೆಕ್ಕಾಚಾರ ಅರ್ಥಹೀನ, ಏಕೆಂದರೆ, ಕಲ್ಲಿದ್ದಲು ಗಣಿಗಳ ಹಂಚಿಕೆಯನ್ನು ಸರಕಾರ

ಪುಟ 14 ಕ್ಕೆ

ನಮಗೆ ಫೈಟರ್ ವಿಮಾನಗಳು ಬೇಕೋ ಅಥವ ಶೌಚಾಲಯಗಳೋ?

ಈ ಪ್ರಶ್ನೆ ಕೇಳಿದವರು ಯಾರು ಗೊತ್ತೇ? 'ದೇಶದ್ರೋಹಿ' ಎಂದು ಹೀಯಾಳಿಸಬಹುದಾದವರು ಯಾರೂ ಅಲ್ಲ, ಸ್ವತಃ ಯುಪಿಎ-2 ಸರಕಾರದ ಒಬ್ಬ ಮಂತ್ರಿಗಳ ಉದ್ಗಾರವಿದು ! ಅಗ್ಗದ ಜನಪ್ರಿಯತೆಗಾಗಿ ಇರಬಹುದೇ? ಗೊತ್ತಿಲ್ಲ.

"ಒಂದು ರಾಫೆಲ್ ಯುದ್ಧವಿಮಾನಕ್ಕೆ ಮಾಡುವ ಖರ್ಚಿನಲ್ಲಿ 1,000 ಗ್ರಾಮ ಪಂಚಾಯತುಗಳಲ್ಲಿ ಸಾಮೂಹಿಕ ಶೌಚಾಲಯಗಳನ್ನು ಕಟ್ಟಿಸಬಹುದು. ನಮ್ಮ ರಕ್ಷಣಾ ಇಲಾಖೆ ಇಂತಹ 126 ವಿಮಾನಗಳನ್ನು ಕೊಳ್ಳುವ ಪ್ರಕ್ರಿಯೆಯಲ್ಲಿದೆ" ಎಂದವರು ಯುಪಿಎ-2 ಸರಕಾರದ ಗ್ರಾಮೀಣಾಭಿವೃದ್ಧಿ ಮಂತ್ರಿಗಳು. ಅವರೇನೋ ಜೋಕಾಗಿ ಈ ಮಾತು ಹೇಳಿದರಂತೆ. ಅಥವ ತಮ್ಮ ರಕ್ಷಣಾ ಮಂತ್ರಾಲಯದ ಸಹಯೋಗಿಯ ಬಗ್ಗೆ ಮತ್ಸರದಿಂದ ಹೇಳಿರಬಹುದೇನೋ ಎಂದು ಕೆಲವರ ಸಂದೇಹ. ಇರಲಿ, ನಮ್ಮ ಬಜೆಟಿನಲ್ಲಿ ರಕ್ಷಣೆಗೆ ಕೊಟ್ಟಿರುವ ಹಣ 1.90ಲಕ್ಷ ಕೋಟಿ ರೂ.ಗಳಾದರೆ, ಹಳ್ಳಿಗಳ ದೇಶ ಎನ್ನುವ ಭಾರತದ ಗ್ರಾಮೀಣಾಭಿವೃದ್ಧಿಗೆ ನೀಡಿರುವ ಒಟ್ಟು ಹಣ ಅದರರ್ಧದಷ್ಟೂ ಇಲ್ಲ, ಕೇವಲ 90ಸಾವಿರ ಕೋಟಿ. ದೇಶದ ರಕ್ಷಣೆ ಮುಖ್ಯ, ಆದರೆ ಹಳ್ಳಿಗಳನ್ನು ದುರ್ಬಲವಾಗಿಟ್ಟು ದೇಶದ ರಕ್ಷಣೆ ಸಾಧ್ಯವೇ ಎಂಬುದೇನೂ ಈ ಮಂತ್ರಿಗಳ ಕಾಳಜಿ ಇದ್ದಂತಿಲ್ಲ.

ಗ್ರಾಮೀಣ ಆರ್ಥಿಕವನ್ನು ನುಚ್ಚುನೂರು ಮಾಡಿರುವ ನವ-ಉದಾರವಾದಿ ಗೀಳನ್ನು ಬಿಡಲಾರದೆ ಸ್ವತಃ ಜೋಕಾಗಿರುವ ಒಂದು ಸರಕಾರದ ಮಂತ್ರಿಗಳು 'ಆಮ್ ಆದ್ಮಿ'ಯ ಬಗ್ಗೆ ಏನು ಕಣ್ಣೀರುಗರೆದರೂ ಅದು ಒಂದು ಜೋಕು ಆಗುವ ಸಂಭವವೇ ಹೆಚ್ಚು.

ಸಂಸ್ಕೃತಿ ಮತ್ತು ರಾಜಕಾರಣ

ಪುಟ 12 ರಿಂದ

ಪ್ರತಿನಿಧಿಸಿ ಘಟನೆಯ ವಿಚಾರಣೆಗೆ ಹೋಗಿದ್ದಾದಲ್ಲಿ ನಿಮ್ಮ ವರದಿ ಸರಿ ಇದೆ. ಆದರೆ ಅದನ್ನು ದೌರ್ಜನ್ಯಕ್ಕೊಳಗಾದ ಹೆಣ್ಣು ಮಕ್ಕಳಿಗೆ ನ್ಯಾಯ ಒದಗಿಸಲು ನಿರ್ಮಿಸಲಾಗಿರುವ ಮಹಿಳಾ ಆಯೋಗದ ಪರವಾಗಿ ಸಲ್ಲಿಸಿದ್ದೇಕೆ? ಮತ್ತೆ, ನೊಂದ ಹೆಣ್ಣು ಮಕ್ಕಳ ಪರವಾಗಿ ತನಿಖೆ ನಿಭಾಯಿಸುವವರು ಯಾರು? ಸಮವಸ್ತ್ರದಲ್ಲಷ್ಟೇ ಖಾಕಿಯಾಗಿರುವ ಮಂಗಳೂರಿನ ನಿಮ್ಮ ಖಾವಿಪಡೆಗಳೇ?

■ ಬಾರ್/ಸ್ಟೇ ಹೋಂ/ಕ್ಲಬ್ಬು/ರೆಸಾರ್ಟ್ ಇವುಗಳಿಗೆಲ್ಲ ಲೈಸೆನ್ಸ್ ನೀಡುವುದನ್ನು ನಿಮ್ಮ ಸರ್ಕಾರ ನಿಲ್ಲಿಸಿಬಿಟ್ಟಿದೆಯೇ? ಅವುಗಳು ಅಧಿಕೃತವೋ, ಅನಧಿಕೃತವೋ ಪರಿಶೀಲಿಸಬೇಕಾದವರು ಸಂಬಂಧಿಸಿದ ಇಲಾಖೆಯವರೋ ಇಲ್ಲಾ ನಿಮ್ಮ ನೈತಿಕ ಪೋಲೀಸರೋ? ಇವರಿಗೆ ಲೈಸೆನ್ಸ್ ಕೊಟ್ಟವರು ಯಾರು?

■ ಪಾರ್ಟಿಗೆ ಸೇರಿದ್ದ ಯುವಕರು ಏನೇನು ಸೇವಿಸಿದ್ದರೋ ಅವರ ಚಾರಿತ್ರ್ಯ ತಿಳಿಯಬೇಕಿತ್ತು ಎಂದಿರಲ್ಲವೇ, ವಿಚಾರಣೆಯಲ್ಲಿ ಅವರ ಚಾರಿತ್ರ್ಯ ಮಾತ್ರ ತಿಳಿದರೆ ಸಾಕೇ? ದಾಳಿಮಾಡಿದವರ ಚಾರಿತ್ರ್ಯ ನಿಮಗೆ ಮೊದಲೇ ತಿಳಿದು ಹೋಗಿತ್ತೇ? ಮಾಧ್ಯಮದವರು, ಕಾಣುವಂತೆ ಹುಡುಗಿಯರನ್ನೇ ಮತ್ತೆ-ಮತ್ತೆ ತೋರಿಸಿದ್ದು ಖಂಡಿತಾ ಸರಿ ಇಲ್ಲಾ. ನೀವು ಹೇಳಿರುವಂತೆ ಹುಡುಗಿಯರ ಜೊತೆಯಿದ್ದ ಹುಡುಗರನ್ನೂ ತೋರಿಸಬೇಕಿತ್ತು. ಆದರೇ, ಅದೇ ಸಮಯಕ್ಕೆ ದಾಳಿ ನಡೆಸಿದ ಹುಡುಗರನ್ನು ತೋರಿಸಬೇಕಿರಲಿಲ್ಲವೇ? ಅವರೆಲ್ಲರ ಮುಖಪರಿಚಯ ನಿಮಗೇ ಮೊದಲೇ ಸ್ಪಷ್ಟವಾಗಿತ್ತೆ?

■ ಮುಖ್ಯಮಂತ್ರಿಗಳಾದಿಯಾಗಿ ನಿಮ್ಮ ಸರ್ಕಾರದ ಬಹುತೇಕ ಸಚಿವರೆಲ್ಲರೂ ಘಟನೆಯನ್ನು ಖಂಡಿಸಿ ಹೇಳಿಕೆ ನೀಡಿರುವಾಗ ಮಹಿಳಾ ಅಯೋಗದ ಅಧ್ಯಕ್ಷರಾಗಿ ನೀವು ಮಹಿಳಾ ವಿರೋಧಿಯೂ, ನೀಚ ಸಂಸ್ಕೃತಿಯ ಪೋಷಣೆಗೂ ನಿಂತಂತಿರುವ ವರದಿಯೊಂದನ್ನು ಸಲ್ಲಿಸಿದ್ದಾದರು ಏಕೆ? ಈ ಘಟನೆಯಲ್ಲಿ ಪೊಲೀಸು ಮತ್ತು ಮಹಿಳಾ ಅಯೋಗದ ವರದಿ ಪ್ರಾಮುಖ್ಯ ಪಡೆದೇ ಪಡೆಯುತ್ತದೆ ಎನ್ನುವ ವಿಶ್ವಾಸದಿಂದಲೋ?

ಉ. ಕರ್ನಾಟಕದ ಹಿಂದುಳಿದಿರುವಿಕೆ....

ಪುಟ 5 ರಿಂದ

ಇನ್ನಷ್ಟು ಸಂಕಷ್ಟ ಪಡುವಂತಹ ಪರಿಸ್ಥಿತಿಯನ್ನು ತಂದೊಡ್ಡಿವೆ. ತೀವ್ರ ಅತಿವೃಷ್ಟಿಯಿಂದ ಬದುಕನ್ನೇ ಕಳೆದುಕೊಂಡವರಿಗೆ ಸಮರ್ಪಕವಾಗಿ ಕನಿಷ್ಟ ಸೂರು ಒದಗಿಸಲು ಮುತುವರ್ಜಿ ವಹಿಸಿಲ್ಲ. ಬದಲಿಗೆ ನೈಸರ್ಗಿಕ ಸಂಪತ್ತಾದ ಗಣಿ-ಭೂಮಿ ಮತ್ತಿತರ ಸಾರ್ವಜನಿಕವಾದ ಸಂಪತ್ತನ್ನು ಲೂಟಿಮಾಡಲು ಅನುವು ಮಾಡಲಾಯಿತು. ಅಷ್ಟೇ ಅಲ್ಲದೇ ಆರಾಜಕತೆ ಮತ್ತು ಅಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಜನರ ಶೋಷಣೆಯನ್ನು ಅಮಾನವೀಯವಾಗಿ ನಡೆಸಲಾಗುತ್ತಿದೆ. ಡಾ. ನಂಜುಂಡಪ್ಪ ವರದಿಯನ್ನು ಜಾರಿಗೆ ತರುತ್ತೇವೆಂಬ ಹೆಸರಿನಲ್ಲಿ ಪ್ರತಿವರ್ಷ ಮೀಸಲಿಟ್ಟ ಹಣವನ್ನು ನುಂಗಿ ನೀರು ಕುಡಿಯಲಾಗುತ್ತಿದೆ. ಜೊತೆಗೆ ಜಾತಿ ಮತ್ತು ಕೋಮಿನ ಹೆಸರಿನಲ್ಲಿ ಉತ್ಸವಗಳು ಮತ್ತು ಸಮಾವೇಶಗಳನ್ನು ಆಯೋಜಿಸುವುದು. ಆ ಮೂಲಕ ಪ್ರಜಾಸತ್ತಾತ್ಮಕ ಚಳುವಳಿಯ ಬೆಳವಣಿಗೆಗೆ ತಡೆ ಒಡ್ಡುವುದು... ಮುಂತಾದ ಸಂವಿಧಾನಬಾಹಿರ ನೀತಿಗಳಿಗೆ ಸರ್ಕಾರ ಕುಮ್ಮಕ್ಕು ಕೊಡುತ್ತಿದೆ. ಹೀಗಾಗಿ ಯುವಜನತೆ ಇನ್ನಷ್ಟು ಕಂಗಾಲಾಗಿ ಹೋಗಿದ್ದಾರೆ. ಕೆಲವರು ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿರುವ ಈ ಪ್ರದೇಶದ ಜನತೆಯನ್ನು ತಾವು ಪ್ರತ್ಯೇಕಗೊಂಡರೆ ಸಮಸ್ಯೆಗಳು ಬಗೆಹರಿಯುತ್ತವೆಂದು ಕೆಲವು ಸಂಘಟನೆಗಳು ದಿಕ್ಕು ತಪ್ಪಿಸುತ್ತಿವೆ. ಇನ್ನು ಕೆಲವು ಭಾಷಾಂಧ ಮತ್ತು ಪ್ರದೇಶಾಂಧ ಶಕ್ತಿಗಳು ತಮ್ಮ ಸ್ವಾರ್ಥ ಹಿತಕ್ಕಾಗಿ ಬಳಸಿಕೊಳುತ್ತಿವೆ. ಹೀಗಾಗಿ ಈ ಭಾಗದ ಜನತೆಗೆ ಯಾರ ಮೇಲು ವಿಶ್ವಾಸ ಇಲ್ಲದಂತಹ ಸ್ಥಿತಿಗೆ ಬಂದಿದ್ದಾರೆ. ಆದರೆ ಸದ್ಯದ ಬದುಕನ್ನು ಹೇಗಾದರೂ ನೂಕುವ ಅನಿವಾರ್ಯತೆಯಲ್ಲಿ ಬಿಜೆಪಿ ಸರ್ಕಾರದ ಹುನ್ನಾರಕ್ಕೆ ಬಲಿಯಾಗುತ್ತಿದ್ದಾರೆ. ಹೀಗಾಗಿ ನಿಜವಾದ ಉತ್ತರ ಕರ್ನಾಟಕ ಪ್ರದೇಶ ಅಭಿವೃದ್ಧಿಗೆ ಪೂರಕವಾಗಿ ಯುವಜನಾಂದೋಲನವನ್ನು ರೂಪಿಸುವ ಅಗತ್ಯವಿದೆ. ಆದ್ದರಿಂದ ಪ್ರಜಾಸತ್ತಾತ್ಮಕವಾದ ಯುವಜನ ಚಳುವಳಿಯನ್ನು ರೂಪಿಸುವುದು ಪ್ರಜ್ಞಾವಂತರೆಲ್ಲರ ಅತ್ಯಗತ್ಯವಾದ ಜವಾಬ್ದಾರಿಯಾಗಿದೆ. ●

ಯುಪಿಎ ದರ್ಬಾರ್......

ಪುಟ 13 ರಿಂದ

ಆದಾಯ ಉತ್ಪಾದಿಸುವ ಕಸರತ್ತು ಎಂದು ಬಗೆದೇ ಇಲ್ಲ. ಗುರುತಿಸಿದ ಮೂಲ ಸೌಕರ್ಯ ವಲಯಗಳಲ್ಲಿ ಖಾಸಗಿಯವರು ಹಣ ಹೂಡುವಂತೆ ಒಳಗೊಳ್ಳುವುದಷ್ಟೇ ತನ್ನ ಆಶಯವಾಗಿತ್ತು ಎಂಬುದು ಸರಕಾರದ ಸ್ವಸಮರ್ಥನೆಯ ಒಂದು ತರ್ಕವಾದರೆ, ಇನ್ನೊಂದೆಡೆ, ಸಿಐಎಲ್ (ಕೋಲ್ ಇಂಡಿಯಾ ಲಿಮಿಟೆಡ್) ಇಂತಹ ಗಣಿಗಳಿಂದ ಪಡೆಯುವ ಆದಾಯವನ್ನು ಇಂತಹ ಲೆಕ್ಕಾಚಾರಕ್ಕೆ ಮಾನದಂಡವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ ಇವರೆಲ್ಲರಿಗೂ ಕಲ್ಲಿದ್ದಲು ಒದಗಿಸುವ ಸಾಮರ್ಥ್ಯ ಅದಕ್ಕೆ ಇಲ್ಲವೇ ಇಲ್ಲ ಎಂಬುದು ಅದರ ಸ್ವಸಮರ್ಥನೆಯಯ ಇನ್ನೊಂದು ತರ್ಕವಂತೆ.

ಕಲ್ಲಿದ್ದಲು, ನಾಗರಿಕ ವಿಮಾನಯಾನ ಮತ್ತು ಇಂಧನ ಇಲಾಖೆಯ ಹಿರಿಯ ಅಧಿಕಾರಿಗಳೆಲ್ಲ ಕಲೆತು ಈ ಬಾರಿ 2ಜಿಯಲ್ಲಾದಂತೆ ದುರ್ಬಲ ಸಮರ್ಥನೆಗಳನ್ನು ಕೊಡದೆ ಗಟ್ಟಿಯಾದ ಸಮರ್ಥನೆಗಳನ್ನೇ ಕೊಡಬೇಕೆಂದು ತಿಣುಕಾಡುತ್ತಿದ್ದಾರಂತೆ.

ಬೆಲೆಯೇರಿಕೆಯ ಹೊರೆ
ಹೆಚ್ಚಿಸಲಿರುವ ಬರ ಪರಿಸ್ಥಿತಿ

ಕರ್ನಾಟಕ, ರಾಜಸ್ಥಾನ, ಗುಜರಾತ ಮತ್ತು ಮಹಾರಾಷ್ಟ್ರ ಬರ ಪರಿಸ್ಥಿತಿಯನ್ನು ಎದುರಿಸಬೇಕಾದ ಸನ್ನಿವೇಶವಿದ್ದುಇದು ದೇಶದಲ್ಲಿ ಆವಶ್ಯಕ ಸರಕುಗಳ ಬೆಲೆಯೇರಿಕೆಗೆ ಕಾರಣವಾಗಬಹುದು ಎಂದು ಯುಪಿಎ-2 ಆಹಾರ ಮಂತ್ರಿಗಳು ರಾಜ್ಯ ಸಭೆಯಲ್ಲಿ. ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ಹೇಳಿದ್ದಾರೆ. ಆಗಸ್ಟ್ ತಿಂಗಳ ವರೆಗೆ ಮಳೆಯಲ್ಲಿ 17ಶೇ. ಕೊರತೆಯಾಗಿದೆ. ಕೆಲವು ಬೇಳೆ ಕಾಳುಗಳು, ಸಕ್ಕರೆ, ಅಡುಗೆ ಎಣ್ಣೆ, ಟೊಮೆಟೋ ಬೆಲೆಗಳು ಈಗಾಗಲೇ ಕಳೆದ ಮೂರು ತಿಂಗಳಲ್ಲಿ ಏರಿವೆ ಎಂದೂ ಮಂತ್ರಿಗಳು ಹೇಳಿದ್ದಾರೆ. ಸರ್ಕಾರ ಬೆಲೆಯೇರಿಕೆಯನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಹೇಳಲು ಅವರು ಮರೆತಿಲ್ಲ.

ಈ ನಡುವೆ ವಿಶ್ವ ಆಹಾರ ಮತ್ತು ಕೃಷಿ ಸಂಘಟನೆ (ಎಫ್ಎಒ) ಕೂಡ ಜುಲೈ ತಿಂಗಳಲ್ಲಿ ಆಹಾರ ಬೆಲೆಗಳು ತೀವ್ರವಾಗಿ ಏರಿವೆ ಎಂದಿದೆ. ಇದಕ್ಕೆ ಕಾರಣ ಧಾನ್ಯಗಳು ಮತ್ತು ಸಕ್ಕರೆಯ ಬೆಲೆಗಳಲ್ಲಿ ಆಗಿರುವ ತೀವ್ರ ಹೆಚ್ಚಳ. ಅಮೆರಿಕಾದಲ್ಲಿ ಬರ ಧಾನ್ಯಗಳ ಬೆಳೆಗಳನ್ನು ತಟ್ಟಿದ್ದರೆ, ರಶ್ಯಾದಲ್ಲಿ ಕೃಷಿ ನರೀಕ್ಷೆ ಇಳಿದಿದ್ದು ಗೋದಿ ಬೆಲೆಗಳನ್ನು ತಟ್ಟಿದೆ, ಭಾರತ, ಬ್ರೆಝಿಲ್ ಮತ್ತು ಆಸ್ಟ್ರೇಲಿಯಾದ ಹವಾಮಾನ ಸಮಸ್ಯೆಗಳು ಸಕ್ಕರೆ ಬೆಲೆಗಳನ್ನು ಏರಿಸಿವೆ ಎಂದು ಎಫ್ಎಒ ಹೇಳಿದೆ. ●

ಭಾರತದ ಒಲಿಂಪಿಕ್ಸ್ ಫಲಿತಾಂಶ.....

ಪುಟ 9 ರಿಂದ

ಗಮನಿಸಬೇಕು. ಸ್ವಲ್ಪ ಮಟ್ಟಿಗೆ ಸಾಂಪ್ರದಾಯಿಕವಾಗಿ ಫೆಡರೇಶನಿನ ಅಧಿಕಾರಶಾಹಿ ರಾಜಕೀಯದಷ್ಟೇ, ಸಾಮುದಾಯಿಕ ನೆಲೆ 1980 ರ ದಶಕದ ನಂತರ ಕುಗ್ಗಿರುವುದು ಹಾಕಿಯ ಅವನತಿಗೆ ಕಾರಣ ಎಂಬುದನ್ನು ಗಮನಿಸಬೇಕು. ಕ್ರಿಕೆಟಿಗೆ ಇರುವ ವ್ಯಾಪಕ ಸಾಮುದಾಯಿಕ ನೆಲೆಯನ್ನು ಆಯ್ದ ಆಟೋಟಗಳಿಗೆ ವ್ಯವಸ್ಥಿತವಾಗಿ ಒದಗಿಸುವುದು ಅಗತ್ಯ.

ಬರಿಯ ಜಿಡಿಪಿ, ಬೆಳವಣಿಗೆ ದರ ಒಟ್ಟಾರೆ ಅಭಿವೃದ್ಧಿ ಸಾಧಿಸುವುದಿಲ್ಲವೋ, ಹಾಗೇ ಕ್ರೀಡಾ ಅಭಿವೃದ್ಧಿಯನ್ನೂ ಸಾಧಿಸುವುದಿಲ್ಲ. ಸಾಮಾನ್ಯವಾಗಿ ಅಂದು ಕೊಂಡಿರುವಂತೆ, ಭಾರತ ಕ್ರೀಡೆ ಮೇಲೆ ಹೆಚ್ಚು ಖರ್ಚು ಮಾಡಿಲ್ಲ ಎಂಬುದು ನಿಜವಲ್ಲ. 83 ಸ್ಪರ್ಧಿಗಳನ್ನು ಲಂಡನಿಗೆ ಕಳಿಸಿತ್ತು. ಭಾರತದ ಒಲಿಂಪಿಕ್ಸ್ ಬಜೆಟ್ ಕಡಿಮೆಯೇನಿಲ್ಲ. ಒಟ್ಟಾರೆ ಕ್ರೀಡಾ ಬಜೆಟ್ ಸಹ ಕಡಿಮೆಯೇನಿಲ್ಲ. ಕ್ರಿಕೆಟ್ ಅದರ ಸಿಂಹಪಾಲು ಕಬಳಿಸುತ್ತಿದೆ ಎಂಬುದೂ ನಿಜ. ಆದರೆ ಮುಖ್ಯ ಕೊರತೆ ಇರುವುದು ಒಂದು ಸಮಗ್ರ ಕ್ರೀಡಾ ನೀತಿಯದ್ದು. ಒಂದು ಸಮಗ್ರ ನೀತಿ ಇಲ್ಲದೆ, ಕ್ರೀಡೆಗೆ ಸರ್ಕಾರಿ ಅಥವಾ ಕಾರ್ಪೊರೆಟ್ ಪ್ರಾಯೋಜನೆ ಮೂಲಕ ಬರಿಯ ಹಣ ಸುರಿಯುವುದು ಉಪಯೋಗವಿಲ್ಲ ಎಂಬುದು ಸ್ಪಷ್ಟ. ಖಾಸಗಿ ಅಥವಾ ಕಾರ್ಪೊರೆಟ್ ಪ್ರಾಯೋಜನೆ ಸಹ ವ್ಯಾಪಕ ಸಾಮುದಾಯಿಕ ನೆಲೆ ಇರುವ ಆಟೋಟಗಳಿಗೆ ಬರುತ್ತದೆ.

ಆದ್ಯತೆ ಕೊಡಬೇಕಾದ ಆಟೋಟಗಳ ಆಯ್ಕೆ ಮತ್ತು ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ ಮಟ್ಟದ ವರೆಗೆ ಸಮಗ್ರ ಯೋಜನೆ; ಕ್ರೀಡೆಯನ್ನು ಶಿಕ್ಷಣದ ಅವಿಭಾಜ್ಯ ಅಂಗವಾಗಿಸುವುದು; ಶಾಲೆ-ಕಾಲೇಜು ಮತ್ತು ಸ್ಥಳೀಯ ಸಮುದಾಯಗಳಲ್ಲಿ ಆಯ್ದ ಆಟೋಟಗಳಿಗೆ ಪರಿಕರಗಳ ವ್ಯವಸ್ಥೆ; ಯುವಜನ ಸೇವೆ ಮತ್ತು ಅಭಿವೃದ್ಧಿ ವಿಭಾಗದ ಮೂಲಕ ಯೋಜನೆಯ ಅನುಷ್ಟಾನ; ಈ ಆಟೋಟಗಳಿಗೆ ಸತತ ಸ್ಥಳೀಯ ಮತ್ತು ಹಲವು ಮಟ್ಟಗಳ ಸ್ಪರ್ಧೆಗಳ ವ್ಯವಸ್ಥೆ; ಈ ಹಲವು ಮಟ್ಟಗಳಿಂದ ನಿಪುಣ ಆಟಗಾರರ ಆಯ್ಕೆ; ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟಗಳಲ್ಲಿ ಹೆಚ್ಚಿನ ತರಬೇತಿಗೆ ವ್ಯವಸ್ಥೆ; ಮಾಜಿ ಮತ್ತು ನಿಪುಣ ಆಟಗಾರರು ನಡೆಸುವ ಆಟೋಟ ಕ್ಲಬ್ಬುಗಳು ಮತ್ತು ಫೆಡರೇಶನುಗಳು ಸ್ಥಾಪನೆ; ಅವನ್ನು ಪಾರದರ್ಶಕವಾಗಿ ಅಧಿಕಾರಶಾಹಿ ಮತ್ತು ರಾಜಕಾರಣಿ ಮುಕ್ತಗೊಳಿಸಲು ವ್ಯವಸ್ಥೆ- ಇವು ಅಂತಹ ಸಮಗ್ರ ಕ್ರೀಡಾ ನೀತಿಯ ಪ್ರಮುಖ ಅಂಶಗಳು. ●

ಮರೆಯಲಿ ಹ್ಯಾಂಗ ಮಾವೋ ತ್ಸೇ ತುಂಗ

ಪುಟ 16 ರಿಂದ

ಸಂಘಟನೆಗಳಲ್ಲಿ ದೈಹಿಕ ಶಿಕ್ಷಣ ಅವಿಭಾಜ್ಯ ಅಂಗವಾಯಿತು. ರೈತ ಚಳುವಳಿಯ ನಾಯಕರಿಗಾಗಿ ಸಂಘಟಿಸಿದ ಅಧ್ಯಯನ ಶಿಬಿರದಲ್ಲಿಯೂ ಪ್ರತಿ ದಿನ ಬೆಳಗ್ಗೆ ವ್ಯಾಯಾಮದ ನಂತರವೇ ಉಪನ್ಯಾಸಗಳು.

ನದಿಗಳ, ಸರೋವರಗಳ ಈಜು ಅವರ ನಿತ್ಯ ಬದುಕಿನ ಭಾಗವಾಯಿತು. ದೇಶದ, ಹಾಗೂ ಚಳುವಳಿಯ ಸಮಸ್ಯೆಗಳ ಬಗ್ಗೆ ಚಿಂತಿಸಿ ಪರಿಹಾರ ಕಂಡುಕೊಳ್ಳಲು ಅವರು ಈಜಿನ ಮೊರೆ ಹೋಗುತ್ತಿದ್ದರು. ಅವರು ತಮ್ಮ ಈ ಸಾಹಸ ಚಟುವಟಿಕೆಗಳಿಂದ ಎಂತಹ ದೈಹಿಕ ಸಾಮರ್ಥ್ಯವನ್ನು ಉಳಿಸಿ ಕೊಂಡಿದ್ದರೆಂದರೆ ತಮ್ಮ ಇಳಿವಯಸ್ಸಿನಲ್ಲಿ ಅರವತ್ತ ಮೂರನೇ ವಯಸ್ಸಿನಿಂದ ಎಪ್ಪತ್ತ ಮೂರನೇ ವಯಸ್ಸಿನವರೆಗೆ ಎಂಟು ಬಾರಿ ಚೀನಾದ ಪ್ರಸಿದ್ಧ ನದಿಯಾದ ಯಾಂಗ್ ತ್ಸೆ ನದಿಯ ಅತ್ಯಂತ ವಿಸ್ತಾರವಾದ ನಾಲ್ಕು ಮೈಲಿಗಳ ಹರವಿನಲ್ಲಿ ಎದುರು ದಡವನ್ನು ತಲುಪಿ ಮರಳಿ ಬಂದರು. ಇದಂತೂ ಚೀನಾದಲ್ಲಿ ಒಂದು ದಂತ ಕತೆಯಾಗಿದೆ. ಈ ಮೇಲೆ ನೀಡಿದ ಅವರ ಕವನದಲ್ಲಿ ಅಂದು ಮಾವೋ ಕಂಡ ಕನಸು (1919 ರಲ್ಲಿಯೇ ಅಂದಿನ ಚೀನಾ ನಾಯಕ ಸನ್ ಯಾತ್ ಸೆನ್‌ರವರು ಕೂಡ ಈ ಪ್ರಮಾಣದ್ದಲ್ಲವಾದರೂ ಇಂತಹದೊಂದು ಕನಸು ಕಂಡಿದ್ದರು.) ಇತ್ತೀಚೆಗೆ ನಿಜವಾಗಿದೆ. ಜಗತ್ತಿನಲ್ಲೇ ಅತಿ ದೊಡ್ಡ ಜಲಾಶಯ 'ತ್ರೀ ಗೋರ್ಜಸ್' ಅಣೆಕಟ್ಟು ಎಂಬ ಹೆಸರಿನಲ್ಲಿ ನಿರ್ಮಾಣವಾಗಿದೆ. 660 ಕಿ.ಮೀ. ಉದ್ದದ, 1.2 ಕಿ.ಮೀ. ಅಗಲದ ಅಣೆಕಟ್ಟು 22,500.ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುತ್ತಿದೆ.(ಕರ್ನಾಟಕದ ಈಗಿನ ಒಟ್ಟು ಉತ್ಪಾದನೆ 7,000 ಮೆಗಾವ್ಯಾಟ್ ಗೆ ಹೋಲಿಸಿ)

ಮುಂದೆ ಹುನಾನ್ ರಾಜ್ಯದಲ್ಲಿ ಹಳ್ಳಿ ಹಳ್ಳಿಗೆ ಸುತ್ತಿ ರೈತ ಚಳುವಳಿ ಕಟ್ಟುವಾಗ, ಹುನಾನ್ ಹಾಗೂ ಪಕ್ಕದ ಜಿಂಗ್ಯಾಂಗ್ ಶಾನ್ ರಾಜ್ಯದ ನಡುವಣ ಬೆಟ್ಟ ಗುಡ್ಡಗಳಲ್ಲಿ ಕೆಂಪು ಸೈನ್ಯದ ನೆಲೆಯನ್ನು ರೂಪಿಸುವಾಗ ಕಷ್ಟಜೀವಿಯ ಈ ಸಾಹಸಗಳು ಕಮ್ಯುನಿಸ್ಟ್ ಚಳುವಳಿಗೆ ದೊಡ್ಡ ಆಸ್ತಿಯಾಗಿ ಪರಿಣಮಿಸಿತು. ಎಲ್ಲಕ್ಕಿಂತ ಮಿಗಿಲಾಗಿ ಕ್ರೂರ ಪಾಳೆಯಗಾರಿ ಯುದ್ಧಕೋರರ ಸೈನ್ಯ ಬೆಂಬತ್ತಿ ಬರುವಾಗ ಕಾಡು ಮೇಡು ಅಲೆದು, ಹದಿಮೂರು ಸಾವಿರ ಅಡಿಯ ಶಿಖರ, ಕಣಿವೆಗಳನ್ನು ಏರಿ ಇಳಿದು "ಲಾಂಗ್ ಮಾರ್ಚ್" ಕೈಗೊಳ್ಳಲು ಸಹಾಯಕವಾಯಿತು. ಹೀಗೆ ಕೆಂಪು ಸೈನ್ಯದ ಶಕ್ತಿಯನ್ನುಳಿಸಿಕೊಳ್ಳಲು ಈ ಅನುಭವ ಕ್ರಾಂತಿಯ ನಿರ್ಣಾಯಕ ಗಳಿಗೆಯಲ್ಲಿ ಕೆಂಪು ಸೈನ್ಯದ ಶಕ್ತಿಯನ್ನುಳಿಸಿಕೊಳ್ಳಲು ಅಪೂರ್ವ ಕೊಡುಗೆ ನೀಡಿತು.

ಚೀನಾದ ಒಲಂಪಿಕ್ ಸಾಧನೆಯ ಹಿನ್ನಲೆಯಲ್ಲಿ ಮಾವೋ

ಮಾವೋರವರು ಮಾರ್ಕ್ಸ್‌ವಾದಿಯಾಗುವ ಬಹಳ ಮೊದಲೇ ಇನ್ನೂ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಅಂದರೆ 1910ರಲ್ಲಿ ದೈಹಿಕ ಶಿಕ್ಷಣದ ಅವಶ್ಯಕತೆ ಬಗ್ಗೆ ಬರೆದ ಲೇಖನ ಇಂದಿಗೂ ಕೂಡ ಪ್ರಸ್ತುತವಾಗಿದೆ.

"ದೈಹಿಕ ಶಿಕ್ಷಣ ಮೌಲ್ಯಗಳ ಹಾಗೂ ಜ್ಞಾನದ ಬಗೆಗಿನ ಶಿಕ್ಷಣಕ್ಕೆ ಪೂರಕ. ಮೌಲ್ಯಗಳು ಹಾಗೂ ಜ್ಞಾನಕ್ಕೆ ದೇಹವೇ ನೆಲೆವನೆ. ಶರೀರವಿಲ್ಲದೆ ಜ್ಞಾನವೂ ಇಲ್ಲ. ಮೌಲ್ಯಗಳೂ ಇಲ್ಲ.ಶರೀರವೆಂಬುದು ಜ್ಞಾನವನ್ನು ಹೊರುವ ರಥ. ಇದನ್ನು ಅರ್ಥ ಮಾಡಿಕೊಂಡಿರುವವರು ಬಹಳ ವಿರಳ.... ಈಗ ಬಹಳ ಜನ ಜ್ಞಾನಕ್ಕೆ ವಿಪರೀತ ಒತ್ತು ಕೊಡುತ್ತಾರೆ. ದೇಹವು ಬಲಯುತವಾಗಿದ್ದರೆ ಜ್ಞಾನ ಹಾಗು ನೈತಿಕತೆಯಲ್ಲಿ ಇನ್ನೂ ವೇಗವಾಗಿ ಪ್ರಗತಿ ಹೊಂದಬಹುದು.... ಸಬಲವಾದ ಶರೀರವು ಭಾವನೆಗಳನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ. ಮನುಷ್ಯನ ನಿರ್ಧಾರ ಕೈಗೊಳ್ಳುವ ಶಕ್ತಿಯನ್ನು ಬಲಪಡಿಸುತ್ತದೆ."

"ವ್ಯಾಯಮವನ್ನು ಇಷ್ಟಪಡದಿರಲು ಕಾರಣಗಳು ಹಲವು.

1.ಸ್ವಯಂ ತಿಳುವಳಿಕೆ ಇಲ್ಲದಿರುವುದು : ವ್ಯಾಯಮಗಳ ಏಕೆ, ಹೇಗೆಗಳ ಬಗೆಗಿನ ಅರಿವೇ ಸ್ವಯಂ ತಿಳುವಳಿಕೆ.

2. ಧೀರ್ಘ ಕಾಲದಿಂದ ಮೈಗೂಡಿದ ಅಭ್ಯಾಸವನ್ನು ಬದಲಾಯಿಸಿಕೊಳ್ಳದಿರುವುದು.

3. ವ್ಯಾಯಮದ ಬಗ್ಗೆ ಒತ್ತು ಕೊಟ್ಟು ಹರಡದಿರುವುದು.

4. ವ್ಯಾಯಮ ಮಾಡುವುದು ಅವಮಾನಕರವೆಂದು ಭಾವಿಸುವುದು. ವ್ಯಾಯಮ ಮಾಡಲು ನಾಚಿಕೆ ಪಟ್ಟುಕೊಳ್ಳುವುದು. "

"ಮನುಷ್ಯನೂ ಒಂದು ಪ್ರಾಣಿಯಾಗಿರುವುದರಿಂದ ಚಲನೆ ಬಹಳ ಮುಖ್ಯ. ಅವನು ವಿಚಾರ ಶಕ್ತಿಯುಳ್ಳ ಪ್ರಾಣಿಯಾಗಿರುವುದರಿಂದ ಅವನ ಚಲನೆಗಳಿಗೆ ಅವಶ್ಯವಾಗಿ ಕಾರಣಗಳಿರಲೇ ಬೇಕು...... ಆದ್ದರಿಂದ ಒಬ್ಬರ ಶಾರೀರಿಕ ಶಕ್ತಿಯ ಬೆಳವಣಿಗೆ ಒಂದು ಅಂತರಿಕ ವಿಷಯ. ಬಲವು ನಿತ್ಯ ಅಭ್ಯಾಸವನ್ನು ಅವಲಂಬಿಸಿದೆ. ನಿತ್ಯ ಅಭ್ಯಾಸವು ಸ್ವಯಂ ಅರಿವನ್ನು ಅವಲಂಬಿಸಿದೆ. "

ನಾವು ದೈಹಿಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾದರೆ ನಾವು ದೈಹಿಕ ಶಿಕ್ಷಣದ ಬಗ್ಗೆ ಜನರ ವೈಯುಕ್ತಿಕ ದೃಷ್ಟಿಕೋನದ ಮೇಲೆ ಪ್ರಭಾವ ಬೀರಲೇಬೇಕು. ಅವರನ್ನು ದೈಹಿಕ ಶಿಕ್ಷಣದ ಬಗ್ಗೆ ಪ್ರಜ್ಞಾವಂತರಾಗುವಂತೆ ಉದ್ದೀಪಿಸಬೇಕು. "

ಹೀಗೆ ಅಂದಿನಿಂದಲೇ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಒತ್ತು ನೀಡಿದ ಮಾವೋರವರು ತಮ್ಮ ಇಡೀ ಜೀವನದಲ್ಲಿ ಅನುಸರಿಸಿ ಒಂದು ಮಾದರಿಯನ್ನು ಹಾಕಿಕೊಟ್ಟರು. ಬೆಟ್ಟಗಳನ್ನೇರುವ, ಕಠಿಣ ಚಾರಣ ಕೈಕೊಳ್ಳುವ, ಎಂಭತ್ತರ ಇಳಿವಯಸ್ಸಿನಲ್ಲಿಯೂ ಈಸಾಡುವ ಅವರ ಉತ್ಸಾಹ ಹಾಗೂ ಚೀನಾದ ಕ್ರಾಂತಿಗೆ ಈ ಉತ್ಸಾಹ ನೀಡಿದ ಕಾಣಿಕೆಯನ್ನು ವಿವರಿಸಲಾಗಿದೆ. ಚೀನಾದ ಪಾಳೆಯಗಾರೀ ಯುದ್ಧಕೋರರ ದಂಡು ಎಡೆಬಿಡದೆ ಬೆಂಬತ್ತಿದ್ದ ಸನ್ನಿವೇಶದಲ್ಲಿಯೂ ಅವರು ತಮ್ಮ ದೈಹಿಕ ವ್ಯಾಯಾಮವನ್ನು ಬಿಡಲಿಲ್ಲ. ಮುಂದೆ ಚೀನಾದ ಚೇರ್‌ಮನ್ ಆಗಿ ಸಮಾಜವಾದಿ ಸಮಾಜದ ನಿರ್ಮಾಣದಲ್ಲಿ ಬಿಡುವಿಲ್ಲದೆ ದುಡಿಯುತ್ತಿದ್ದಾಗಲೂ ಅವರು ನಿತ್ಯ ಟೇಬಲ್ ಟೆನ್ನಿಸ್, ಬಾಕ್ಸಿಂಗ್, ಬೆಟ್ಟಗಳನ್ನೇರುವುದು ಅಥವಾ ವ್ಯಾಯಾಮವನ್ನು ಮಾಡದೆ ಇರುತ್ತಿರಲಿಲ್ಲ.



ಚೀನಾದ ಕ್ರಾಂತಿ ಅನೇಕ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ ಕೂಡ ಮಾವೋ ಇಡೀ ದೇಶಕ್ಕೆ "ದೈಹಿಕ ಶಿಕ್ಷಣವನ್ನು, ಕ್ರೀಡೆಗಳನ್ನು ಬೆಳೆಸಿ, ಜನರ ದೈಹಿಕ ರಚನೆಯನ್ನು ಬಲಪಡಿಸಿ" ಎಂಬ ಘೋಷಣೆ ನೀಡಿದರು. ಅವರ ನೇತೃತ್ವದಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ 1953 ರಲ್ಲಿ 'ದೈಹಿಕ ಶಿಕ್ಷಣದಲ್ಲಿ ಕರ್ತವ್ಯಗಳು' ಎಂಬ ನಿರ್ದೇಶನವನ್ನು ನೀಡಿತು.

ಆ ನಿರ್ದೇಶನದಲ್ಲಿ "ಜನರ ಆರೋಗ್ಯವನ್ನು ಉತ್ತಮಪಡಿಸುವುದು ಹಾಗೂ ಜನರ ಶರೀರ ರಚನೆಯನ್ನು ಬಲಪಡಿಸುವುದು ಪಕ್ಷದ ಒಂದು ಮುಖ್ಯ ಕೆಲಸ... ದೈಹಿಕ ಶಿಕ್ಷಣಕ್ಕೆ ಉತ್ತೇಜನ ಈ ಗುರಿಯನ್ನು ಸಾಧಿಸುವ ಅತ್ಯಂತ ಕ್ರಿಯಾಶೀಲ ಮತ್ತು ಪರಿಣಾಮಕಾರಿ ವಿಧಾನ, ಆದರೆ ಅಷ್ಟೇ ಅಲ್ಲ. ದೈಹಿಕ ಶಿಕ್ಷಣ ಜನರಲ್ಲಿ ಎದೆಗಾರಿಕೆ, ಧೃಡತೆ, ಹಾಗೂ ಸಾಮೂಹಿಕ ಭಾವನೆಯನ್ನು ಬೆಳೆಸುತ್ತದೆ. ದುಡಿಯುವ ಜನರಿಗೆ ಕಮ್ಯುನಿಸ್ಟ್ ತತ್ವಗಳ ಬಗ್ಗೆ ಶಿಕ್ಷಣ ನೀಡಲು ಒಂದು ಪ್ರಮುಖ ಸಾಧನ ಕೂಡ ಎಂದು ಸಾರಿತು. ಕ್ರೀಡೆಗಳಿಗೆ ಉತ್ತೇಜನ ನೀಡಲು ಸ್ವತಃ ಮಾವೋರವರೇ ಪ್ರತಿ ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳು, ಕಾರ್ಮಿಕರ, ರೈತರ ಕ್ರೀಡಾ ಸ್ಪರ್ಧೆಗಳಿಗೆ ಹಾಜರಾಗುತ್ತಿದ್ದರು.

ಅಲ್ಲಿಂದ ಇಲ್ಲಿಯವರೆಗೆ ನಿರಂತರವಾಗಿ ಅನೇಕ ಬಾರಿ ದೈಹಿಕ ಶಿಕ್ಷಣದ ಬಗ್ಗೆ ನೀತಿ ನಿರೂಪಣೆ ಮಾಡಲಾಗಿದೆ. ಚೀನಾ ಸರ್ಕಾರ ಮಾವೋರವರಿಗೆ ಸಂಬಂಧಿಸಿದ ಅನೇಕ ದಿನಾಚರಣೆಗಳನ್ನು ಜನರಲ್ಲಿ ದೈಹಿಕ ಶಿಕ್ಷಣದ ಬಗ್ಗೆ ಪ್ರೇಮವನ್ನು ಬೆಳೆಸಲು ಉಪಯೋಗಿಸುತ್ತಿದೆ. ಕೆಂಪು ಸೈನ್ಯದ 'ಲಾಂಗ್ ಮಾರ್ಚ್' ಹೆಸರಿನಲ್ಲಿ ಅನೇಕ ರಾಜ್ಯಗಳಲ್ಲಿ ಬೆಟ್ಟ ಹತ್ತುವ ಸ್ಪರ್ಧೆ, ಚಾರಣಗಳು ಇತ್ಯಾದಿ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಮಾವೋರವರು ಯಾಂಗ್ ತ್ಸೆ ನದಿಯನ್ನು ಈಜಿದ ದಿನದ ನೆನಪಿನಲ್ಲಿ ಪ್ರತಿ ವರ್ಷ ಹತ್ತಾರು ಸಾವಿರ ಜನರು ಅದೇ ಜಾಗದಲ್ಲಿ ಈಜಾಡುವುದು, ಚೀನಾದ ಎಲ್ಲ ನದಿಗಳಲ್ಲಿಯೂ ಈಜು. ಹೀಗೆ ಹತ್ತು ಹಲವು ಸಾಹಸದ ಚಟುವಟಿಕೆಗಳು. ಇತ್ತೀಚೆಗೆ ಮಾವೋರವರು 1952ರಲ್ಲಿ ದೈಹಿಕ ಶಿಕ್ಷಣದ ಬಗ್ಗೆ ನೀಡಿದ ಘೋಷಣೆಯ 60ನೇ ವರ್ಷಾಚರಣೆಯನ್ನು ಮಾಡಲಾಯಿತು. ಅಂದು ಚೀನಾದ ಪ್ರತಿ ರಾಜ್ಯದಲ್ಲಿಯೂ ಹತ್ತಾರು ಸಾವಿರ ಜನರು ವಿವಿಧ ಓಟಗಳು, ಇತರ ವ್ಯಾಯಾಮಗಳಲ್ಲಿ ಭಾಗವಹಿಸಿದರು.

JANASHAKTHI KANNADA VARA PATRIKE AUG 26, 2012 Price : Rs. 5/- RNI No. KARKAN
Postal Reg. No. RNP/KA/BGS/2078/2010-12 Posted at MBC Bangalore GPO

ಮರೆತೇನೆಂದರ ಮರೆಯಲಿ ಹ್ಯಾಂಗ ಮಾವೋ ತ್ಸೇ ತುಂಗ

ಜಿ.ಎನ್. ನಾಗರಾಜ್

ಇದೀಗ ತಾನೆ ಮುಗಿದ ಲಂಡನ್ ಒಲಂಪಿಕ್ಸ್‌ನಲ್ಲಿ ಚೀನಾ ದೇಶವು ಸುಮಾರು ದಿನಗಳ ಕಾಲ ಮೊದಲ ಸ್ಥಾನದಲ್ಲಿ ಮೆರೆದು ಕೊನೆಯ ದಿನಗಳಲ್ಲಿ ಮಾತ್ರವೇ ಅಮೇರಿಕಕ್ಕೆ ಆ ಸ್ಥಾನ ಬಿಟ್ಟು ಕೊಟ್ಟಿತು. ಬೀಜಿಂಗ್ ಒಲಂಪಿಕ್ಸ್‌ನಲ್ಲಿ ಚೀನಾ ಮೊದಲ ಸ್ಥಾನ ಗಳಿಸಿತ್ತು. ಚೀನಾದ ಈ ಕ್ರೀಡಾ ಯಶಸ್ಸಿನ ಹಿನ್ನೆಲೆ ಏನು ಎಂದು ಹುಡುಕಿದರೆ ಚೀನಾ ಕ್ರಾಂತಿಯ ನೇತಾರ ಮಾವೋ ಅವರ ಸಾಹಸಮಯ ಬಾಲ್ಯ, ಬದುಕು ಮತ್ತು ಆರೋಗ್ಯ ಪೂರ್ಣ ಸಮಾಜವೊಂದರಲ್ಲಿ ಕ್ರೀಡೆಗಳ ಮಹತ್ವವೇನೆಂದು ಮನಗಂಡಿದ್ದ ಅವರ ಸಮಾಜ ದೃಷ್ಟಿ ಇದೆಯೆಂಬುದು ಮಾವೋ ಅವರ ಬದುಕು ಹೋರಾಟಗಳನ್ನು ಅಧ್ಯಯನ ಮಾಡುವ ಯಾರಿಗಾದರೂ ಗೊತ್ತಾಗುವ ವಿಚಾರ.

ಭಾಗ 2

ಬೆಟ್ಟಗಳ ತುದಿಯಲ್ಲಿ ನಮ್ಮ ರಣ ಕಹಳೆಗಳು ಮೊಳಗುತ್ತಿವೆ

ಬೆಟ್ಟಗಳ ತುದಿಯಲ್ಲಿ ನಮ್ಮ ರಣ
ಕಹಳೆಗಳು ಮೊಳಗುತ್ತಿವೆ
ಬೆಟ್ಟಗಳ ತುದಿಯಲ್ಲಿ ನಮ್ಮ ರಣ
ಕಹಳೆಗಳು ಮೊಳಗುತ್ತಿವೆ
ಬೆಟ್ಟಗಳ ತಪ್ಪಲಿನಲ್ಲಿ ನಮ್ಮ
ಧ್ವಜಗಳು ಹಾರಾಡುತ್ತಿವೆ

– ಮಾವೋ

ಸೋಮಾರಿಗಳು ಈ ಕಠಿಣ ಕಣಿವೆ
ಕಬ್ಬಿಣದ ಗೋಡೆಯೆಂದು
ಕೊಚ್ಚಿಕೊಳ್ಳುತ್ತಾರೆ
ನಾವು
ಧೃಡವಾದ ನಡಿಗೆಯಿಂದ
ಶಿಖರವನ್ನು ದಾಟುತ್ತಿದ್ದೇವೆ
ನಾವು
ಶಿಖರವನ್ನು ದಾಟುತ್ತಿದ್ದೇವೆ

– ಮಾವೋ

ಈ ಜಗತ್ತಿನಲ್ಲಿ
ಕಠಿಣವೆಂಬುದು
ಯಾವುದೂ ಇಲ್ಲ
ಎತ್ತರಕ್ಕೆ
ಎತ್ತರಕ್ಕೆ ಏರುವ
ಛಾತಿಯಿದ್ದರೆ

–ಮಾವೋ

ಮಾವೋ ಕವನಗಳ ತುಂಬೆಲ್ಲಾ ಬೆಟ್ಟಗಳು, ಪರ್ವತಗಳು, ಗಿರಿ ಶಿಖರಗಳು. ಅವರ ಬದುಕಿನ ತುಂಬಾ ಕೂಡ ದುರ್ಗಮ ಗಿರಿ ಶಿಖರಗಳು.

ಮತ್ತು ಅದನ್ನು ಏರುವ ಛಾತಿ ಹಾಗೂ ಸಾಹಸಗಳು. ಈ ಸಾಹಸ ಅವರಿಗೆ ಬಾಲ್ಯದಿಂದಲೂ ದಕ್ಕಿದ ಹವ್ಯಾಸವಲ್ಲ, ಅಭ್ಯಾಸ. ಹುನಾನ್ ರಾಜ್ಯ ಬೆಟ್ಟ ಗುಡ್ಡಗಳ ನಾಡು. ಶಾವೋಶಾನ್ ಎಂಬ ಅವರ ಹಳ್ಳಿಯ ಹೆಸರಿನಲ್ಲಿಯೇ ಬೆಟ್ಟ ಅಡಗಿದೆ (ಶಾನ್ ಎಂದರೆ ಬೆಟ್ಟ ಎಂದರ್ಥ.) ತಾಯಿಗೆ ಧಾರ್ಮಿಕ ಆಚರಣೆಗಳಲ್ಲಿ ಆಳವಾದ ನಂಬಿಕೆ. ಬುದ್ಧ ಗುರುವಿನ ಪೂಜೆಗಾಗಿ ತಾಯಿಯೊಡನೆ ಬಾಲಕ ಮಾವೊ ಕೂಡ ಹಳ್ಳಿಯ ಬೆಟ್ಟವನ್ನು



ಹತ್ತಿದವರು. ಚೀನಾದ ವಿಶಿಷ್ಟ ಹಿರಿಯರ ಹಬ್ಬದ ದಿನ–ಫೆಬ್ರುವರಿಯಲ್ಲಿ ಬರುವ ಎರಡೊಂಬತ್ತರ ದಿನದಂದು (ಚೀನಾದ ಚಾಂದ್ರಮಾನ ವರ್ಷದ ಒಂಬತ್ತನೇ ತಿಂಗಳಿನ ಒಂಬತ್ತನೇ ದಿನ –ಎರಡೊಂಬತ್ತು ಬೆಟ್ಟಗಳನ್ನೇರಿ ಸುತ್ತೆಲ್ಲಾ ನೋಡುವ ಪದ್ಧತಿ.) ಇಡೀ ಹಳ್ಳಿಯುವರೊಡನೆ ಬೆಟ್ಟಗಳನ್ನು ಅಭ್ಯಾಸ. ಇನ್ನು ಆರನೇ ವರ್ಷದಲ್ಲಿಯೇ ಬೇಸಾಯದ ಬದುಕನ್ನು ಆರಂಭಿಸಿದ ಈ ಹಾಲುಗೆನ್ನೆಯ ಕೆಲಸಗಾರ ಮನೆಯ ದನ ಎಮ್ಮೆಗಳನ್ನು ಮೇಯಿಸಲು ಮನೆಗೆ ಹತ್ತಿದಂತೆಯೇ ಇದ್ದ ಬೆಟ್ಟವನ್ನು ಎಷ್ಟು ಬಾರಿ ಹತ್ತಿ ಇಳಿದಿದ್ದಾರೋ !

ಏಳನೆಯ ವಯಸ್ಸಿನಲ್ಲಿ ಅವರು ಶಾಲೆಗೆ ಸೇರಿದ ಮೇಲೆ ಒಮ್ಮೆ ಹೊಡೆತ ಬಡಿತಗಳಿಗೆ ಹೆಸರಾಗಿದ್ದ ಶಿಕ್ಷಕರನ್ನು ಧಿಕ್ಕರಿಸಿ ನಂತರ ಮನೆಯಿಂದ ಓಡಿ ಹೋಗುವ ಪ್ರಸಂಗ ಬಂತು. ದೂರದ ಪಟ್ಟಣಕ್ಕೆಂದು ಹೊರಟು ದಾರಿ ತಪ್ಪಿ ಮೂರುದಿನಗಳ ಕಾಲ ಅವರ ಊರ ಸುತ್ತಲ ಬೆಟ್ಟ ಗುಡ್ಡಗಳಲ್ಲಿ ಅಲೆದಾಡಿದರು. ಇಪ್ಪತ್ತೈದು ಕಿ.ಮೀ.ಗಳ ದೂರದ ತಾಯಿಯ ತವರುಮನೆಗೆ ನಡೆದೇ ಹೋಗುತ್ತಿದ್ದರು.

ಈಜು

ನಾನು ಈಗ ತಾನೇ ಚಾಂಗ್
ಶಾದ ನೀರು ಕುಡಿದು
ವುಚ್ಯಾಂಗ್‌ನ ಮೀನು ತಿನ್ನಲು
ಬಂದಿದ್ದೇನೆ.
ಈಗ ಯಾಂಗ್ ತ್ಸೇ ನದಿಯ
ಹರವಿನುದ್ದಕ್ಕೂ ಈಸುತ್ತಿದ್ದೇನೆ.
ದೂರದ ಚು ನ ಆಗಸದ
ಬಯಲಿನತ್ತ ದಿಟ್ಟಿ ನೆಟ್ಟಿದ್ದೇನೆ

(ಇಲ್ಲಿರುವ ನಾಲ್ಕು ಚೀನೀ ಹೆಸರುಗಳು ಚೀನಾದ ನಾಲ್ಕು ಪ್ರದೇಶಗಳ ಹೆಸರುಗಳು – ಮಾವೋರವರ ವಿಶಾಲ ದೃಷ್ಟಿಯ ಸಂಕೇತಗಳು.)

ಗಾಳಿ ಬೀಸಲಿ, ಅಲೆಗಳೆದ್ದು ಬಡಿಯಲಿ,
ಬಂಗಲೆಯೊಂದರ ಅಂಗಳದಲ್ಲಿ
ಆಲಸ್ಯದಿಂದ ಹೆಜ್ಜೆ ಹಾಕುತ್ತಾ
ನಡೆದಾಡುವುದಕ್ಕಿಂತಾ
ಇದು ಬಹಳ ಒಳ್ಳೆಯದು.
ನಾನಿಂದು ಬಹಳ ಆರಾಮವಾಗಿದ್ದೇನೆ.
ಗಾಳಿಯೊಂದಿಗೆ ನಾವೆಯ ಪಟಗಳು
ಚಲಿಸುತ್ತವೆ
ಆಮೆಗಳು, ಹಾವುಗಳು ನಿಶ್ಚಲವಾಗಿ
ನಿಂತಿವೆ.
ಬೃಹತ್ ಯೋಜನೆಗಳು ರೂಪು
ತಳೆಯುತ್ತಿವೆ
ರಭಸದ ಜಲಪಾತಗಳಲ್ಲಿ
ಶಾಂತವಾದ ಸರೋವರವೊಂದು
ಆಕಾರ ಪಡೆಯುವಂತೆ
ವುಶಾನಿನ
ಮೋಡಗಳನ್ನು, ಮಳೆಯನ್ನು
ತಡೆ ಹಿಡಿಯಲು
ಕಲ್ಲಿನದೊಂದು ಗೋಡೆ
ನದಿಯ ಮೇಲುದಂಡೆಯ ಮೇಲೆ
ಕಟ್ಟಲ್ಪಡುತ್ತದೆ.
ಪರ್ವತ ದೇವತೆ, ಅವಳಿನ್ನೂ ಇದ್ದರೆ
ಬದಲಾದ ಜಗತ್ತನ್ನು ನೋಡಿ
ಅಚ್ಚರಿಗೊಳ್ಳುತ್ತಾಳೆ.

– ಮಾವೋ

ಮಾವೋರವರ ಕವನಗಳ ಮತ್ತೊಂದು ವಸ್ತು ನದಿ ಮತ್ತು ಈಜು. ಹಾಗೆಯೇ ಮಾವೊರವರ ಜಲ ಸಾಹಸಗಳೂ ಬಹಳ ಪ್ರಸಿದ್ಧ. ಮನೆಯ ಹಿಂದೆ ಬೆಟ್ಟವಾದರೆ ಮನೆಯ ಮುಂದೆ ಎರಡು ಕೊಳಗಳು. ಚಿಕ್ಕಂದಿನಲ್ಲಿಯೇ ನೀರಲ್ಲಿ ಈಸಾಡುತ್ತಲೇ ಬೆಳೆದ ಮಾವೊರವರು ಹುನಾನ್ ರಾಜ್ಯದ ರಾಜಧಾನಿ ಚಾಂಗ್ ಶಾದಲ್ಲಿ ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾಗ ನದಿಯಲ್ಲಿ ಈಸಾಡುತ್ತ ಜೊತೆಯ ಸಹಪಾಠಿಗಳಿಗೆ ಬುದ್ಧಿಬಲದ ಜೊತೆಗೆ ದೈಹಿಕ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಅಗತ್ಯವನ್ನು ಮನಗಾಣಿಸಿಕೊಡುತ್ತಿದ್ದರು. ಒಬ್ಬ ಸಹಪಾಠಿಯೊಂದಿಗೆ ಇಡೀ ಹುನಾನ್ ರಾಜ್ಯವನ್ನೆಲ್ಲಾ ಕಾಲ್ನಡಿಗೆಯಲ್ಲಿಯೇ ಸುತ್ತಿದರು. ಹುನಾನ್ ರಾಜ್ಯದ ಗಿರಿ ಶಿಖರಗಳನ್ನು ಹತ್ತಿ ಇಳಿದರು. ಮುಂದೆ ಚಾಂಗ್ ಶಾದಲ್ಲಿ ಅವರು ಕಟ್ಟಿದ ಯುವಕರ ಸಂಘಟನೆಗಳಲ್ಲಿ, ಇತರ

ಪುಟ 15ಕ್ಕೆ



ಐತಿಹಾಸಿಕ 'ಲಾಂಗ್ ಮಾರ್ಚ್'ನಲ್ಲಿ ಕೆಂಪುಸೇನೆಯ ಸಂಗಾತಿಗಳೊಂದಿಗೆ ಬೆಟ್ಟ ಏರುತ್ತಿರುವ ಮಾವೋ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12: 18th Cross, S.R.Nagar, BANGALORE - 560027
Editor : S.Y.GURUSHANTH